॥ ಶ್ರೀಯೈ ನಮಃ ॥



ಶ್ರೀಮತೇ ರಾಮಾನುಜಾಯ ನಮಃ ।
ಶ್ರೀಮತೇ ನಿಗಮಾಂತ ಮಹಾ ದೇಶಿಕಾಯ ನಮಃ ।
ಶ್ರೀಮದ್ವರವರ ಮುನಯೇ ನಮಃ ।

ಶ್ರೀ ಭಗವದ್ರಾಮಾನುಜ ವಿಜಯ ಸಂಚಿಕೆ,
ಉಪಯುಕ್ತಾಂಶ ಸಂಗ್ರಹ, ಸಂಚಿಕೆ—೨.

ತೆಂಗಲೆ ಮತ್ತು ವಡಗಲೆ ಸಂಪ್ರದಾಯ
ಯಜುರ್ವೇದ ಶ್ರೀವೈಷ್ಣವ

# ನಿತ್ಯ ನೈಮಿತ್ತಿಕಾಹ್ನಿಕ ಕ್ರಮ

(೨ನೇ ಭಾಗ)

ಈ ಪುಸ್ತಕದಲ್ಲಿ ತ್ರಿಕಾಲ ಸಂಧ್ಯಾವಂದನೆ ಮೊದಲಾದ
ನಿತ್ಯಕರ್ಮಗಳೂ ಮತ್ತು ಇತರ ಮುಖ್ಯ
ವಿಷಯಗಳೂ ಅಡಕವಾಗಿವೆ.

ಲೇಖಕರು

ಮೇಲುಕೋಟೆ ಕುಮಾರ ಸಿಂಗರಾಚಾರ್ಯರು.

ಮೈಸೂರು
ಬೆಂಗಳೂರುಪ್ರೆಸ್ ಬ್ರಾಂಚಿನಲ್ಲಿ ಮುದ್ರಿಸಲ್ಪಟ್ಟಿತು.
1947

Price { White Paper 1-2-0 / Buff Paper 1-0-0

ಕ್ರಯ { ಬಿಳಿ ಕಾಗದ 1-2-0 / ಬಫ್ ಕಾಗದ 1-0-0

ಬೆಂಗಳೂರು ಪ್ರೆಸ್ ಬ್ರಾಂಚ್,
ಮೈಸೂರು.

# ವಿಷಯಾನುಕ್ರಮಣಿಕೆ


**೧ ನೇ ಪರಿಚ್ಛೇದ, ನಿತ್ಯಾಹ್ನಿಕ ಕ್ರಮಗಳು.** ಪುಟ

1 ಪ್ರಾತಸ್ಸಂಧ್ಯಾವಂದನಕ್ರಮ .. 1
2 ಮಾಧ್ಯಾಹ್ನಿಕ ಕ್ರಮ .. 12
3 ಸಾಯಂಸಂಧ್ಯಾವಂದನ ಕ್ರಮ .. 14
4 ನಿಯಮಗಳು ಮತ್ತು ಇತರ ಮುಖ್ಯವಿಷಯಗಳು .. 16
5 ಓಂಕಾರ ಗಾಯತ್ರೀ ತತ್ತ್ವಾರ್ಥ .. 33
6 ದೇವ ಋಷಿ ಪಿತೃ ತರ್ಪಣ ಕ್ರಮ .. 34
7 ಔಪಾಸನ ಕ್ರಮ .. 37
8 ಸಮಿದಾಧಾನ ಕ್ರಮ .. 41
9 ಬ್ರಹ್ಮಯಜ್ಞ ಕ್ರಮ .. 44

**೨ ನೇ ಪರಿಚ್ಛೇದ, ನೈಮಿತ್ತಿಕಾಹ್ನಿಕ ಕ್ರಮಗಳು.**

1 ನೂತನ ಯಜ್ಞೋಪವೀತ ಧಾರಣ ಕ್ರಮ .. 46
2 ಉಪಾಕರ್ಮ ಕ್ರಮ .. 49
3 ವರ್ಗದ್ವಯ ಪಿತೃತರ್ಪಣ ಕ್ರಮ .. 53
4 ಪುಣ್ಯಾಹವಾಚನ ಕ್ರಮ .. 61
5 ಪ್ರಥಮೋಪಾಕರ್ಮ ಗಾಯತ್ರೀ ಮಂತ್ರ ಹೋಮ ಕ್ರಮ 64

**೩ ನೇ ಪರಿಚ್ಛೇದ, ಇತರ ಮುಖ್ಯವಿಷಯಗಳು.**

1 ಧರ್ಮ ಭೂತಜ್ಞಾನ ಸಂಗ್ರಹ .. 66
2 ಭಗವಂತನ ದಿವ್ಯ ಗುಣಗಳು .. 70
3 ತತ್ತ್ವ ಸಂಶಯ ನಿವಾರಣೆ .. 71
4 ತತ್ತ್ವ ಜ್ಞಾನ ಸಂಗ್ರಹ .. 72
5 ಸನಾತನ ಆರ್ಯ ಧರ್ಮ (English) 1 to 20

# ವೈಶ್ವದೇವಾನುಷ್ಠಾನ ಕ್ರಮ

## ವಡಕಲೆಯವರ ಸಂಪ್ರದಾಯ

ಪ್ರತಿ ಒಂದು ಕರ್ಮವನ್ನು ಮಾಡುವಾಗ ಸಂಕಲ್ಪ ಮಾಡುವ ಮುನ್ನ ಈ ಕೆಳಗೆ ಬರೆದಿರುವ ತನಿಯನ್ ಮುಂತಾದವುಗಳನ್ನು ವಡಕಲೆ ಸಂಪ್ರದಾಯದವರು ಉಚ್ಚರಿಸುವುದುಂಟು.

" ಶ್ರೀಮಾನ್ ವೇಂಕಟನಾಥಾರ್ಯಃ ಕವಿತಾರ್ಕಿಕ ಕೇಸರೀ ।
ವೇದಾಂತಾಚಾರ್ಯವರ್ಯೋ ಮೇ ಸನ್ನಿಧತ್ತಾಂ ಸದಾ ಹೃದಿ ॥
ಗುರುಭ್ಯಸ್ತದ್ಗುರುಭ್ಯಶ್ಚ ನಮೋವಾಕಮಧೀಮಹೇ * ।
ವೃಣೀಮಹೇ ಚ ತತ್ರಾದ್ಯೌ ದಂಪತೀ ಜಗತಾಂ ಪತೀ ॥
ಸ್ವಶೇಷಭೂತೇನ ಮಯಾ ಸ್ವೀಯೈಃ ಸರ್ವಪರಿಚ್ಛದೈಃ ।
ವಿಧಾತುಂ ಪ್ರೀತಮಾತ್ಮಾನಂ ದೇವಃ ಪ್ರಕ್ರಮತೇ ಸ್ವಯಮ್ ॥ "

### ಸಾತ್ತ್ವಿಕತ್ಯಾಗ

† " ಭಗವಾನೇವ ಸ್ವಕೀಯೇನಾತ್ಮನಾ ಕರ್ತ್ರಾ ಸ್ವಕೀಯೈಶ್ಚ ಉಪಕರಣೈಃ ಸ್ವಾರಾಧನೈಕ ಪ್ರಯೋಜನಾಯ ಪರಮ ಪುರುಷಃ (ಸರ್ವೇಶ್ವರೇಶ್ವರಃ) ಸರ್ವಶೇಷೀ ಸ್ವಶೇಷಭೂತಮಿದಂ ______ ಕರ್ಮ ಸ್ವಸ್ಮೈ ಸ್ವಪ್ರೀತಯೇ ಸ್ವಯಮೇವ ಕಾರಯತಿ " ॥ ಎಂದು ಪ್ರಾರಂಭದಲ್ಲೂ; ಇದನ್ನೇ " ಕಾರಿತವಾನ್ [ ಅನೇನ ಭಗವತ್ಕರ್ಮಣಾ ಭಗವಾನ್ ಪ್ರೀಯತಾಂ ವಾಸುದೇವಃ ] " ಎಂದು ಕರ್ಮದ ಕೊನೆಯಲ್ಲಿಯೂ ಉಚ್ಚರಿಸಬೇಕು.

---

* " ಧೀಮಹೇ " ಎಂದೂ ಉಚ್ಚರಿಸುವುದುಂಟು. † [illegible] ______ [illegible] " ಎಂದು [illegible]

# ಪ್ರಶಸ್ತಿಪತ್ರ

॥ ಶ್ರೀಮತೇ ರಾಮಾನುಜಾಯ ನಮಃ ॥

**"ನಮೋ ಬ್ರಹ್ಮಣ್ಯದೇವಾಯ ಗೋಬ್ರಾಹ್ಮಣಹಿತಾಯ ಚ ।
ಜಗದ್ಧಿತಾಯ ಕೃಷ್ಣಾಯ ಗೋವಿಂದಾಯ ನಮೋ ನಮಃ ॥"**

**"ನಹಿದೇಹಭೃತಾಶಕ್ಯಂ ತ್ಯಕ್ತುಂ ಕರ್ಮಾಣ್ಯಶೇಷತಃ"**

ಎಂದು ಶ್ರೀ ಕೃಷ್ಣ ಪರಮಾತ್ಮನು ಅರ್ಜುನನಿಗೆ ಉಪದೇಶಮಾಡಿರುವಂತೆ, ಈ ಕರ್ಮಭೂಮಿಯಲ್ಲಿ ಕರ್ಮಶರೀರವನ್ನು ಹೊಂದಿರುವ ಈ ಮಾನವರು ವೇದೋಕ್ತವಾದ ಕರ್ಮವನ್ನು ಮಾಡಿಯೇ ತನ್ನ ಜೀವಿತ ಸಾಫಲ್ಯ ಪಡೆಯಬೇಕಾಗಿರುತ್ತೆ.

ಈ ವಿಧವಾದ ಸ್ಥಿತಿ ಇರುವುದಾದರೂ ಪ್ರಾಣಿವರ್ಗದಲ್ಲಿ ಉತ್ತಮ ದರ್ಜೆಯಲ್ಲಿರುವ ಮಾನವರು, ಅದರಲ್ಲೂ ಪರಮ ಸುಲಭವಾದ ಶ್ರೀರಾಮಾನುಜ ಸಿದ್ಧಾಂತವನ್ನವಲಂಬಿಸಿ **ತೃಣೀಕೃತವಿರಿಂಚಾದಿ ನಿರಂಕುಶ ವಿಭೂತಿಗಳಾದ ರಾಮಾನುಜಪದಾಂಭೋಜ ಸಮಾಶ್ರಯಣಶಾಲಿಗಳಾದ** ಉಭಯಕಲೆ ಶ್ರೀವೈಷ್ಣವರು, ತಮ್ಮ ವರ್ಣಾಶ್ರಮಗಳಿಗನುಸಾರವಾದ ನಡೆನುಡಿಗಳನ್ನು ಬಿಟ್ಟು ಮನ ಬಂದ ರೀತಿಯಲ್ಲಿ ಸ್ವೋದರಪೋಷಣಾನಿರತರಾಗಿರುವುದರಿಂದ ಅವನ್ನು ತಪ್ಪಿಸಿ ಆಸ್ತಿಕತೆಯನ್ನುಂಟು ಮಾಡಲೂ, ಹಾಗೆ ಆಸ್ತಿಕರಾದವರಿಗೆ ಮಾರ್ಗದರ್ಶಕರಿಲ್ಲದೆ ಹಾಳಾಗುತ್ತಿರುವ ಆಸ್ತಿಕತೆಯನ್ನು ಕಾಪಾಡಿ ಉದ್ಧರಿಸಲೂ **ಶ್ರೀ—ಉ—ವೇ. ಕೊಮಾರ ಶಿಂಗರಾಚಾರ್ಯಸ್ವಾಮಿಗಳವರು** ಸಂಗ್ರಹಿಸಿ ಪ್ರಕಟಿಸಿರುವ **"ನಿತ್ಯನೈಮಿತ್ತಿಕಾಹ್ನಿಕ ಕ್ರಮ"** ಎಂಬ ಪುಸ್ತಕವು ಅತ್ಯಂತ ಸಹಾಯಕರವಾಗಿರುತ್ತೆ. ಇದರ ಸಹಾಯದಿಂದ ಮಾನವವರ್ಗಕ್ಕೆ ಎಲ್ಲಾ ವಿಧದಲ್ಲೂ ಮಾರ್ಗದರ್ಶಕನಾದ ಶ್ರೀವೈಷ್ಣವ ಬ್ರಾಹ್ಮಣನು ತನ್ನ ಕರ್ತವ್ಯವನ್ನು ಸುಲಭರೀತಿಯಲ್ಲಿ ಅರಿತು ಪರಾಪೇಕ್ಷೆಯಿಲ್ಲದೆ ಅನುಷ್ಠಾನ ಮಾಡಬಹುದು, ಮತ್ತು ಇತರರಿಗೂ ಸನ್ಮಾರ್ಗವನ್ನು ತೋರಿಸಿಕೊಡಬಹುದಾಗಿರುತ್ತೆ.

ಈ ಕರ್ಮಸ್ವರೂಪವಲ್ಲದೆ ಈ ಕರ್ಮಾರಾಧ್ಯ ದೇವತೆಯಾದ ಪರಮಾತ್ಮನಿಗೂ, ಪ್ರಪಂಚಕ್ಕೂ, ತನಗೂ ಇರತಕ್ಕ ನಿತ್ಯವಾದ ಸಂಬಂಧವನ್ನೂ, ಸ್ವರೂಪವನ್ನೂ, ಅರಿತು ಮುಂದೆ ತನ್ನ ಕರ್ತವ್ಯವಾದ ಕರ್ಮಗಳ ಜಗ

ಶರೀರಕನಾಗಿ ಸರ್ವಾಧಾರನೂ, ಸರ್ವಕಲ್ಯಾಣ ಗುಣ ಪರಿಪೂರ್ಣನೂ, ಆದ ಶ್ರೀಮನ್ನಾರಾಯಣನ ಅನನ್ಯಪ್ರಯೋಜನವಾದ ಕೈಂಕರ್ಯವಾಗಿ ಪರಿಗಣಿಸಿ ತನ್ನ ಆತ್ಮೋಜ್ಜೀವನಕ್ಕೆ ಸಾಧನವಾಗಿ ಇದನ್ನು "ಅಸ್ತಿಬ್ರಹ್ಮೇತಿ ಚೇದ್ವೇದ। ಸಂತಮೇನಂ ತತೋ ವಿದುರಿತಿ ॥" ಎಂದೂ "ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ ಜುಷ್ಟಸ್ತತಸ್ತೇನಾಮೃತತ್ವಮೇತಿ ॥" ಎಂಬಂತೆ ಉದ್ಧರಿಸಲು ಸಹಾಯವಾಗುತ್ತೆ ಎಂಬುದಾಗಿ ನಾನು ದೃಢವಾಗಿ ಮಹಾಜನಗಳ ಮುಂದೆ ಅತ್ಯಂತ ಸಂತೋಷದಿಂದ ವಿಜ್ಞಾಪಿಸಿಕೊಂಡಿರುತ್ತೇನೆ.

ಅಲ್ಲದೆ ಈ ಪ್ರಚಾರಕರಾದ ಶ್ರೀ—ಉ—ವೇ. ಕೋವಾರ ಸಿಂಗರಾಚಾರ್ಯಸ್ವಾಮಿಗಳವರ ಈ ಕೈಂಕರ್ಯವು ಇತೋಽಪ್ಯತಿಶಯವಾಗಿ ಫಲಕೋಟಿಸಾಸಿರಗಳಾಗಿ ಶ್ರೀಮನ್ನಾರಾಯಣನ ಕೃಪಾದೃಷ್ಟಿಯಿಂದಲೂ, ಪೂರ್ವಾಚಾರ್ಯರುಗಳ ಮಂಗಳಾಶಾಸನ ಬಲದಿಂದಲೂ ವೃದ್ಧಿಹೊಂದಿ ನಮ್ಮ ಈ ಕನ್ನಡ ನಾಡಿನ ಉಭಯಕಲಾ ಶ್ರೀವೈಷ್ಣವಬ್ರಾಹ್ಮಣ ಬೃಂದದಲ್ಲಿ ಬೆಳಗಿ ಈ ಜನತೆಯನ್ನು ಎಚ್ಚರಗೊಳಿಸಲಿ ಎಂದು ತ್ರಿಕರಣದಿಂದಲೂ ಪರಮಾತ್ಮನಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ನಿಜಶ್ರಾವಣ ಕೃಷ್ಣ ಏಕಾದಶೀ,
ಸರ್ವಜಿತ್ಸಂವತ್ಸರ
(11-9-1947)

ಸಜ್ಜನವಿಧೇಯಸೇವಕ
ವಿದ್ವಾನ್ ತಿರುಮಲೈ ಅನಂತಾಂಪಿಳ್ಳೈ
ನರಸಿಂಹಾಚಾರ್ಯದಾಸಃ
(ಪಂಡಿತರತ್ನಂ ತಿ-ಅ-ಎಂಬೆರುಮಾನಾರ್
ಸ್ವಾಮಿನಾಂ ತನೂಜಃ)

## ನಿತ್ಯ ನೈಮಿತ್ತಿಕಾನುಷ್ಠಾನ ಕ್ರಮ

# ಶೋಧನ ಪತ್ರ

| ಪುಟ | ಪಂಕ್ತಿ | ಅಶುದ್ಧ | ಶುದ್ಧ |
|---|---|---|---|
| 6 | 22 | ಅಸಾವಾದಿತ್ಯೋಬ್ರದ್ಮಾ | ಅಸಾವಾದಿತ್ಯೋಬ್ರಹ್ಮಾ |
| 9 | 15 | [ತ್ರ್ಯೃಚಸ್ಯ] | [ತ್ರ್ಯರ್ಚಸ್ಯ] |
| 14 | 16 | ವಿನಿಯೋಗ | ವಿನಿಯೋಗಃ |
| 15 | 28 | ದೇವಸೋ | ದೇವಸೋಃ |
| 24 | 13 | ಮೋಕ್ಷಾಂಚ— ಪೂರ್ವಕಾಂ | ಮೋಕ್ಷಂಚ—ಪೂರ್ವಕಂ |
| 34 | 17 | ನ್ಯಹೇಮಹೇಚತದ್ರಾದ್ಯೌ | ನ್ಯಹೇಮಹೇಚತತ್ರಾದ್ಯೌ |
| 38 | 7 | " ಸಾಗ್ನೇಃಪ್ರಗಚ್ಛಾದ್ಯೋತೇ | " ಸಾಗ್ನೇಃಪ್ರತಿಚ್ಛಾಗೃಹ್ಯೋಕ್ತ |
| 39 | 2 | ತ್ರಿಧಾಬನ್ಧ್ಯೋ | ತ್ರಿಧಾಬದ್ಧ್ಯೋ |
| | 18–19 | " ಮನ್ಯುಸ್ಸ ಎಂದು ಬರೆದಿರುವ ಕಡೆಯಲ್ಲಿ | " ಮನ್ಯುಸ್ತ " ಎಂದು ಉಚ್ಚರಿಸಬೇಕು. |
| 40 | 2 | ಉಚ್ಚರಿಸಿಸ ಬೇಕು | ಉಚ್ಚರಿಸಬೇಕು |
| 47 | 18 | ಕರನ್ಯಾಸದಗಳನ್ನು | ಕರನ್ಯಾಸಗಳನ್ನು |
| 56 | 16 | ಪಿತೃಭ್ಯಸ್ಸ್ವಧಾಪಿಭ್ಯ | ಪಿತೃಭ್ಯಸ್ಸ್ವಧಾವಿಭ್ಯ |
| | 17 | ಪಿತಾಮಹೇಭ್ಯಸ್ಸ್ತ್ರಧಾವಿಭ್ಯ | ಪಿತಾಮಹೇಭ್ಯಸ್ಸ್ವಧಾವಿಭ್ಯ |
| 60 | 10 | ವಿಷುವಶ್ರಾದ್ಧಂ | ವಿಷವಶ್ರಾದ್ಧಃ |
| 64 | 15 | ಆಸ್ಯಾಂ | ಅಸ್ಯಾಂ |
| 65 | 23 | ಕಾಯೇನವಚಾ | ಕಾಯೇನವಾಚಾ |
| 72 | | ತತ್ವಜ್ಞಾನ ಸಂಗ್ರಹ :— | |
| | | ಅಜ್ಞಾ | ಅಜ್ಞಾ |
| | | ಓಂ ಶ್ಯಾನ್ತಿ ಶ್ಯಾನ್ತಿ, ಶ್ಯಾನ್ತಿ। | ಓಂ ಶಾನ್ತಿ ಶ್ಯಾನ್ತಿ ಶ್ಯಾನ್ತಿ। |

# ವಿಜ್ಞಾಪನೆ

ಈಗಿನ ಕಾಲಸ್ಥಿತಿಯಲ್ಲಿ ಪ್ರತಿ ಒಂದು ಪದಾರ್ಥದ ಬೆಲೆ, ಕೂಲಿ, ಮುಂತಾದವುಗಳು ಬಹಳ ಅಧಿಕವಾಗಿರುವುದರಿಂದ ವಾಚಕರಿಗೆ ಈ ಪುಸ್ತಕದ ಬೆಲೆಯು ಸ್ವಲ್ಪ ಅಧಿಕವಾಗಿರುವಂತೆ ಕಾಣಬಹುದು. ಈ ಪುಸ್ತಕದ ಜೊತೆಯಲ್ಲಿ "ಸನಾತನ ಆರ್ಯ ಧರ್ಮ" ಪುಸ್ತಕವನ್ನು ಸಹ ಸೇರಿಸಿರುವುದರಿಂದ ವಾಚಕರಿಗೆ ಆ ಪುಸ್ತಕದ ಬೆಲೆ 8 ಆಣೆಯು ಕಡಿಮೆಯಾದಂತೆ ಭಾವಿಸಬೇಕಾಗುತ್ತೆ, ಮತ್ತು ಈ ಪುಸ್ತಕದ ಜೊತೆಯಲ್ಲಿ "ಶ್ರೀವೈಷ್ಣವನಿಷ್ಠೆ" ಪುಸ್ತಕವನ್ನು ಕೊಂಡುಕೊಳ್ಳುವವರಿಗೆ ಒಟ್ಟು ಬೆಲೆಯಲ್ಲಿ 2 ಆಣೆ ಕಡಿಮೆಯಾಗಿ ಕೊಡಲ್ಪಡುತ್ತೆ. ಪುಸ್ತಕವ್ಯಾಪಾರಿಗಳಿಗೆ ಧಾರಾಳವಾದ ಕಮಿಷನ್ ಕೊಡಲ್ಪಡುತ್ತೆ. ಈ ಕೆಳಗಂಡ ಪುಸ್ತಕಗಳನ್ನು ಅಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಪೋಸ್ಟು ಮತ್ತು ವಿ. ಪಿ. ಚಾರ್ಜು ಪ್ರತ್ಯೇಕ.

M. K. S.

*Apply for Copies :—to*

1. **M. K. Singarachar Esq.**
   Editor, "U. S. Series"
   ~~48, Srinivasa Agrahar, Mandyam P.O.~~
   ~~Mysore State.~~ 1405, K. [illegible], Mysore.

2. **The Proprietor,**
   Sri Gowrishankar Book Depot,
   Devaraja Market, Mysore.

3. **M. C. Krishnaswamy Iyengar Esq.**
   1226, Nagappa's Block,
   Srirampuram, Malleswaram, P. O.
   Bangalore.

4. **The Proprietor,**
   Vidyasagara Book Depot.
   Chickpet, Bangalore City.

Sri Venkateswara Book Depot,
Lansdowne Building, Mysore.

## ಲೇಖಕರಿಂದ ಪ್ರಕಾಶಪಡಿಸಿರುವ ಪುಸ್ತಕಗಳು

| | | ಬೆಲೆ |
|---|---|---|
| ~~1~~ | ~~ಮಂತ್ರಕ್ಷೇತ್ರದ ಪ್ರಭಾವ~~ .. .. | 0 2 0 |
| ~~2~~ | ~~ಶ್ರೀವೈಷ್ಣವನಿಷ್ಠೆ~~ .. .. .. | ~~0 8 0~~ |
| 3 | ನಿತ್ಯನೈಮಿತ್ತಿಕಕಾಮ್ಯಕ ಕ್ರಮ .. .. | 1 0 0 / ~~1 2 0~~ |

## ನಿತ್ಯ ನೈಮಿತ್ತಿಕಾಹ್ನಿಕ ಕ್ರಮ

# ಅವತರಣಿಕೆ

ಭಗವಂತನಾದ ಶ್ರೀಮನ್ನಾರಾಯಣನು ಕೃಷ್ಣಾವತಾರವನ್ನು ಮಾಡಿ ನೆಪಮಾತ್ರಕ್ಕೆ ತನ್ನ ಪ್ರಿಯಸಖನಾದ ಅರ್ಜುನನನ್ನು ಮುಂದಾಳಾಗಿಟ್ಟುಕೊಂಡು ಭೂಲೋಕದಲ್ಲಿ ಚೇತನೋದ್ಧಾರಕ್ಕಾಗಿ ಕುರುಕ್ಷೇತ್ರ ರಣರಂಗದಲ್ಲಿ ಅವನಿಗೆ ಶ್ರೀಭಗವದ್ಗೀತೆಯನ್ನು ಉಪದೇಶಿಸಿದನು. ಭೂಲೋಕದಲ್ಲಿ ಜನಿಸುವ 84 ಲಕ್ಷ ತರಹೆಯ ಜೀವರಾಶಿಗಳಲ್ಲಿ ಈ ಮನುಷ್ಯ ಜನ್ಮವು ಉತ್ತಮವೆನಿಸುವುದು. ಅದರಲ್ಲೂ ಸತ್ಕುಲಪ್ರಸೂತರಾದ ಶ್ರೀವೈಷ್ಣವ ಜನ್ಮವು ಲಭಿಸುವುದು ಬಹಳ ದುರ್ಲಭ. ಇದನ್ನರಿಯದೇ, ಈ ಕಲಿಯುಗದಲ್ಲಿ ಅನೇಕ ಶ್ರೀವೈಷ್ಣವರು ಕಾಮಕ್ರೋಧಾದಿಗಳಿಗೆ ವಶರಾಗಿ, ಸಂಸಾರ ದುಃಖದಲ್ಲಿ ಮುಳುಗಿ, ತಮ್ಮ ಪವಿತ್ರವಾದ ಈ ಜನ್ಮವನ್ನೇ ಮರೆತು, ನಿತ್ಯನೈಮಿತ್ತಿಕ ಕರ್ಮಗಳನ್ನು ಬಿಟ್ಟವರಾಗಿ, ಅಹಂಕಾರ ಮಮಕಾರದಿಂದ ಕೂಡಿ ತಮ್ಮ ಇಷ್ಟಬಂದಂತೆ ಮೆರೆಯುತ್ತಾ ಪಾಪಾತ್ಮರಾಗಿ ಅಳಿಯುತ್ತಿರುವುದು ಬಹಳ ಶೋಚನೀಯವಾಗಿದೆ.

ಆದುದರಿಂದ ಆಸ್ತಿಕ ಶಿಖಾಮಣಿಗಳಾದ ಶ್ರೀವೈಷ್ಣವರು ಪರಮಾತ್ಮನಾದ ಭಗವಂತನು ಶ್ರೀಭಗವದ್ಗೀತೆಯಲ್ಲಿ ಆಜ್ಞೆ ಮಾಡಿದಂತೆ ಆಯಾ ಕಾಲಕ್ಕೆ ಸರಿಯಾಗಿ ಮಂತ್ರಲೋಪ ಕ್ರಿಯಾಲೋಪಗಳಿಲ್ಲದೆ ಅವರವರ ವರ್ಣಾಶ್ರಮಧರ್ಮಗಳಿಗೆ ಅನುಸಾರವಾಗಿ ನಿತ್ಯನೈಮಿತ್ತಿಕ ಕರ್ಮಗಳನ್ನು ಭಕ್ತಿಯಿಂದ ಫಲಾಪೇಕ್ಷೆಯಿಲ್ಲದೆ ಆಚರಿಸಿ ಭಗವಂತನ ಪಾದಾರವಿಂದಗಳಲ್ಲಿ ಅರ್ಪಿಸಿದಂತೆ ಭಾವಿಸಿ ಕೃತಾರ್ಥರಾಗಬೇಕು.

“ಸಂಧ್ಯಾವನ್ದನೆ ಸಾವಿರ ಪಾಠ” ಎಂಬ ಗಾಧೆಯಂತೆ ಅನೇಕರು ಅನೇಕವಿಧಗಳಾಗಿ ಈ ಸನ್ಧ್ಯಾವನ್ದನೆ ಮುಂತಾದ ಕರ್ಮಗಳನ್ನು ಆಚರಿಸುತ್ತಾರೆ. ಅವುಗಳನ್ನೆಲ್ಲಾ ಪ್ರಕಾಶಪಡಿಸುವುದು ಸಾಧ್ಯವಾಗಲಾರದು. ಆದರೆ ಅವರವರುಗಳಿಗೆ ಇಷ್ಟಬಂದಂತೆ ಆಚರಿಸುವುದೂ ಸರಿಯಾದುದಲ್ಲ. ಆದುದರಿಂದ ಈ ಗ್ರಂಥದಲ್ಲಿ ಸಾಧ್ಯವಾದಮಟ್ಟಿಗೆ ದಾಸನಿಗೆ ತಿಳಿದಿರುವವರೆಗೂ ತೆಂಗಲೆ ಮತ್ತು ವಡಕಲೆ ಯವರು ಆಚರಿಸುವ ಮಂತ್ರಗಳನ್ನೂ ಮತ್ತು ಅನುಷ್ಠಾನಕ್ರಮಗಳನ್ನೂ ಮತ್ತು ಇತರ ಮುಖ್ಯವಿಷಯಗಳನ್ನೂ ಪ್ರಕಾಶಪಡಿಸಿರುತ್ತೇನೆ. ಲೌಕಿಕ ವೃತ್ತಿಯಲ್ಲಿರುವವರಿಗೂ, ಪರಸ್ಥಳಗಳಲ್ಲಿ ಪುರೋಹಿತರ ಸಹಾಯವಿಲ್ಲದಿರುವಂಥವರಿಗೂ, ಮತ್ತು ಸಂಸ್ಕೃತಭಾಷೆ ಪರಿಚಯವಿಲ್ಲದವರಿಗೂ, ಅವರವರು ಮಾಡ

## ಅವತರಣಿಕೆ

ಬೇಕಾದ ಮುಖ್ಯವಾದ ನಿತ್ಯ ನೈಮಿತ್ತಿಕ ಕರ್ಮಗಳನ್ನು ಮಾಡಲು ಅನುಕೂಲಿಸುವಂತೆ ಕನ್ನಡ ಭಾಷೆಯಲ್ಲಿ ಬರೆದಿರುವ ಈ ಗ್ರಂಥವು ಬಹಳ ಸಹಾಯವನ್ನುಂಟುಮಾಡುತ್ತದೆ. ಆದುದರಿಂದ ಈ ಗ್ರಂಥವೂ ಮತ್ತು "ಶ್ರೀವೈಷ್ಣವನಿಷ್ಠ" ಎಂಬ ಪುಸ್ತಕವೂ ಪ್ರತಿ ಒಬ್ಬ ಶ್ರೀವೈಷ್ಣವ ಬ್ರಾಹ್ಮಣರ ಮನೆಯಲ್ಲಿ ಅತ್ಯವಶ್ಯಕವಾಗಿ ಬೇಕಾಗಿರುತ್ತವೆ.

ಈ ಗ್ರಂಥದ ಒಂದನೇ ಮತ್ತು ಎರಡನೇ ಪರಿಚ್ಛೇದಗಳಲ್ಲಿ ಸೂಚಿಸಿರುವಂತೆ ವಡಗಲೆಯವರ ಸಂಪ್ರದಾಯ ಮಂತ್ರಗಳ ಮತ್ತು ಆಚರಣೆಗಳನ್ನು ( ) ಇಂಥಾ ಆವರಣ ಚಿಹ್ನೆಯಲ್ಲಿಯೂ, ಕೆಲವು ಪಾಠಾಂತರಗಳನ್ನೂ ಮತ್ತು ಕೆಲವು ಆಧಾರ ಮಂತ್ರಾದವುಗಳನ್ನು [ ] ಇಂಥಾ ಆವರಣ ಚಿಹ್ನೆಯಲ್ಲಿಯೂ ಪ್ರಕಾಶಪಡಿಸಿರುತ್ತೆ. ಕೆಲವು ತೆಂಗಲೆ ಸಂಪ್ರದಾಯದವರೂ ಸಹ ( ) ಈ ಆವರಣ ಚಿಹ್ನೆಯಲ್ಲಿರುವ ಮಂತ್ರ ಮಂತ್ರಾದವುಗಳನ್ನು ಆಚರಿಸುವುದುಂಟು. ಮುಖ್ಯವಾಗಿ "ಅವಶ್ಯಂ ಪಿತುರಾಚಾರಂ" ಎಂಬಂತೆ ಅವರವರು ತಮ್ಮ ತಮ್ಮ ಹಿರಿಯರು ಆಚರಿಸುತ್ತಿರುವ ಸಂಪ್ರದಾಯಗಳನ್ನು ಆಚರಿಸುವುದೇ ಬಹಳ ಉತ್ತಮ. ತಿಳಿಯದಿರುವ ವಿಚಾರಗಳನ್ನು ತಮ್ಮ ಗುರು ಹಿರಿಯರುಗಳಿಂದ ತಿಳಿದುಕೊಳ್ಳಬಹುದು.

ದಾಸನಿಗೆ ಈ ಗ್ರಂಥವನ್ನು ಬರೆಯಲು ಸಹಾಯಮಾಡಿದ ಬಂಧು ಮಿತ್ರರುಗಳಿಗೂ ಪಂಡಿತ ಮಹನೀಯರುಗಳಿಗೂ ದಾಸನ ಹೃತ್ಪೂರ್ವಕವಾದ ವಂದನೆಯನ್ನು ಈ ಮೂಲಕ ಅರ್ಪಿಸುತ್ತೇನೆ. ಶ್ರೀಮಾನ್ M. C. ಕೃಷ್ಣಸ್ವಾಮಿ ಅಯ್ಯಂಗಾರ್ಯರು ಲೌಕಿಕರ ಮನವನ್ನೇ ಆಕರ್ಷಿಸುವ ಶೈಲಿಯಲ್ಲಿ ಕೃಪೆಮಾಡಿ ಆಂಗ್ಲೇಯಭಾಷೆಯಲ್ಲಿ ಅನೇಕ ಆಧಾರಗಳನ್ನೊಳಗೊಂಡು ಬರೆದು ಕಳುಹಿಸಿರುವ "ಸನಾತನ ಆರ್ಯ ಧರ್ಮ" ಎಂಬ ಗ್ರಂಥವನ್ನೂ ಸಹ ಈ ಪುಸ್ತಕದ ಮೂರನೇ ಪರಿಚ್ಛೇದದಲ್ಲಿ ವಾಚಕರ ಪರಾಂಬರಿಕೆಗೆ ಪ್ರಕಾಶಪಡಿಸಿರುತ್ತೇನೆ. ಆಸ್ತಿಕ ಶಿಖಾಮಣಿಗಳು ಇವೆಲ್ಲವನ್ನು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥಿಸುವ,

ಆಸ್ತಿಕಜನ ದಾಸಾನುದಾಸ,

M. K. S.

ಮಂಡ್ಯ.

ಶ್ರೀಮತೇ ರಾಮಾನುಜಾಯ ನಮಃ

# ನಿತ್ಯಾಹ್ನಿಕ ಕ್ರಮ

(೨ ನೇ ಭಾಗ)

---

**ಯಜುರ್ವೇದ ತ್ರಿಕಾಲ**

## ಸನ್ಧ್ಯಾವನ್ದನೆ

**ಕರ್ಮಜಂ ಬುದ್ಧಿಯುಕ್ತಾ ಹಿ ಫಲಂ ತ್ಯಕ್ತ್ವಾ ಮನೀಷಿಣಃ ।**
**ಜನ್ಮಬನ್ಧವಿನಿರ್ಮುಕ್ತಾಃ ಪದಂ ಗಚ್ಛನ್ತ್ಯನಾಮಯಮ್ ॥**

(ಗೀತೆ ೨—೫೧)

### 1. ಪ್ರಾತಃಸನ್ಧ್ಯಾವನ್ದನಾಕ್ರಮ

(1) ಬೆಳಗ್ಗೆ 6 ಘಂಟೆಗಳೊಳಗಾಗಿ ಅಭಿಗಮನಕಾಲ ನಿತ್ಯವನ್ನು ಆಚರಿಸಿ ಪೂರ್ವಾಭಿಮುಖವಾಗಿ ಶುಚಿಯಾದ ಪ್ರದೇಶದಲ್ಲಿ ಕುಶಾಸನದಲ್ಲಿ ಕುಳಿತು ಈ ‡ ಸನ್ಧ್ಯಾವನ್ದನೆಯನ್ನು ಮಾಡಬೇಕು.

(2) **ಮಾರ್ಜನೆ:—ಅಪವಿತ್ರಃ ಪವಿತ್ರೋ ವಾ ಸರ್ವಾವಸ್ಥಾಂ ಗತೋಽಪಿ ವಾ । ಯಃ ಸ್ಮರೇತ್ಪುಂಡರೀಕಾಕ್ಷಂ ಸ ಬಾಹ್ಯಾಭ್ಯನ್ತರಶ್ಶುಚಿಃ ॥** ಎಂದು ಹೇಳಿ ಶುದ್ಧತೀರ್ಥದಿಂದ ತಲೆಯಮೇಲೆ ಪ್ರೋಕ್ಷಿಸಿಕೊಳ್ಳಬೇಕು. ಅನಂತರ ಎರಡು ಮೊಣಕಾಲುಗಳ ನಡುವೆ ಬಲದ ಕೈಯನ್ನು ನೀಡಿ ಹಸುವಿನ ಕಿವಿಯಂತೆ ಅಂಗೈಯನ್ನು ಮಾಡಿಕೊಂಡು,

---

‡ ಸನ್ಧ್ಯಾವನ್ದನೆ ಎಂದರೆ:— ಸನ್ಧಿಕಾಲಗಳಲ್ಲಿ ಉತ್ಪನ್ನವಾಗುವ ಭಗವತ್ಸಾದ ಶ್ರೀಮನ್ನಾರಾಯಣನ ಶಕ್ತಿಯನ್ನು ವಂದಿಸುವಿಕೆ ಮತ್ತು ಗಾಯತ್ರೀ ದೇವತೋಪಾಸನೆ; ಈ ಉಪಾಸನಾಧಿಕಾರವನ್ನುಂಟುಮಾಡುವ ಪ್ರೋಕ್ಷಣೆ, ಅರ್ಘ್ಯಪ್ರದಾನ, ಮುಂತಾದವು ಅಂಗಭೂತವಾದ ನಿತ್ಯ ಕರ್ಮಗಳು. ಶ್ರೀವೈಷ್ಣವ ಭಕ್ತ ಶಿಖಾಮಣಿಗಳು ದೇವಸ್ಥಾನದಲ್ಲೂ ಮತ್ತು ಗುರುವಿನ ಸಾನ್ನಿಧ್ಯದಲ್ಲೂ ಕೈಂಕರ್ಯಗಳನ್ನು ಮಾಡುತ್ತಿರುವಾಗ "ಸನ್ಧ್ಯಾವನ್ದನೆ ಕಾಲಕ್ಕೆ

ಎಡದ ಕೈಯಲ್ಲಿ ತೀರ್ಥಪಾತ್ರೆಯನ್ನು ಹಿಡಿದು ಅದರಿಂದ ಒಂದು ಉದ್ದಿನ ಕಾಳು ಮುಳುಗುವಷ್ಟು ತೀರ್ಥವನ್ನು ತೆಗೆದುಕೊಂಡು ಆಚಮನವನ್ನು ಮಾಡಬೇಕು.

(೩) **ಆಚಮನಮಂತ್ರ**:— [ಸೂಚನೆ—ಈ ಸನ್ಧ್ಯಾವನ್ದನೆಯ ಕೆಲವು ಮಂತ್ರಗಳನ್ನೂ ಮತ್ತು ನ್ಯಾಸಗಳನ್ನೂ ವಡಕಲೆ ಸಂಪ್ರದಾಯದ ಶ್ರೀವೈಷ್ಣವರುಗಳು ಅನುಸರಿಸುವ ಕ್ರಮಗಳನ್ನು ಸಾಧಾರಣ ( . . . . ) ಕೋನಗಳಲ್ಲಿ (ಆವರಣ ಚಿಹ್ನೆಯೊಳಗೆ) ಬರೆದಿರುತ್ತೆ. ಅದರಂತೆ ಅವರುಗಳು ಆಚರಿಸಬಹುದು. ಮಿಕ್ಕ ವಿಷಯಕ್ರಮಗಳೆಲ್ಲವೂ ಉಭಯ ಕಲೆಯವರಿಗೂ ಸೇರಿದ ಸಂಪ್ರದಾಯವೆಂದು ತಿಳಿಯುವುದು.] (**ಓಂ ಅಚ್ಯುತಾಯ ನಮಃ, ಓಂ ಅನಂತಾಯ ನಮಃ, ಓಂ ಗೋವಿಂದಾಯ ನಮಃ** ಹೀಗೆ ಪ್ರತಿ ಒಂದು ಮಂತ್ರಕ್ಕೂ ತೀರ್ಥವನ್ನು ಸ್ವೀಕರಿಸಿ, † ಅಂಗುಷ್ಠಮೂಲದಿಂದ ತೀರ್ಥವನ್ನು ಸ್ಪರ್ಶಿಸಿ, ಎರಡು ತುಟಿಗಳನ್ನು ಒರಸಿ ಆ ಅಂಗುಷ್ಠಮೂಲವನ್ನು ತೀರ್ಥದಿಂದ ತೊಳೆದು ಅಂಗುಷ್ಠಾಗ್ರದಿಂದ * **ಕೇಶವಾಯ ನಮಃ** ಎಂದು ಬಲದ ಕೆನ್ನೆಯನ್ನೂ, **ನಾರಾಯಣಾಯ ನಮಃ** ಎಂದು ಎಡದ ಕೆನ್ನೆಯನ್ನೂ, ಅಂಗುಷ್ಠ ಅನಾಮಿಕೆಗಳಿಂದ **ಮಾಧವಾಯ ನಮಃ** ಎಂದು ಬಲದ ಕಣ್ಣನ್ನೂ, **ಗೋವಿಂದಾಯ ನಮಃ** ಎಂದು ಎಡದ ಕಣ್ಣನ್ನೂ, ಅಂಗುಷ್ಠತರ್ಜನಿಗಳಿಂದ **ವಿಷ್ಣವೇ ನಮಃ** ಎಂದು ಬಲದ ನಾಸಿಕೆಯನ್ನೂ, **ಮಧುಸೂದನಾಯ ನಮಃ** ಎಂದು ಎಡದ ನಾಸಿಕೆಯನ್ನೂ, ಅಂಗುಷ್ಠ ಕನಿಷ್ಠಗಳಿಂದ **ತ್ರಿವಿಕ್ರಮಾಯ ನಮಃ** ಎಂದು ಬಲದ ಕಿವಿಯನ್ನೂ,

---

ಪಾಪ ಹೋಗುತ್ತದೆ.'' ಎಂದು ಅದರಿಂದ ತಾವು ಮಾಡುತ್ತಿರುವ ಕೈಂಕರ್ಯಗಳನ್ನು ಆಧಾರವಿಲ್ಲ ಬಿಟ್ಟು ಸನ್ಧ್ಯಾವನ್ದನಾದಿ ಕರ್ಮಗಳನ್ನು ಮಾಡಲು ಉಪಕ್ರಮಿಸಬಾರದು. ಇದು ಬಹಳ ಪ್ರಾಚೀನವೆಂದು ತಿಳಿಯಬೇಕು. ಭಗವದನುಷ್ಠಾನತತ್ಪರರೂ ಭಾಗವತಾಗ್ರೇಸರರೂ ಆದ ಬಹಳ ಪಾವನರಾದವರು. ದೇವರ ಅಥವಾ ಗುರುಗಳ ಕೈಂಕರ್ಯಗಳನ್ನು ಪೂರೈಸಿದನಂತರವೇ ಸಂಧ್ಯಾವಂದನಾದಿ ಕರ್ಮಗಳನ್ನು ದೇವರ ಆರಾಧನೆ ರೂಪವಾದ ಕೈಂಕರ್ಯಗಳೆಂದು ಭಾವಿಸಿ ಇದು ಧರ್ಮಶಾಸ್ತ್ರಗಳಿಂದ ಕೂಡಿದ್ದೆಂದು ಅಭಿಪ್ರಾಯ. ಇನ್ನು ಹೆಚ್ಚು ವಿಷಯಗಳನ್ನು ಈ ಸಂಚಿಕೆಯ ಎರಡನೇ ಭಾಗ ಶ್ರೀವೈಷ್ಣವ ಪರಿಷ್ಕರಣದಲ್ಲಿ ವಿವರಿಸಿರುತ್ತೆ.

† ಇದರ ವಿವರಗಳನ್ನು ಮುಂದಿನ ಪುಟದಲ್ಲಿ ನೋಡಬಹುದು.

* ಕೆಲವರು **12, 15, 18,** ಅಥವಾ **24,** ನಾಮಗಳನ್ನು ಹೇಳಿ ಆಚಮನ ಮಾಡುವುದುಂಟು.

**ವಾಮನಾಯ ನಮಃ** ಎಂದು ಎಡದ ಕಿವಿಯನ್ನೂ, ಅಂಗುಷ್ಠ ಮಧ್ಯಮ ಬೆರಳುಗಳಿಂದ **ಶ್ರೀಧರಾಯ ನಮಃ** ಎಂದು ಬಲದ ಹೆಗಲನ್ನೂ, **ಹೃಷೀಕೇಶಾಯ ನಮಃ** ಎಂದು ಎಡದ ಹೆಗಲನ್ನೂ; ಅಂಗುಷ್ಠಮಾತ್ರದಿಂದ **ಪದ್ಮನಾಭಾಯ ನಮಃ** ಎಂದು ಹೊಕ್ಕಳನ್ನೂ, ಮತ್ತು ಅಂಗೈಯಿಂದ ಹೃದಯವನ್ನೂ, ಎಲ್ಲಾ † ಬೆರಳುಗಳನ್ನೂ ಒಟ್ಟುಗೂಡಿಸಿ **ದಾಮೋದರಾಯ ನಮಃ** ಎಂದು ತಲೆಯನ್ನೂ, (ಹೀಗೆ ‡ ತೀರ್ಥದಲ್ಲಿ ಬೆರಳುಗಳನ್ನು ಮುಟ್ಟಿದನಂತರ ಪ್ರತಿ ಒಂದು ಅಂಗವನ್ನು ಸ್ಪರ್ಶಿಸಬೇಕು.) **ಓಂ ಕೇಶವಾಯ ನಮಃ, ಓಂ ನಾರಾಯಣಾಯ ನಮಃ, ಓಂ ಮಾಧವಾಯ ನಮಃ,** ಎಂದು ಪ್ರತಿ ಒಂದು ಮಂತ್ರವನ್ನೂ ಹೇಳಿ ಭಕ್ತಿಯಿಂದ ತೀರ್ಥವನ್ನು ಸ್ವೀಕರಿಸಬೇಕು, **ಓಂ ಗೋವಿಂದಾಯ ನಮಃ** ಎಂದು ಸ್ವಲ್ಪ ತೀರ್ಥವನ್ನು ಕೆಳಗೆ ಬಿಡಬೇಕು, **ಓಂ ವಿಷ್ಣವೇ ನಮಃ** ಎಂದು ತುಟಿಗಳನ್ನು ತೀರ್ಥದಿಂದೊರಸಿ, **ಓಂ ಮಧುಸೂದನಾಯ ನಮಃ** ಎಂದು ತರ್ಜನಿಯಿಂದ ಮೂಗಿನ ಎರಡು ಪಾರ್ಶ್ವಗಳನ್ನೂ, **ಓಂ ತ್ರಿವಿಕ್ರಮಾಯ ನಮಃ** ಎಂದು ಅನಾಮಿಕೆಯಿಂದ ಎರಡು ಕಣ್ಣುಗಳನ್ನೂ, **ಓಂ ವಾಮನಾಯ ನಮಃ** ಎಂದು ಕಿರಿಬೆರಳಿನಿಂದ ಎರಡು ಕಿವಿಗಳನ್ನೂ, **ಓಂ ಶ್ರೀಧರಾಯ ನಮಃ** ಎಂದು ಮಧ್ಯಮ ಬೆರಳಿನಿಂದ ಎರಡು ಭುಜಗಳನ್ನೂ; **ಓಂ ಹೃಷೀಕೇಶಾಯ ನಮಃ** ಎಂದು ಎಲ್ಲಾ ಬೆರಳುಗಳಿಂದ ನಾಭಿಯನ್ನೂ (ಹೊಕ್ಕಳನ್ನೂ) **ಓಂ ಪದ್ಮನಾಭಾಯ ನಮಃ** ಎಂದು ಅಂಗೈನಿಂದ ಹೃದಯವನ್ನೂ, **ಓಂ ದಾಮೋದರಾಯ ನಮಃ** ಎಂದು ಎಲ್ಲಾ ಬೆರಳುಗಳ ತುದಿಯಿಂದ ತಲೆಯ ಮೇಲೂ ನ್ಯಾಸಗಳನ್ನು ಮಾಡಬೇಕು. ಹೀಗೆ ಎರಡಾವರ್ತಿ

---

† (a) 1 ನೇದು ಹೆಬ್ಬೆರಳು—ಅಂಗುಷ್ಠ (ದಪ್ಪಬೆರಳು)

(b) 2 ನೇದು ಬೆರಳು—ತರ್ಜನೀ (ಬೆದರಿಸುವ ಅಥವಾ ತೋರಿಸುವ ಬೆರಳು)

(c) 3 ನೇದು ಬೆರಳು—ಮಧ್ಯಮಾ (ಮಧ್ಯದ ಬೆರಳು)

(d) 4 ನೇದು ಬೆರಳು—ಅನಾಮಿಕೆ (ಉಂಗುರ ಅಥವಾ ಪವಿತ್ರದ ಬೆರಳು)

(e) 5 ನೇದು ಬೆರಳು—ಕನಿಷ್ಠಾ (ಕೊನೆಯ ಬೆರಳು)

‡ ತೀರ್ಥ=ಪರಿಶುದ್ಧವಾದ ನೀರು.

† ಆಚಮನವನ್ನು ಮಾಡಿದನಂತರ ‡ ದರ್ಭೆಪವಿತ್ರವನ್ನು ಧರಿಸಬೇಕು.

(4) *ಪ್ರಾಣಾಯಾಮ—ಓಂ ಭೂಃ, ಓಂ ಭುವಃ ಓ(ಗ್ಂ) ಸುವಃ ಓಂ ಮಹಃ, ಓಂ ಜನಃ, ಓಂ ತಪಃ, ಓ(ಗ್ಂ) ಸತ್ಯಂ, §ಓಂ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ಧಿಯೋ ಯೋ ನಃ ಪ್ರಚೋದಯಾತ್ ಓಮಾಪೋ ಜ್ಯೋತೀರಸೋಽಮೃತಂ ಬ್ರಹ್ಮ ಭೂರ್ಭುವಸ್ಸುವರೋಮ್ ॥ ಎಂದು ಒಂದು ಪ್ರಾಣಾಯಾಮವನ್ನು ಮಾಡಿ ಬಲದ ಕಿವಿಯನ್ನು ಸ್ಪರ್ಶಿಸಬೇಕು.

(5) ಸಂಕಲ್ಪ — ಶ್ರೀ ಭಗವದಾಜ್ಞಯಾ ಭಗವತ್ಕೈಂಕರ್ಯರೂಪಂ (ಶ್ರೀಮನ್ನಾರಾಯಣ ಪ್ರೀತ್ಯರ್ಥಂ) ಪ್ರಾತಃಸನ್ಧ್ಯಾವನ್ದನಂ ಕರಿಷ್ಯೇ (ಪ್ರಾತಸ್ಸನ್ಧ್ಯಾಮುಪಾಸಿಷ್ಯೇ) ಎಂದು ಸಂಕಲ್ಪವನ್ನು ಮಾಡಬೇಕು.

(6) ತಿಲಕೋಲ್ಲೇಖನೆ— ಓಂ ಶ್ರೀಕೇಶವಾಯ ನಮಃ ಎಂದು ಹೇಳಿ ತೀರ್ಥದಿಂದ ತಿಲಕವನ್ನು ಹಚ್ಚಿಕೊಂಡಂತೆ ಮಧ್ಯಮ ಬೆರಳಿನಿಂದ ಅನುಕರಿಸುವುದು.

(7) ದ್ವಿತೀಯ ಮಾರ್ಜನೆ — [ಆಪೋಹಿಷ್ಠೇತಿ ಮನ್ತ್ರಸ್ಯ ಸಿನ್ಧುದ್ವೀಪ ಋಷಿಃ ದೇವೀಗಾಯತ್ರೀಛನ್ದಃ ಆಪೋದೇವತಾ॥ ಎಂದು

---

† ಆಚಮನವನ್ನು ಭಕ್ತಿಯಿಂದ ಭಗವಂತನನ್ನು ಧ್ಯಾನಿಸುತ್ತಾ ಸ್ವೀಕರಿಸಿದರೆ ಅಂತಶ್ಶುದ್ಧಿಯೂ, ಆರೋಗ್ಯವೂ ಉಂಟಾಗುತ್ತದೆ; ಮತ್ತು ಆಚಮನವನ್ನು ಮಾಡುವಾಗ [illegible] ತೀರ್ಥವನ್ನು ಸ್ವೀಕರಿಸುವುದು ಶ್ರೇಷ್ಠವಾದುದೆಂದು ಹಿರಿಯರ ಅಭಿಪ್ರಾಯ.

‡ ಆಚಮನವನ್ನು ಮಾಡುವಾಗ ದರ್ಭೆಪವಿತ್ರವನ್ನು ಅನಾಮಿಕಾ ಬೆರಳಿನಿಂದ ತೆಗೆದು ಬಲದ ಕಿವಿಯಮೇಲೆ ಧರಿಸಬೇಕು. ಆಚಮನದನಂತರ ಪುನಃ ಪವಿತ್ರವನ್ನು ಧರಿಸಿ ಮುಂದಿನ ಕರ್ಮಗಳನ್ನು ಮಾಡಬೇಕು.

* ಪ್ರಾಣಾಯಾಮವೆಂದರೆ:—ಉಸಿರನ್ನು ಮೂಗಿನ ಬಲದ್ವಾರದಿಂದ 16 ಎಣಿಸುವವರೆಗೂ ಎಳೆಯುವುದು ಪೂರಕ; ಅದನ್ನು 64 ಎಣಿಸುವವರೆಗೂ ಒಳಗೆ ವಾಯುಕೋಶದಲ್ಲಿ ಧಾರಣೆಮಾಡುವುದು, ಕುಂಭಕ; 32 ಎಣಿಸುವವರೆಗೂ ಅದನ್ನು ಮೂಗಿನ ಎಡಗಡೆ ದ್ವಾರದಿಂದ ಬಿಡುವುದು ರೇಚಕ. ಹೀಗೆ ಮಾಡುವ ಕಾಲದಲ್ಲಿ ಭಗವಂತನನ್ನು ಧ್ಯಾನಿಸುತ್ತಾ ಅಭ್ಯಾಸವನ್ನು ಮಾಡುತ್ತಿದ್ದರೆ ಚಂಚಲವಾದ ಮನಸ್ಸನ್ನು ಸ್ವಾಧೀನಕ್ಕೆ ತರುವುದಕ್ಕೂ, ಇಂದ್ರಿಯ ದೋಷ ಪರಿಹಾರಕ್ಕೂ, ಮೇಧಾಶಕ್ತಿಗೂ, ಮತ್ತು ದೇಹಾರೋಗ್ಯಕ್ಕೂ ಅನುಕೂಲವಾಗುವುದು. ಉಸಿರನ್ನು ಮನಸ್ಸಿನೊಂದಿಗೆ ನಿರೋಧಿಸಿ ಧ್ಯಾನದಲ್ಲಿ ನಿಲ್ಲುವ ಅರ್ಹತೆಯನ್ನು ಕೊಡುವುದೇ ಈ ಪ್ರಾಣಾಯಾಮದ ಮುಖ್ಯೋದ್ದೇಶ್ಯವು. ಈ ಅಭ್ಯಾಸದಿಂದ ಸವಿಕಲ್ಪಕ ಧ್ಯಾನವನ್ನು ಚಲಿಸದೇ ತೈಲಧಾರೆಯಂತೆ ಒಂದೇ ಧ್ಯೇಯದಲ್ಲಿ ನಿಲ್ಲಿಸಲು ಅನುಕೂಲವಾಗುವುದು. ಕುಂಭಕದಲ್ಲಿ ಪ್ರಾಣಾಯಾಮದ ಮಂತ್ರವನ್ನು ಮೂರು ಸಾರಿ ಉಚ್ಚರಿಸಬಹುದು.

§ "ಓಂ ತತ್ಸವಿತುರ್ವರೇಣ್ಯಂ" ಎಂದು ಉಚ್ಚರಿಸುವುದುಂಟು.

ತಲೆ, ಬಾಯಿ, ಹೃದಯಗಳನ್ನು ಮುಟ್ಟಿಟ್ಟು (ಅಂಗುಷ್ಠವನ್ನು ಬಿಟ್ಟು ಉಳಿದ ನಾಲ್ಕು ಬೆರಳುಗಳಿಂದ ಕ್ರಮವಾಗಿ ಸ್ಪರ್ಶಿಸಿ. **ಅಪಾಂ ಪ್ರೋಕ್ಷಣೇ ವಿನಿಯೋಗಃ** ಎಂದು ಹೇಳಿ ಎಡಗೈನಿಂದ ತೀರ್ಥವನ್ನು ಬಿಡುತ್ತಾ ಬ್ರಹ್ಮತೀರ್ಥದಿಂದ ಊರ್ಧ್ವಮುಖವಾಗಿ "ಓಂ" ಎಂದು ಒಂದು ಬಾರಿಯೂ, ಗಾಯತ್ರೀ ಮಂತ್ರದಿಂದ ಒಂದು ಬಾರಿಯೂ ಪ್ರೋಕ್ಷಿಸಿ.) (ಓಂ) **ಆಪೋಹಿಷ್ಠಾ ಮಯೋಭುವಃ** (ಓಂ) **ತಾನ ಊರ್ಜೇ ದಧಾತನ** (ಓಂ) **ಮಹೇರಣಾಯ ಚಕ್ಷಸೇ** (ಓಂ) **ಯೋ ವಶ್ಶಿವತಮೋ ರಸಃ** (ಓಂ) **ತಸ್ಯ ಭಾಜಯತೇಹನಃ** (ಓಂ) **ಉಶತೀರಿವ ಮಾತರಃ** (ಓಂ) **ತಸ್ಮಾ ಅರಙ್ಗಮಾಮವೋ(ವಃ)** ಎಂಬದಾಗಿ ಒಂದೊಂದು ಮಂತ್ರಕ್ಕೂ ತಲೆಯ ಮೇಲೆ ಪ್ರೋಕ್ಷಿಸಿ. (ಓಂ) **ಯಸ್ಯ ಕ್ಷಯಾಯ ಜಿನ್ವಥ** ಎಂದು ಎರಡು ಪಾದಗಳ ಅಂಗುಷ್ಠಗಳಿಗೂ ಪ್ರೋಕ್ಷಿಸಿ (ಓಂ) **ಆಪೋಜನಯಥಾಚನಃ** ಎಂದು ಕೈಯಿಂದ ತೀರ್ಥವನ್ನು ತಲೆಯ ಸುತ್ತಲೂ ಪ್ರದಕ್ಷಿಣೆಯಾಗಿ ಚೆಲ್ಲಬೇಕು. (ಎಂದು ತಲೆಯ ಮೇಲೆ ಪ್ರೋಕ್ಷಿಸಿ "**ಓಂ ಭೂರ್ಭುವಸ್ಸುವಃ**" ಎಂದು ಹೇಳಿ ತನ್ನನ್ನೇ ಪರಿಷೇಚನೆ ಮಾಡಬೇಕು.)

(8) **ಆತ್ಮಶುದ್ಧಿಯ ಮಂತ್ರಾಚಮನ**— (**ಸೂರ್ಯಶ್ಚೇತ್ಯನುವಾಕಸ್ಯ ಅಗ್ನಿರ್ಋಷಿಃ ದೇವೀಗಾಯತ್ರೀ ಛನ್ದಃ ಸೂರ್ಯೋ ದೇವತಾ** ಎಂದು ನ್ಯಾಸಮಾಡಿ **ಅಪಾಂಪ್ರಾಶನೇ ವಿನಿಯೋಗಃ** ಎಂದು ಕೈಯಲ್ಲಿ ಆಚಮನದಂತೆ ತೀರ್ಥವನ್ನು ತೆಗೆದುಕೊಂಡು) **ಸೂರ್ಯಶ್ಚ ಮಾಮನ್ಯುಶ್ಚ ಮನ್ಯುಪತಯಶ್ಚ ಮನ್ಯುಕೃತೇಭ್ಯಃ । ಪಾಪೇಭ್ಯೋ ರಕ್ಷನ್ತಾಂ । ಯದ್ರಾತ್ರ್ಯಾ ಪಾಪಮಕಾರ್ಷಂ । ಮನಸಾ ವಾಚಾ ಹಸ್ತಾಭ್ಯಾಂ । ಪದ್ಭ್ಯಾಮುದರೇಣ ಶಿಶ್ನಾ । ರಾತ್ರಿಸ್ತದವಲುಮ್ಪತು । ಯತ್ಕಿಞ್ಚ ದುರಿತಂ ಮಯಿ । ಇದಮಹಂ ಮಾಮಮೃತಯೋನೌ ಸೂರ್ಯೇ ಜ್ಯೋತಿಷಿ ಜುಹೋಮಿ ಸ್ವಾಹಾ ॥** ಎಂಬ ಅನುವಾಕವನ್ನು ಹೇಳಿ ತೀರ್ಥವನ್ನು ಪಾನಮಾಡಬೇಕು.

(9) ಒಂದಾವರ್ತಿ ಆಚಮನವನ್ನು ಮಾಡಬೇಕು.

(10) **ದ್ವಿತೀಯಮಾರ್ಜನೆ**— **ದಧಿಕ್ರಾವ್ಣ್ಣೋ ಅಕಾರಿಷಂ । ಜಿಷ್ಣೋರಶ್ವಸ್ಯ ವಾಜಿನಃ । ಸುರಭಿನೋ ಮುಖಾಕರತ್ । ಪ್ರಣ ಆಯೂಂಷಿ ತಾರಿಷತ್ । ಆಪೋಹಿಷ್ಠಾ ಮಯೋ ಭುವಃ .... ಆಪೋಜನ**

ಯಥಾ ಚನಃ ॥ (ಓಂ ಭೂರ್ಭುವಸ್ಸುವಃ) ಎಂದು ಒಂದೊಂದು ಮಂತ್ರಕ್ಕೂ ತಲೆಯಮೇಲೆ ಪ್ರೋಕ್ಷಿಸಿ ಮೇಲೆ 7 ನೇಯ ವಿಧಿಯಲ್ಲಿ ಹೇಳಿದಂತೆ ಮಾಡಬೇಕು. (ದಧಿಕ್ರಾವಿಣ್ಣೊ ಇತಿ ಮಂತ್ರಸ್ಯ । ವಾಮದೇವ ಋಷಿಃ । ಅನುಷ್ಟುಪ್ ಛನ್ದಃ । ದಧಿಕ್ರಾವಾ ದೇವತಾ ॥ ಎಂದು ನ್ಯಾಸಮಾಡಿ ಅಪಾಂಪ್ರೋಕ್ಷಣೇ ವಿನಿಯೋಗಃ ಎಂದು ಹೇಳಿ ಪ್ರೋಕ್ಷಣೆ ಮಾಡಿಕೊಳ್ಳಬೇಕು.)

(11) ಒಂದು ಪ್ರಾಣಾಯಾಮವನ್ನು ಮಾಡಬೇಕು.

(12) ಅರ್ಘ್ಯಪ್ರದಾನ—(ಎದ್ದುನಿಂತು ಓಂ ಅರ್ಘ್ಯಪ್ರದಾನ ಮನ್ತ್ರಸ್ಯ ವಿಶ್ವಾಮಿತ್ರ ಋಷಿಃ । ದೇವೀಗಾಯತ್ರೀ ಛನ್ದಃ । ಸವಿತಾ ದೇವತಾ ॥ ಎಂದುನ್ಯಾಸಮಾಡಿ ಶ್ರೀಭಗವದಾಜ್ಞಯಾ ಶ್ರೀಮನ್ನಾರಾಯಣ ಪ್ರೀತ್ಯರ್ಥಂ ಪ್ರಾತಸ್ಸಂಧ್ಯಾ ಅರ್ಘ್ಯಪ್ರದಾನಂ ಕರಿಷ್ಯೇ ಎಂದು ಸಂಕಲ್ಪಿಸಿ ಅರ್ಘ್ಯಪ್ರದಾನೇ ವಿನಿಯೋಗಃ ಎಂದುಹೇಳಿ) ಪ್ರಾಙ್ಮುಖವಾಗಿ ಸೂರ್ಯನಾರಾಯಣನನ್ನು ಸ್ಮರಿಸುತ್ತಾ ನಿಂತುಕೊಂಡು ಓಂ ಭೂರ್ಭುವಸ್ಸುವಃ ಓಂ - ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯ ಧೀಮಹಿ ಧಿಯೋಯೋನಃ ಪ್ರಚೋದಯಾತ್ ಎಂದು ಮೂರಾವರ್ತಿ ಮುಂಗಾಲಿನ ಮೇಲೆ ನಿಂತು ಎರಡು ಕೈಗಳಲ್ಲಿಯೂ ತೀರ್ಥವನ್ನು ತುಂಬಿಕೊಂಡು ಭ್ರೂಮಧ್ಯದವರೆಗೂ ಕೈಗಳನ್ನು ಮೇಲಕ್ಕೆ ಎತ್ತಿ ಕೆಳಗೆ ಬಿಡಬೇಕು. ಅರ್ಘ್ಯ ಕೊಡುವ ಕಾಲವು ಮೀರಿಹೋಗಿದ್ದರೆ ಪುನಃ ಒಂದು ಪ್ರಾಣಾಯಾಮವನ್ನು ಮಾಡಿ (ಪ್ರಾತಃ ಸಂಧ್ಯಾ ಕಾಲಾತೀತ ಪ್ರಾಯಶ್ಚಿತ್ತಾರ್ಥಂ ತುರ್ಯಾರ್ಘ್ಯಪ್ರದಾನಂ ಕರಿಷ್ಯೇ ಎಂದು ಸಂಕಲ್ಪಿಸಿ) ಮತ್ತೊಂದು ಅರ್ಘ್ಯವನ್ನು ಕೊಡಬೇಕು. (ಓಂ ಭೂರ್ಭುವಸ್ಸುವಃ) ಅಸಾವಾದಿತ್ಯೋ ಬ್ರಹ್ಮ ಎಂದು ಹೇಳಿ ನಿಂತಲ್ಲಿಯೇ ತೀರ್ಥವನ್ನೆರಚುತ್ತಾ ಒಂದು ಪ್ರದಕ್ಷಿಣೆಯನ್ನು ಮಾಡಬೇಕು.

(13) ಒಂದು ಶುದ್ಧಾಚಮನವನ್ನು ಮಾಡಬೇಕು.

(14)* ಬ್ರಹ್ಮತರ್ಪಣ—ಕೇಶವಂ ತರ್ಪಯಾಮಿ ನಾರಾಯಣಂ ತರ್ಪಯಾಮಿ . . . ದಾಮೋದರಂ ತರ್ಪಯಾಮಿ ಎಂದು ಹನ್ನೆರಡು ನಾಮಗಳನ್ನು ಹೇಳಿ ತರ್ಪಣವನ್ನು ಕೊಡಬೇಕು.

---

* ಕೆಲವರು ಅರ್ಘ್ಯವನ್ನು ಕೊಡುವಾಗ ಗಾಯತ್ರೀ ಮಂತ್ರವನ್ನು ಹೇಳುವಾಗ "ಓಂ ತತ್ಸವಿತುರ್ವರೇಣ್ಯಂ" ಎಂದು ಉಚ್ಚರಿಸುತ್ತಾರೆ. ಅರ್ಘ್ಯ ಪ್ರದಾನ ನಿಯಮಗಳನ್ನು ಮುಂದೆ ವಿವರಿಸುತ್ತೇ.

(15) ಎರಡು ಶುದ್ಧಾಚಮನವನ್ನು ಮಾಡಬೇಕು.

(16) † ಓಂ ಶ್ರೀ ಭಗವತ್ಸಮಾರಾಧನಂ ಎಂದು ಸ್ವಲ್ಪ ತೀರ್ಥವನ್ನು ಭಗವಂತನ ಪಾದಾರವಿಂದಗಳ ಮೇಲೆ ಬಿಟ್ಟಂತೆ ಭಾವಿಸಿ ಕೆಳಗೆ ಬಿಟ್ಟು ಕೈಮುಗಿಯಬೇಕು.

## ಗಾಯತ್ರೀ ಮಂತ್ರ ಜಪಕ್ರಮಃ

(17) ಆಸನಶುದ್ಧಿ—ಜಪಾಸನಕ್ಕೆ ಉಚಿತವಾದ ಸ್ಥಳವನ್ನು ನೋಡಿ ಅದನ್ನು ಓಂ ಭೂರ್ಭುವಸ್ಸುವಃ ಎಂದು ತೀರ್ಥದಿಂದ ಪ್ರೋಕ್ಷಿಸಿ ಪ್ರಾಗಗ್ರದರ್ಭೆಗಳನ್ನು ಹರಡಿದ ಆಸನದಮೇಲೆ ಕುಳಿತು, ದರ್ಭಾಪವಿತ್ರವನ್ನು ಧರಿಸಿ ಮೂರಾವರ್ತಿ ಪ್ರಾಣಾಯಾಮವನ್ನು ಮಾಡಬೇಕು.

(18) ಸಙ್ಕಲ್ಪ ಮತ್ತು ನ್ಯಾಸಗಳು—ಶ್ರೀಭಗವದಾಜ್ಞಯಾ ಭಗವತ್ಕೈಂಕರ್ಯರೂಪಂ (ಶ್ರೀಮನ್ನಾರಾಯಣ ಪ್ರೀತ್ಯರ್ಥಂ) *ಅಷ್ಟೋತ್ತರಶತ ಸಂಖ್ಯಯಾ ಪ್ರಾತಸ್ಸಂಧ್ಯಾಙ್ಗತ್ವೇನ ಗಾಯತ್ರೀ ಮಂತ್ರ ಜಪಂ ಕರಿಷ್ಯೇ ಎಂದು ಸಂಕಲ್ಪಿಸಿ (ಆಸನಮಂತ್ರಸ್ಯ ಪೃಥಿವ್ಯಾ ಮೇರು ಪೃಷ್ಠ ಋಷಿಃ ಸುತಲಶ್ಛನ್ದಃ ಶ್ರೀಕೂರ್ಮೋ ದೇವತಾ ಎಂದು ನ್ಯಾಸಮಾಡಿ ಕೂರ್ಮಾಸನೇ ವಿನಿಯೋಗಃ ಎಂದು ಹೇಳಿ ಪೃಥ್ವೀತ್ವಯಾ ಧೃತಾಲೋಕಾ ದೇವಿತ್ವಂ ವಿಷ್ಣುನಾಧೃತಾ ತ್ವಞ್ಚ ಧಾರಯಮಾಂ ದೇವಿ ಪವಿತ್ರಂಕುರುಚಾಸನಮ್ ಎಂದು ಭೂದೇವಿಯನ್ನು ಪ್ರಾರ್ಥಿಸಿ) ಪ್ರಣವಸ್ಯ, ಋಷಿರ್ಬ್ರಹ್ಮಾ, ದೇವೀಗಾಯತ್ರೀಛನ್ದಃ, ಪರಮಾತ್ಮಾ ಶ್ರೀಮನ್ನಾರಾಯಣೋ (ಸವಿತಾ) ದೇವತಾ ಎಂದು ನ್ಯಾಸ ಪೂರ್ವಕ ಉಚ್ಚರಿಸಬೇಕು. (ಓಂ ಭೂರಾದಿ ಸಪ್ತವ್ಯಾಹೃತೀನಾಂ ಅತ್ರಿ, ಭೃಗು, ಕುತ್ಸ, ವಸಿಷ್ಠ, ಗೌತಮ, ಕಾಶ್ಯಪ, ಅಂಗಿರಸ ಋಷಯಃ ಗಾಯತ್ರ್ಯುಷ್ಣಿಗನುಷ್ಟುಬ್ ಬೃಹತೀ ಪಙ್ಕ್ತಿ ತ್ರಿಷ್ಟುಬ್ ಜಗತ್ಯಶ್ಛನ್ದಾಂಸಿ ಅಗ್ನಿ ವಾಯ್ವರ್ಕ ವಾಗೀಶ ವರುಣೇನ್ದ್ರ ವಿಶ್ವೇದೇವಾ ದೇವತಾಃ ಎಂದು ಹೇಳಿ ನ್ಯಾಸಗಳನ್ನುಮಾಡಿ.

(19) ಜಪಃ—ಹತ್ತುಸಲ ಪ್ರಾಣಾಯಾಮವನ್ನು ಮಾಡಬೇಕು. (ಪ್ರಾಣಾಯಾಮ ಮನ್ತ್ರವನ್ನು ಜಪಿಸಬೇಕು.)

(20) ಒಂದು (ಮೂರು) ಪ್ರಾಣಾಯಾಮವನ್ನು ಮಾಡಬೇಕು.

---

† ಶ್ರೀ ಕೃಷ್ಣಾರ್ಪಣಮಸ್ತು ಅಥವಾ ಶ್ರೀ ಭಗವತ್ಸಮಾರಾಧನಂ ಕರಿಷ್ಯೇ ಎಂದು ಉಚ್ಚರಿಸುವ ಪದ್ಧತಿಯುಂಟು.

* ಸಾಧ್ಯವಾದ ಸಂಖ್ಯೆಯನ್ನು ಹೇಳಿ ಜಪಿಸುವ ಪದ್ಧತಿಗಳನ್ನು ಮುಂದೆ ವಿವರಿಸುತ್ತೆ.

(21) ಗಾಯತ್ರೀಧ್ಯಾನ ಪುರಸ್ಸರ ಆವಾಹನೆ—(“ಮುಕ್ತಾವಿದ್ರುಮ ಹೇಮ ನೀಲ ಧವಳ ಚ್ಛಾಯೈರ್ಮುಖೈಸ್ತ್ರೀಕ್ಷಣೈರ್ಯುಕ್ತಾಮಿಂದುಕಲಾನಿಬದ್ಧ ಮುಕುಟಾಂ ತತ್ತ್ವಾರ್ಥವರ್ಣಾತ್ಮಿಕಾಮ್ । ಗಾಯತ್ರೀಂ ವರದಾಭಯಾಂಕುಶಕಶಾಃ ಶುಭ್ರಂ ಕಪಾಲಂ ಗುಣಂ, ಶಂಖಂ ಚಕ್ರಮಥಾರವಿಂದಯುಗಳಂ ಹಸ್ತೈರ್ವಹಂತೀಂ ಭಜೇ ॥” ಎಂದು ಧ್ಯಾನಮಾಡಿ “ಅರ್ಕಮಂಡಲಮಧ್ಯಸ್ಥಾಂ ಸೂರ್ಯಕೋಟಿ ಸಮಪ್ರಭಾಮ್ । ಬ್ರಹ್ಮಾದಿಸೇವ್ಯಪಾದಾಬ್ಜಾಂ ನೌಮಿ ಬ್ರಹ್ಮರಮಾಸಖೀಮ್” ಎಂದು ಹೇಳಿ ಆಯಾತ್ವಿತ್ಯನುವಾಕಸ್ಯ ವಾಮದೇವ ಋಷಿಃ ಅನುಷ್ಟುಪ್ಛಂದಃ ಗಾಯತ್ರೀ ದೇವತಾ ಎಂದು ನ್ಯಾಸಮಾಡಿ ಗಾಯತ್ರ್ಯಾವಾಹನೇ ವಿನಿಯೋಗಃ ಎಂದು ಹೇಳಿ) ಆಯಾತು ವರದಾದೇವಿ ಅಕ್ಷರಂ ಬ್ರಹ್ಮಸಮ್ಮಿತಂ ಗಾಯತ್ರೀಂ ಛಂದಸಾಂ ಮಾತಾ ಇದಂ ಬ್ರಹ್ಮ ಜುಷಸ್ವನಃ ಓಜೋಸಿ ಸಹೋಸಿ ಬಲಮಸಿ ಭ್ರಾಜೋಸಿ ದೇವಾನಾಂ ಧಾಮನಾಮಾಸಿ ವಿಶ್ವಮಸಿ ವಿಶ್ವಾಯುಃ ಸರ್ವಮಸಿ ಸರ್ವಾಯುಃ ಎಂದು ಹೇಳಿ; ಅಭಿಭೂರೋಂ ಗಾಯತ್ರೀಮಾವಾಹಯಾಮಿ ಸಾವಿತ್ರೀಮಾವಾಹಯಾಮಿ ಸರಸ್ವತೀಮಾವಾಹಯಾಮಿ ಎಂದು ಅನುವಾಕದಿಂದ ಆವಾಹನೆ ಮಾಡಿ,* ಸಾವಿತ್ರ್ಯಾ ಋಷಿರ್ವಿಶ್ವಾಮಿತ್ರಃ ದೇವೀಗಾಯತ್ರೀಛಂದಃ (ಪರಮಾತ್ಮಾ) ಸವಿತಾ ದೇವತಾ ಎಂದು ನ್ಯಾಸಮಾಡಿ (ಶಿರಸೋ ಬ್ರಹ್ಮಾ ಋಷಿಃ ಅನುಷ್ಟುಪ್ಛಂದಃ ಪರಮಾತ್ಮಾ ದೇವತಾ ಎಂಬದಾಗಿ ನ್ಯಾಸಮಾಡಿ ಸರ್ವೇಷಾಂ ಪ್ರಾಣಾಯಾಮೇ ಜಪೇ ವಿನಿಯೋಗಃ ಎಂದು ಹೇಳಿ ಪ್ರಾತರ್ಧ್ಯಾಯಾಮಿ ಗಾಯತ್ರೀಂ, ರವಿಮಂಡಲ ಮಧ್ಯಗಾಮ್, ಋಗ್ವೇದಮುಚ್ಚಾರಯಂತೀಂ ರಕ್ತವರ್ಣಾಂ ಕುಮಾರಿಕಾಮ್, ಅಕ್ಷಮಾಲಾಕರಾಂ ಬ್ರಹ್ಮದೈವತ್ಯಾಂ ಹಂಸವಾಹನಾಮ್ ಎಂದು ಧ್ಯಾನ ಮಾಡಬೇಕು.)

(22) ಗಾಯತ್ರೀ ಜಪ— † ಓಂ ಭೂರ್ಭುವಸ್ಸುವಃ ಓಂ ತತ್ಸ

---

* ತಲೆಯನ್ನು, ಮೂಗಿನ ತುದಿಯನ್ನು (ಗಡ್ಡವನ್ನು) ಮತ್ತು ಹೃದಯವನ್ನು ಕ್ರಮವಾಗಿ ಈ ಮಂತ್ರಗಳನ್ನು ಹೇಳಿ ಸ್ಪರ್ಶಿಸಬೇಕು.

† ಗಾಯತ್ರೀ ಮಂತ್ರ— ಈ ಮಂತ್ರವು 24 ಅಕ್ಷರಗಳುಳ್ಳದ್ದಾಗಿಯೂ, ಮೂರು ಪಾದಗಳುಳ್ಳದ್ದಾಗಿಯೂ ಇದೆ. ಇದರ ಅರ್ಥ—ಯಾವನು ನಮ್ಮ ಧರ್ಮಬುದ್ಧಿಯನ್ನು ಪ್ರೇರಿಸುತ್ತಾನೋ ಅಂತಹ ಪ್ರಸಿದ್ಧ ತೇಜೋಮಯನಾದ ಸವಿತೃ ಸೂರ್ಯನಿಗೆ ಅಂತರ್ಯಾಮಿಯಾದ ಶ್ರೀಮನ್ನಾರಾಯಣನ ಶ್ರೇಷ್ಠವಾದ ತೇಜಸ್ಸನ್ನು ಧ್ಯಾನಮಾಡುತ್ತೇನೆ. ಮುಂದೆ ವಿವರಿ

ವಿತುರ್ವರೇಣ್ಯಂ | ಭರ್ಗೋ ದೇವಸ್ಯ ಧೀಮಹಿ ಧಿಯೋ ಯೋ ನಃ ಪ್ರಚೋದಯಾತ್ | ಎಂದು ನಿರ್ದಿಷ್ಟ ಸಂಖ್ಯೆಯ ಪ್ರಕಾರ ಮೌನವಾಗಿ ಭಗವಂತನನ್ನು ಧ್ಯಾನಿಸುತ್ತಾ ಜಪಿಸಬೇಕು.

(23) ಮೂರು ಪ್ರಾಣಾಯಾಮವನ್ನು ಮಾಡಬೇಕು.

(24) ಜಪೋಪಸ್ಥಾನ ಸಂಕಲ್ಪ—ಶ್ರೀಭಗವದಾಜ್ಞಯಾ ಭಗವತ್ಕೈಂಕರ್ಯರೂಪಂ (ಶ್ರೀಮನ್ನಾರಾಯಣ ಪ್ರೀತ್ಯರ್ಥಂ) ಪ್ರಾತಃ ಸನ್ಧ್ಯಾವನ್ದನ ಗಾಯತ್ರೀ ಮನ್ತ್ರ ಜಪೋಪಸ್ಥಾನಂ ಕರಿಷ್ಯೇ | ಎಂದು ಸಂಕಲ್ಪಿಸಿ (ಉತ್ತಮ ಇತ್ಯನುವಾಕಸ್ಯ, ವಾಮದೇವ ಋಷಿಃ ಅನುಷ್ಟುಪ್ ಛನ್ದಃ, ಗಾಯತ್ರೀ ದೇವತಾ | ಎಂದು ನ್ಯಾಸಮಾಡಿ ಗಾಯತ್ರ್ಯಾ ಉದ್ವಾಸನೇ ವಿನಿಯೋಗಃ ಎಂದು ಹೇಳಿ;

(25) ಗಾಯತ್ರೀ ಉದ್ವಾಸನೆ—ಉತ್ತಮೇ ಶಿಖರೇ ದೇವಿ ಭೂಮ್ಯಾಂ ಪರ್ವತ ಮೂರ್ಧನಿ | ಬ್ರಾಹ್ಮಣೇಭ್ಯೋ ಹ್ಯನುಜ್ಞಾನಂ ಗಚ್ಛ ದೇವಿ ಯಥಾ ಸುಖಮ್ || ಎಂದು ಗಾಯತ್ರೀ ಉದ್ವಾಸನೆ ಮಾಡಿ ಎದ್ದು ನಿಂತುಕೊಂಡು ಕೈಮುಗಿಯುತ್ತಾ;

(26) ಉಪಸ್ಥಾನ—(ಮಿತ್ರಸ್ಯೇತಿ [ತ್ರ್ಯೃಚಸ್ಯ] ಋಚಾಂ, ವಿಶ್ವಾಮಿತ್ರ ಋಷಿಃ | ಆದ್ಯಸ್ಯ ವಿರಾಟ್ ಛನ್ದಃ ಪರಯೋರ್ಗಾಯತ್ರೀ ತ್ರಿಷ್ಟುಭೌ ಛನ್ದಾಂಸಿ | ಮಿತ್ರೋ ದೇವತಾ | ಪ್ರಾತರುಪಸ್ಥಾನೇ ವಿನಿಯೋಗಃ | ಎಂದು ಹೇಳಿ) "ಮಿತ್ರಸ್ಯ ಚರ್ಷಣೀ ಧೃತಶ್ಶ್ರವೋ ದೇವಸ್ಯ ಸಾನಸಿಮ್ | ಸತ್ಯಂ ಚಿತ್ರ ಶ್ರವಸ್ತಮಮ್ | ಮಿತ್ರೋ ಜನಾನ್ ಯಾತಯತಿ ಪ್ರಜಾನನ್ಮಿತ್ರೋ ದಾಧಾರ ಪೃಥಿವೀಮುತ ದ್ಯಾಮ್ | ಮಿತ್ರಃ ಕೃಷ್ಟೀರನಿಮಿಷಾಽಭಿಚಷ್ಟೇ | ಸತ್ಯಾಯ ಹವ್ಯಂ ಘೃತವದ್ವಿಧೇಮ | ಪ್ರಸಮಿತ್ರ ಮರ್ತೋ ಅಸ್ತು ಪ್ರಯಸ್ವಾನ್ಯಸ್ತ ಆದಿತ್ಯ ಶಿಕ್ಷತಿ ವ್ರತೇನ | ನ ಹನ್ಯತೇ ನ ಜೀಯತೇ ತ್ವೋತೋ ನೈನಮಗ್ಂಹೋ ಅಶ್ನೋತ್ಯನ್ತಿತೋ ನ ದೂರಾತ್ ||" ಎಂದು ಆದಿತ್ಯ ಮಂಡಲ ಮಧ್ಯವರ್ತಿಯಾಗಿರುವ ಭಗವಂತನಾದ ಶ್ರೀಮನ್ನಾರಾಯಣನನ್ನು ಧ್ಯಾನಿಸುತ್ತಾ ಉಪಸ್ಥಾನ ಮಾಡಬೇಕು.

---

[illegible] 10, 28, 108, ಅಥವಾ 1008 [illegible].

† [illegible]

‡ "ಚರ್ಷಣೀ" ಎಂದು ಪಾಠಾಂತರ.



2

**(27) ಸರ್ವದೇವತಾ ನಮಸ್ಕಾರ—**

"ಸಂಧ್ಯಾಯೈ ನಮಃ" ಎಂದು ಪೂರ್ವದಿಕ್ಕಿಗೂ, "**ಸಾವಿತ್ರ್ಯೈ ನಮಃ**" ಎಂದು ದಕ್ಷಿಣ ದಿಕ್ಕಿಗೂ, "**ಗಾಯತ್ರ್ಯೈ ನಮಃ**" ಎಂದು ಪಶ್ಚಿಮ ದಿಕ್ಕಿಗೂ, "**ಸರಸ್ವತ್ಯೈ ನಮಃ**" ಎಂದು ಉತ್ತರ ದಿಕ್ಕಿಗೂ ಕ್ರಮವಾಗಿ ನಮಸ್ಕರಿಸಿ "**ಸರ್ವಾಭ್ಯೋ ದೇವತಾಭ್ಯೋ ನಮೋನಮಃ**" ಎಂದು ಎಲ್ಲಾ ದೇವತೆಗಳಿಗೂ ಪ್ರದಕ್ಷಿಣಾ ಪೂರ್ವಕ ನಮಸ್ಕರಿಸಿ "**ಕಾಮೋಽಕಾರ್ಷೀನ್ಮನ್ಯುರಕಾರ್ಷೀತ್ (ನಮೋನಮಃ)**" ಎಂದು ಕೈ ಜೋಡಿಸಿ ಪ್ರಭಾತಸಮಾದ ಸೂರ್ಯನಾರಾಯಣನನ್ನು ನೋಡಿ ಪ್ರಣಾಮ ಮಾಡಬೇಕು.

**(28) ಅಭಿವಾದನೆ—**"**ಅಭಿವಾದಯೇ ......... ಆರ್ಷೇಯ ....... ಪ್ರವರಾನ್ವಿತಃ ...... ಗೋತ್ರಃ ...... ಸೂತ್ರಃ ... ಶಾಖಾಧ್ಯಾಯೀ ...... ಶರ್ಮಾ ನಾಮಾಹಮಸ್ಮಿ ಭೋಃ**" ಎಂಬದಾಗಿ ಅವರವರ ಕುಲದ ಋಷಿಗಳನ್ನೂ, ಗೋತ್ರ, ಸೂತ್ರ, ವೇದ, ಶಾಖೆ, ಮತ್ತು ಹೆಸರನ್ನೂ ಕ್ರಮವಾಗಿ ಹೇಳಿ* ಅಭಿನಂದಿಸಬೇಕು.

**(29) ದಿಗ್ದೇವತಾ ನಮಸ್ಕಾರ—**

**ಪ್ರಾಚ್ಯೈ ದಿಶೇ ನಮಃ**—ಎಂದು ಪೂರ್ವದಿಕ್ಕಿಗೂ
**ದಕ್ಷಿಣಾಯೈ ದಿಶೇ ನಮಃ**—ಎಂದು ದಕ್ಷಿಣದಿಕ್ಕಿಗೂ
**ಪ್ರತೀಚ್ಯೈ ದಿಶೇ ನಮಃ**—ಎಂದು ಪಶ್ಚಿಮದಿಕ್ಕಿಗೂ
**ಉದೀಚ್ಯೈ ದಿಶೇ ನಮಃ**—ಎಂದು ಉತ್ತರದಿಕ್ಕಿಗೂ
**ಊರ್ಧ್ವಾಯ ನಮಃ**—ಎಂದು ಮೇಲುಗಡೆಗೂ
**ಅಧರಾಯ ನಮಃ**—ಎಂದು ಕೆಳಗಡೆಗೂ
**ಅಂತರಿಕ್ಷಾಯ ನಮಃ**—ಎಂದು ಆಕಾಶಕ್ಕೂ
**ಭೂಮ್ಯೈ ನಮಃ**—ಎಂದು ಭೂಮಿಗೂ
**ಬ್ರಹ್ಮಣೇ ನಮಃ**—ಎಂದು ಪರಬ್ರಹ್ಮನಿಗೂ
**(ವಿಷ್ಣವೇ ನಮಃ)**—ಎಂದು ವಿಷ್ಣುವಿಗೂ

ನಮಸ್ಕಾರಗಳನ್ನು ಕ್ರಮವಾಗಿ ಮಾಡಬೇಕು.

---

* ಅಭಿವಾದನಮಾಡುವಾಗ ತನ್ನ ಬಲಗೈಯಿಂದ ಹಿರಿಯರ ಬಲಗಾಲನ್ನೂ, ಎಡಗೈಯಿಂದ ಅವರ ಎಡಗಾಲನ್ನೂ ಸ್ಪರ್ಶಮಾಡಬೇಕು. ಹೀಗೆ ಸ್ಪರ್ಶಿಸುವಾಗ ನಮ್ಮ ಬಲಗೈಯು ಎಡಗೈಯ ಮೇಲುಗಡೆ ಬರಬೇಕು.—

(30) (a) ನಮಸ್ಕಾರಗತಿ—"ಆಕಾಶಾತ್ಪತಿತಂ ತೋಯಂ ಯಥಾ ಗಚ್ಛತಿ ಸಾಗರಮ್ । ಸರ್ವದೇವನಮಸ್ಕಾರಃ ಕೇಶವಂ ಪ್ರತಿ ಗಚ್ಛತಿ ॥ ಶ್ರೀ ಕೇಶವಂ ಪ್ರತಿಗಚ್ಛತಿ ಓಂ ನಮೋನಮಃ"॥

(b) ರಕ್ಷಾಪ್ರಾರ್ಥನೆ—"ನಮಸ್ಸವಿತ್ರೇ ಜಗದೇಕಚಕ್ಷುಷೇ ಜಗತ್ಪ್ರಸೂತಿಸ್ಥಿತಿನಾಶಹೇತವೇ । ತ್ರಯೀಮಯಾಯ ತ್ರಿಗುಣಾತ್ಮಧಾರಿಣೇ ವಿರಿಞ್ಚಿನಾರಾಯಣಶಙ್ಕರಾತ್ಮನೇ ॥ ಧ್ಯೇಯಸ್ಸದಾ ಸವಿತೃಮಣ್ಡಲಮಧ್ಯವರ್ತೀ ನಾರಾಯಣಸ್ಸರಸಿಜಾಸನಸನ್ನಿವಿಷ್ಟಃ । ಕೇಯೂರವಾನ್ಮಕರಕುಣ್ಡಲವಾನ್ ಕಿರೀಟೀ ಹಾರೀ ಹಿರಣ್ಮಯವಪುಃ ಧೃತಶಙ್ಖಚಕ್ರಃ ॥ ಶಙ್ಖಚಕ್ರಗದಾಪಾಣೇ ದ್ವಾರಕಾನಿಲಯಾಚ್ಯುತ । ಗೋವಿನ್ದ ಪುಣ್ಡರೀಕಾಕ್ಷ ರಕ್ಷ ಮಾಂ ಶರಣಾಗತಮ್ ॥" ಎಂದು ಹೇಳಿ ದೇವರಿಗೆ ನಮಸ್ಕರಿಸಬೇಕು. ಅನಂತರ—

(c) ಒಂದಾವರ್ತಿ ಅಭಿವಾದನೆಯನ್ನು ಮಾಡಬೇಕು.

(31) ಎರಡು ಆಚಮನವನ್ನು ಮಾಡಬೇಕು.

(32) ಕರ್ಮಫಲ ಸಮರ್ಪಣೆ—ಅಥವಾ ಕರ್ಮಸನ್ನ್ಯಾಸಯೋಗ—"ಕಾಯೇನ ವಾಚಾ ಮನಸೇನ್ದ್ರಿಯೈರ್ವಾ ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್ । ಕರೋಮಿ ಯದ್ಯತ್ಸಕಲಂ ಪರಸ್ಮೈ ನಾರಾಯಣಾಯೇತಿ ಸಮರ್ಪಯಾಮಿ ॥ ಎಂದು ಹೇಳಿ "ಸರ್ವಂ ಶ್ರೀಕೃಷ್ಣಾರ್ಪಣಮಸ್ತು" ಎಂದು ಕರ್ಮಫಲಗಳೆಲ್ಲವನ್ನು ಭಗವಂತನಾದ ಶ್ರೀಮನ್ನಾರಾಯಣನಿಗೆ ಅರ್ಪಿಸಿದಂತೆ ಸಂತೋಷಚಿತ್ತದಿಂದ ಭಾವಿಸಿ ಒಂದು ಅರ್ಘ್ಯವನ್ನು ಕೊಡಬಹುದು.

(33) ನಾಲ್ಕು ಮುಖ್ಯಕ್ಷೇತ್ರಗಳ ವಂದನೆ—"ಶ್ರೀರಙ್ಗಮಙ್ಗಳಮಣಿಂ ಕರುಣಾನಿವಾಸಮ್ ॥ ಶ್ರೀರಂಗ ॥ ಶ್ರೀವೇಙ್ಕಟಾದ್ರಿ ಶಿಖರಾಲಯ ಕಾಳಮೇಘಮ್ ॥ ತಿರುಪತಿ ॥ ಶ್ರೀಹಸ್ತಿಶೈಲ ಶಿಖರೋಜ್ಜ್ವಲ ಪಾರಿಜಾತಂ ॥ ಕಾಂಚೀಪುರ ॥ ಶ್ರೀಶಂ ನಮಾಮಿ ಶಿರಸಾ ಯದುಶೈಲದೀಪಮ್ ॥ ಮೇಲುಕೋಟೆ-ತಿರುನಾರಾಯಣಪುರ ॥ ಎಂದು ನಾಲ್ಕು ಮುಖ್ಯಕ್ಷೇತ್ರದ ವಿಷ್ಣುದೇವರುಗಳನ್ನು ಸ್ಮರಿಸಿ *ಮನೆದೇವರಿಗೂ,

---

* ಕೆಲವರು "ಸಮುದ್ರಾಯ ಪುರುಷಾಯ, ಯಮುನಾನಾರಾಯಣ್ಯೈ, ಸ ಮಹೀ" ಎಂದು ತಾವು ಕಲಿತ ಸೂಕ್ತವನ್ನು ಹೇಳಿ [illegible] ಮಾಡಿ ಅಭಿವಾದನೆಯನ್ನು ಮಾಡುವುದುಂಟು.

ಗುರುಹಿರಿಯರಿಗೂ ಸಾಷ್ಟಾಂಗವಾಗಿ ನಮಸ್ಕರಿಸಬೇಕು.

॥ ಇತಿ ಪ್ರಾತಸ್ಸನ್ಧ್ಯಾವನ್ದನಂ ಸಂಪೂರ್ಣಮ್. ॥

## II ಮಾಧ್ಯಾಹ್ನಿಕ ಕ್ರಮಃ

ಸೂಚನೆ—ಈ ಕರ್ಮವನ್ನು ಶುಚಿಯಾಗಿ ಮಾಡಬೇಕು. ಈ ಕರ್ಮದಲ್ಲಿ ಪ್ರಾತಸ್ಸನ್ಧ್ಯಾವನ್ದನೆಗೂ ಮತ್ತು ಇದಕ್ಕೂ ಇರುವ ಕೆಲವು ವಿಧಿ ವ್ಯತ್ಯಾಸಗಳನ್ನು ಮಾತ್ರ ಸೂಚಿಸಿದೆ. ಉಳಿದವನ್ನೆಲ್ಲಾ ಪ್ರಾತಸ್ಸನ್ಧ್ಯಾವನ್ದನೆಯಂತೆಯೇ ಆಚರಿಸಬೇಕು. ಈ ಕರ್ಮವನ್ನು ಮಧ್ಯಾಹ್ನ ಸೂರ್ಯನು ಸುಮಾರು 12 ಘಂಟೆಯಲ್ಲಿ ನೆತ್ತಿಯಮೇಲೆ ಬಂದಾಗ ಆಚರಿಸಬೇಕು.*

5. ಸಙ್ಕಲ್ಪ—"ಶ್ರೀ ಭಗವದಾಜ್ಞಯಾ ........ ಮಾಧ್ಯಾಹ್ನಿಕಂ (ಸನ್ಧ್ಯಾಮುಪಾಸಿಷ್ಯೇ) ಕರಿಷ್ಯೇ" ॥

8. ಅಭಿಮನ್ತ್ರಣೆಯ ಮಂತ್ರ ಬದಲು—("ಆಪಃ ಪುನನ್ತ್ವಿತಿ ಮನ್ತ್ರಸ್ಯ [ಸ್ವಯಮ್ಭೂಕಸ್ಯ] । ಆಪ ಋಷಿಃ [ವಿಶ್ವೇದೇವಾ ಋಷಯಃ] ಅನುಷ್ಟುಪ್ಛನ್ದಃ । ಬ್ರಹ್ಮಣಸ್ಪತಿರ್ದೇವತಾ [ಆಪೋದೇವತಾ] ॥" ಎಂದು ನ್ಯಾಸಮಾಡಿ "ಅಭಿಮನ್ತ್ರಣೇ ವಿನಿಯೋಗಃ" ಎಂದು ಹೇಳಿ) ಕೈಯಲ್ಲಿ ತೀರ್ಥವನ್ನು ತೆಗೆದುಕೊಂಡು "ಆಪಃ ಪುನನ್ತು ಪೃಥಿವೀಂ, ಪೃಥಿವೀ ಪೂತಾ ಪುನಾತು ಮಾಮ್ । ಪುನನ್ತು ಬ್ರಹ್ಮಣಸ್ಪತಿಃ. ಬ್ರಹ್ಮಪೂತಾ ಪುನಾತು ಮಾಮ್ । ಯದುಚ್ಛಿಷ್ಟಮಭೋಜ್ಯಂ ಯದ್ವಾ ದುಶ್ಚರಿತಂ ಮಮ । ಸರ್ವಂ ಪುನನ್ತು ಮಾಮಾಪೋಽಸತಾಂ ಚ ಪ್ರತಿಗ್ರಹ(ಗ್ಂ)ಸ್ವಾಹಾ ॥" ಎಂದು ಹೇಳಿ ತೀರ್ಥವನ್ನು ಸ್ವೀಕರಿಸಬೇಕು.

12. ಅರ್ಘ್ಯಪ್ರದಾನ ("ಓಂ ಅರ್ಘ್ಯಪ್ರದಾನಮನ್ತ್ರಸ್ಯ........ ಮಾಧ್ಯಾಹ್ನಿಕ ಅರ್ಘ್ಯಪ್ರದಾನಂ ಕರಿಷ್ಯೇ.... ವಿನಿಯೋಗಃ" ಎಂದು ಹೇಳಿ) ಎರಡು ಅರ್ಘ್ಯವನ್ನು ಕೊಡಬೇಕು. [ಕೆಲವರು ಒಂದು ಅರ್ಘ್ಯವನ್ನು ಕೊಡುತ್ತಾರೆ.] ಅನಂತರ ಪ್ರಾತಸ್ಸನ್ಧ್ಯಾವನ್ದನೆಯ ಕ್ರಮವನ್ನು ಅನುಸರಿಸಬೇಕು.

18. ಸಙ್ಕಲ್ಪ ಮತ್ತು ನ್ಯಾಸಗಳು—"ಶ್ರೀ ಭಗವದಾಜ್ಞಯಾ ........ ಮಾಧ್ಯಾಹ್ನಿಕಸನ್ಧ್ಯಾ ಗಾಯತ್ರೀ ಮನ್ತ್ರಜಪಂ ಕರಿಷ್ಯೇ

* ಕೆಲವರು ಈ ಕರ್ಮವನ್ನು [illegible]; ಮುಖ್ಯವಾಗಿ ಮಧ್ಯಾಹ್ನಕಾಲದಲ್ಲಿ ಮಾಡುವ ಪದ್ಧತಿಯುಂಟು; ಮತ್ತೆ ಕೆಲವರು ಆ ದಿವಸ [illegible] ಯಾವಾಗಲೇ ಈ ಕರ್ಮವನ್ನು ಮಾಡಿ ಅನಂತರ ಊಟಕ್ಕೆ ಹೋಗುವುದುಂಟು.

21. ಗಾಯತ್ರೀಧ್ಯಾನ ಪುರಸ್ಸರ ಆವಾಹನೆ—

("ಓಂ ಭೂರಾದಿ..........ಸರ್ವೇಷಾಂ ಪ್ರಾಣಾಯಾಮೇ ವಿನಿಯೋಗಃ" ॥ ಎಂದುಹೇಳಿ "ಮಧ್ಯಾಹ್ನೇತು ಸಾವಿತ್ರೀಂ ರವಿಮಣ್ಡಲ ಮಧ್ಯಗಾಮ್ । ಯಜುರ್ವೇದಂ ವ್ಯಾಹರನ್ತೀಂ ಶ್ವೇತಾಂ ಶೂಲಕರಾಂ ಶಿವಾಮ್ ॥ ಯುವತೀಂ ರುದ್ರದೈವತ್ಯಾಂ ಧ್ಯಾಯಾಮಿ ವೃಷ ವಾಹನಾಮ್" ॥ ಎಂಬದಾಗಿ ಧ್ಯಾನವಮಾಡಬೇಕು.)

24. ಜಪೋಪಸ್ಥಾನ ಸಙ್ಕಲ್ಪ—"ಶ್ರೀಭಗವದಾಜ್ಞಯಾ.......... ..........ಮಾಧ್ಯಾಹ್ನಿಕ ಸನ್ಧ್ಯಾಗಾಯತ್ರೀ ಮನ್ತ್ರಜಪ ಉಪಸ್ಥಾನ ಕರಿಷ್ಯೇ ("ಉತ್ತಮಇತ್ಯನುವಾಕಸ್ಯ ..................ಗಾಯತ್ರೀ ದೇವತಾ..............ವಿನಿಯೋಗಃ" ಎಂದು ಹೇಳಿ)

26. ಉಪಸ್ಥಾನ—(ಆಸತ್ಯೇನೇತಿಷಣ್ಣಾಂ ಹಿರಣ್ಯಸ್ತೂಪ ಋಷಿಃ । ಅದ್ಯಾದ್ಯೋಸ್ತ್ರಿಷ್ಟುಪ್ ಚತಸೃಣಾಂ ಗಾಯತ್ರೀಜಗತ್ಯುಷ್ಣಿಕ್ ತ್ರಿಷ್ಟುಭಶ್ಛನ್ದಾಂಸಿ [ಜಗತೀ ತ್ರಿಷ್ಟುಬನುಷ್ಟುಭಃ ಛಂದಾಂಸಿ] ಸವಿತಾದೇವತಾ ॥ ಎಂದು ನ್ಯಾಸಮಾಡಿ "ಮಾಧ್ಯಾಹ್ನಿಕ ಸನ್ಧ್ಯೋಪಸ್ಥಾನೇ ವಿನಿಯೋಗಃ" ಎಂದು ಹೇಳಿದನಂತರ) ಸೂರ್ಯನಾರಾಯಣನನ್ನು ಸ್ಮರಿಸುತ್ತ "ಆಸತ್ಯೇನರಜಸಾ ವರ್ತಮಾನೋ ನಿವೇಶಯನ್ನಮೃತಂ ಮರ್ತ್ಯಂಚ । ಹಿರಣ್ಯಯೇನ ಸವಿತಾರಥೇನಾದೇವೋಯಾತಿ ಭುವನಾ ವಿಪಶ್ಯನ್ । ಉದ್ವಯಂ ತಮಸಸ್ಪರಿ, ಪಶ್ಯನ್ತೋ ಜ್ಯೋತಿರುತ್ತರಂ । ದೇವನ್ದೇವತ್ರಾ ಸೂರ್ಯಮಗನ್ಮ ಜ್ಯೋತಿರುತ್ತಮಂ । ಉದುತ್ಯಂ ಜಾತವೇದಸಂ, ದೇವಂ ವಹನ್ತಿ ಕೇತವಃ । ದೃಶೇ ವಿಶ್ವಾಯ ಸೂರ್ಯಂ । ಚಿತ್ರಂ ದೇವಾನಾಮುದಗಾದನೀಕಂ । ಚಕ್ಷುರ್ಮಿತ್ರಸ್ಯ ವರುಣಸ್ಯಾಗ್ನೇಃ । ಆಪ್ರಾದ್ಯಾವಾ ಪೃಥಿವೀ ಅಂತರಿಕ್ಷ(ಗ್ಂ)ಂ । ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ । ತಚ್ಚಕ್ಷುರ್ದೇವಹಿತಂ ಪುರಸ್ತಾಚ್ಛುಕ್ರಮುಚ್ಚರತ್" ॥ ಎಂದು ಹೇಳಿ ಕೈಮುಗಿದು ಬೆರಳುಗಳ ಸಂದಿನಿಂದ (ಅರ್ಕಮುದ್ರೆ) ಸೂರ್ಯನಾರಾಯಣನನ್ನು ನೋಡುತ್ತಾ "ಪಶ್ಯೇಮ ಶರದಶ್ಶತಮ್ । ಜೀವೇಮ ಶರದಶ್ಶತಮ್ । ನನ್ದಾಮ ಶರದಶ್ಶತಮ್ । ಮೋದಾಮ ಶರದಶ್ಶತಮ್ । ಭವಾಮ ಶರದಶ್ಶತಮ್ । ಶೃಣವಾಮ ಶರದಶ್ಶತಮ್ । ಪ್ರಬ್ರವಾಮ ಶರದಶ್ಶತಮ್ । ಅಜೀತಾಸ್ಸ್ಯಾಮ ಶರ

ದಕ್ಷತೇಮ್ । ಜ್ಯೋಕ್ಚ ಸೂರ್ಯನ್ದೃಶೇ" ॥ ಎಂದುಹೇಳಿದನಂತರ "ಯಉದಗಾನ್ ಮಹತೋಽರ್ಣವಾದ್ವಿಭ್ರಾಜಮಾನಸ್ಸರಿರಸ್ಯ ಮಧ್ಯಾತ್ ಸಮಾವೃಷಭೋ * ರೋಹಿತಾಕ್ಷಸ್ಸೂರ್ಯೋ ವಿಪಶ್ಚಿನ್ಮನಸಾ ಪುನಾತು" ಎಂದು ಹೇಳಿ ಉಪಸ್ಥಾನಮಾಡಿ ಅನಂತರ 34 ನೆ ವಿಧಿಗಳವರೆಗೂ ಆಚರಿಸಿ ಈ ಕರ್ಮವನ್ನು ಪೂರೈಸಬೇಕು.

॥ ಇತಿ ಮಾಧ್ಯಾಹ್ನಿಕಕ್ರಮಃ ಸಂಪೂರ್ಣಮ್ ।

---

## III ಸಾಯಂ ಸನ್ಧ್ಯಾವನ್ದನ ಕ್ರಮಃ

**ಸೂಚನೆ:**—ಈ ಕರ್ಮವನ್ನು × ಪಶ್ಚಿಮಾಭಿಮುಖನಾಗಿ ಶುಚಿರ್ಭೂತರಾಗಿ ಆಚರಿಸಬೇಕು. ಈ ಕರ್ಮದಲ್ಲಿ ಪ್ರಾತಸ್ಸನ್ಧ್ಯಾವನ್ದನೆಗೂ ಮತ್ತು ಇದಕ್ಕೂ ಇರುವ ಕೆಲವು ವಿಧಿ ವ್ಯತ್ಯಾಸಗಳನ್ನು ಮಾತ್ರ ಸೂಚಿಸಿದೆ. ಉಳಿದವನ್ನೆಲ್ಲಾ ಪ್ರಾತಸ್ಸನ್ಧ್ಯಾವನ್ದನೆಯಂತೆಯೇ ಆಚರಿಸಬೇಕು.

5. **ಸಙ್ಕಲ್ಪ—ಶ್ರೀಭಗವದಾಜ್ಞಯಾ** .......................... **ಸಾಯಂ ಸನ್ಧ್ಯಾವನ್ದನಂ ಕರಿಷ್ಯೇ** ( ಸಾಯಂಸನ್ಧ್ಯಾಮುಪಾಸಿಷ್ಯೇ )

8. **ಅತ್ಮಾರ್ದ್ರಜೆಯ ಮಂತ್ರಾಚಮನ**—( **ಅಗ್ನಿಶ್ಚೇತ್ಯನುವಾಕಸ್ಯ, ಸೂರ್ಯಋಷಿಃ, ದೇವೀಗಾಯತ್ರೀ ಛನ್ದಃ, ಅಗ್ನಿರ್ದೇವತಾ**" ॥ ಎಂದು ನ್ಯಾಸಮಾಡಿ " ಅಪಾಂಪ್ರಾಶನೇ ವಿನಿಯೋಗಃ" ಎಂದು ಹೇಳಿ) **ಅಗ್ನಿಶ್ಚ ಮಾಮನ್ಯುಶ್ಚ**.......... **ಯದಹ್ನಾ ಪಾಪಮಕಾರ್ಷಂ**.................. **ಅಹಸ್ತದವಲುಮ್ಪತು**.......... **ಸತ್ಯೇ ಜ್ಯೋತಿಷಿ ಜುಹೋಮಿಸ್ವಾಹಾ**" ॥ ಎಂದು ಹೇಳಿ ತೀರ್ಥವನ್ನು ತೆಗೆದುಕೊಳ್ಳಬೇಕು.

---

* " **ರೋಹಿತಾಕ್ಷಃ**" ಎಂದು ಪಾಠಾನ್ತರ.

× ಎಲ್ಲಾ ಶುಭ ಮತ್ತು ದೇವತಾ ಸಂಬಂಧವಾದ ಕರ್ಮಗಳನ್ನು, ಪೂರ್ವಾಭಿಮುಖನಾಗಿ ಅಥವಾ ಉತ್ತರಾಭಿಮುಖನಾಗಿ ಮಾಡುವುದು ಶಾಸ್ತ್ರೀಯ ಮತ್ತು ಸಂಪ್ರದಾಯ; ಸಾಯಂ ಸನ್ಧ್ಯಾ, ಗಾಯತ್ರೀ ಜಪವನ್ನೂ ಅರ್ಘ್ಯ ಪ್ರದಾನಗಳನ್ನೂ ಮಾತ್ರ ಪಶ್ಚಿಮಾಭಿಮುಖನಾಗಿ ಮಾಡಬೇಕೆಂದು ತಿಳಿದವರ ಅಭಿಪ್ರಾಯ.

12. ಅರ್ಘ್ಯಪ್ರದಾನ—(“ಓಂ ಅರ್ಘ್ಯಪ್ರದಾನ ಮನ್ತ್ರಸ್ಯ...... ......ಸಾಯಂ ಸನ್ಧ್ಯಾವನ್ದನ.................ವಿನಿಯೋಗಃ” ಎಂದು ಹೇಳಿ) ಮೂರು ಅರ್ಘ್ಯವನ್ನು, ಕಾಲವು ಮೀರಿ ಹೋದರೆ ಮತ್ತೊಂದು ಅರ್ಘ್ಯವನ್ನು ಪಶ್ಚಿಮಾಭಿಮುಖವಾಗಿ ನಿಂತು ಸೂರ್ಯನಾರಾಯಣನನ್ನು ಸ್ಮರಿಸುತ್ತಾ ಕೊಡಬೇಕು. ಅರ್ಘ್ಯಪ್ರದಾನ ನಿಯಮಗಳನ್ನು ಮುಂದೆ ನೋಡಬಹುದು.

18. ಸಙ್ಕಲ್ಪ ಮತ್ತು ನ್ಯಾಸಗಳು—“ಶ್ರೀ ಭಗವದಾಜ್ಞಯಾ ..........ಸಾಯಂ ಸನ್ಧ್ಯಾವಂದನ.........ಜಪಂ ಕರಿಷ್ಯೇ.

21. ಗಾಯತ್ರೀಧ್ಯಾನ ಪುರಸ್ಸರ ಆವಾಹನೆ–(ಓಂ ಭೂರಾದಿ ...... ಸರ್ವೇಷಾಂ...................ವಿನಿಯೋಗಃ” ॥ ಎಂದು ಹೇಳಿ “ಸಾಯಂ ಸರಸ್ವತೀಂ ಶ್ಯಾಮಾಂ, ರವಿಮಣ್ಡಲಮಧ್ಯಗಾಂ । ಸಾಮವೇದಂ ವ್ಯಾಹರನ್ತೀಂ ಚಕ್ರಾಯುಧ ಧರಾಂ ಶುಭಾಮ್ ॥ ಧ್ಯಾಯಾಮಿ ವಿಷ್ಣುದೈವತ್ಯಾಂ ವೃದ್ಧಾಂ ಗರುಡವಾಹನಾಮ್” ॥ ಎಂದು ಧ್ಯಾನಮಾಡಬೇಕು.)

24. ಜಪ ಉಪಸ್ಥಾನ ಸಙ್ಕಲ್ಪ—ಶ್ರೀ ಭಗವದಾಜ್ಞಯಾ...... ..........ಸಾಯಂ ಸನ್ಧ್ಯಾವನ್ದನ...................ಉಪಸ್ಥಾನಙ್ಕರಿಷ್ಯೇ.

26. ಉಪಸ್ಥಾನ—(“ಇಮಮ್ಮೇ” ಇತಿ ಪಞ್ಚ [ರ್ಚಸ್ಯ] ರ್ಚಾಂ, ದೇವರಾತ ಋಷಿಃ । ಗಾಯತ್ರೀ, ತ್ರಿಷ್ಟುಪ್, ಗಾಯತ್ರೀ, ಜಗತೀ, ತ್ರಿಷ್ಟುಭಃ [ಗಾಯತ್ರ್ಯಾದಯಃ] ಛನ್ದಾಂಸಿ । [ಸವಿತಾ ದೇವತಾ] ವರುಣೋ ದೇವತಾ” ॥ ಎಂದು ನ್ಯಾಸ ಮಾಡಿ “ಸಾಯಂ ಸನ್ಧ್ಯೋಪಸ್ಥಾನೇ ವಿನಿಯೋಗಃ” ॥ ಎಂದು ಹೇಳಿ) “ಇಮಮ್ಮೇ ವರುಣ ಶ್ರುಧೀ ಹವ ಮದ್ಯಾ ಚ ಮೃಡಯ । ತ್ವಾಮವಸ್ಯುರಾಚಕೇ । ತತ್ತ್ವಾಯಾಮಿ ಬ್ರಹ್ಮಣಾ ವನ್ದಮಾನಃ । ತದಾಶಾಸ್ತೇ ಯಜಮಾನೋ ಹವಿರ್ಭಿಃ । ಅಹೇಡಮಾನೋ ವರುಣೇಹ ಬೋಧ್ಯುರುಶಗ್ಂ ಸಮಾನ ಆಯುಃ ಪ್ರಮೋಷೀಃ । ಯಚ್ಚಿದ್ಧಿ ತೇ ವಿಶೋ ಯಥಾ ಪ್ರದೇವ ವರುಣ ವ್ರತಂ । ಮಿನೀಮಸಿ ದ್ಯವಿದ್ಯವಿ । ಯತ್ಕಿಞ್ಚೇದಂ ವರುಣ ದೈವ್ಯೇ । ಜನೇಽಭಿದ್ರೋಹಂ ಮನುಷ್ಯಾಶ್ಚರಾಮಸಿ । ಅಚಿತ್ತೀ ಯತ್ತವ ಧರ್ಮಾ ಯುಯೋಪಿಮ ಮಾ ನಸ್ತಸ್ಮಾದೇನಸೋ ದೇವ ರೀರಿಷಃ । ಕಿತವಾಸೋ ಯದ್ರಿರಿಪುರ್ನ ದೀವಿ ಯದ್ವಾಘಾಸತ್ಯ

ಮಾತಯನ್ನ ವಿಷ್ಣು । ಸರ್ವಾರ್ಣಾವಿಷ್ಣು ಶಿಖರೇ ಮದೇನಾಧಾರೇ ಸ್ಯಾಮ ವರುಣ ಪ್ರಿಯಾಸಃ ॥ ಎಂದು ಉಪಸ್ಥಾನ ಮಾಡಿದನಂತರ * ೩೩ ನೇ ವಿಧಿಗಳವರೆಗೂ ಆಚರಿಸಿ ಈ ಕರ್ಮವನ್ನು ಪೂರೈಸಬೇಕು.—

॥ ಇತಿ ಸಾಯಂ ಸಂಧ್ಯಾವಂದನಕ್ರಮಂ ಸಂಪೂರ್ಣಮ್. ॥

( ಓಂ ಶಾಂತಿಃ, ಶಾಂತಿಃ, ಶಾಂತಿಃ. )

## ನಿಯಮಗಳು

**ಸೂಚನೆ:**— ಈ ತ್ರಿಕಾಲ ಸಂಧ್ಯಾವಂದನೆ ಮುಂತಾದ × ಕರ್ಮಗಳನ್ನು ಬ್ರಹ್ಮೋಪದೇಶದ ಮೂಲಕ ಸದ್ಗುರುವಿನಿಂದ ಉಪದೇಶವನ್ನು ಪಡೆದನಂತರ ಭಗವಂತನಾದ ಶ್ರೀಮನ್ನಾರಾಯಣನಲ್ಲಿ ತ್ರಿಕರಣ ಶುದ್ಧಿಯಿಂದಲೂ, ಭಕ್ತಿಯಿಂದಲೂ, ಮಂತ್ರಲೋಪ ಕ್ರಿಯಾಲೋಪಗಳಿಲ್ಲದೆಯೂ, ಅಹಂಕಾರ ಮಮಕಾರಗಳನ್ನು ತ್ಯಜಿಸಿ ಆಯಾ ಕಾಲಕ್ಕೆ ಸರಿಯಾಗಿ ಗೀತಾಚಾರ್ಯನಾದ ಶ್ರೀಕೃಷ್ಣಪರಮಾತ್ಮನ ಆಜ್ಞೆಯಂತೆ ಫಲಾಪೇಕ್ಷೆಗಳಿಲ್ಲದೆಯೂ, ಪ್ರತಿಯೊಬ್ಬ ಮಾನವ ಶ್ರೇಷ್ಠನಾದ † ಶ್ರೀವೈಷ್ಣವ ಬ್ರಾಹ್ಮಣನೂ ತನ್ನ ಉತ್ಕೃಷ್ಟನಾದಕ್ಕೆ ಈ ಜನ್ಮದಲ್ಲೇ ಮಾಡಬೇಕು.

---

* 27 ಮತ್ತು 29 ನೇ ವಿಧಿಗಳಲ್ಲಿ ಹೇಳಿರುವ ವಿಸರ್ಜನಾ ಮಂತ್ರಗಳನ್ನು ಹಸ್ತಮುದ್ರೆಯಿಂದ ಆರಂಭಿಸಿ ದಕ್ಷಿಣದಿಕ್ಕಿಗೆ ಮುಗಿಸುವ ಪದ್ಧತಿ ಕೆಲವರಲ್ಲಿದೆ.

× ವೇದೋಕ್ತವಾದ ಮಂತ್ರಗಳನ್ನು ಬರೆಯುವುದೂ, ಶ್ಲೋಕರೂಪವಾದ ಮಂತ್ರವನ್ನು ಸ್ವತಃ ಓದುವುದೂ, ಮತ್ತು [illegible], ಹೇಳಬಾರದು; ಅವರ ಅವುಗಳ ಅರ್ಥಗಳಲ್ಲಿರುವ ವ್ಯಾಖ್ಯಾನಗಳಲ್ಲದೆ ಓದಬೇಕು. ಎಲ್ಲವೂ ಗುರುಮೂಲಕ ಉಪದೇಶವನ್ನು ಪಡೆದು ಅನುಷ್ಠಿಸಬೇಕು.

(1) × ಯೋ [illegible] (1), ಯೋ [illegible] † [illegible] । ಯೋ [illegible], [illegible] ॥ ಶ್ರೀಭಾಗವತೇ ॥

(2) ಚಕ್ರಾದಿಧಾರಣಂ ಪುಂಸಾಂ, ಪರಸಂಬಂಧವೇದನಂ । ಪತಿವ್ರತಾನಿಮಿತ್ತಂ ಹಿ, ಬಲಯಾದಿ ವಿಭೂಷಣಮ್ ॥ ಶ್ರೀಪಾಂಚರಾತ್ರೇ ॥

(1) ‡ ನಾಹಂ ವೇದವೇದೋದಯ ಸಮ್ಯಗ್ರೂಪಿ । [illegible] ॥ [illegible] ॥

## ನಿಯಮಗಳು

ಪಂಚಕಾಲಗಳಲ್ಲಿ ಪ್ರತಿದಿನವೂ ಶ್ರೀವೈಷ್ಣವರು ಮಾಡಬೇಕಾದ ನಿತ್ಯನೈಮಿತ್ತಿಕ ಕರ್ಮಗಳನ್ನೂ ಮತ್ತು ಇತರ ಮುಖ್ಯ ವಿಚಾರಗಳನ್ನೂ ಈ ಸಂಚಿಕೆಯ ೧ ನೇ ಭಾಗ "ಶ್ರೀವೈಷ್ಣವನಿಷ್ಠೆ" ಎಂಬ ಪುಸ್ತಕದಲ್ಲಿ ವಿವರಿಸಿರುವುದನ್ನು ನೋಡಬಹುದು. ಈ ಪುಸ್ತಕದ ೨ ನೇ ಪುಟದಲ್ಲಿ ಸೂಚಿಸಿರುವಂತೆ ಆವರಣ ಚಿಹ್ನೆಯೊಳಗೆ ಬರೆದಿರುವ ಮಂತ್ರಗಳನ್ನೂ ಮತ್ತು ಅಂಗನ್ಯಾಸ ಕರನ್ಯಾಸಗಳನ್ನೂ ಕೆಲವು **ತೆಂಗಲೆ** ಸಂಪ್ರದಾಯದವರೂ ಸಹ ಆಚರಿಸುತ್ತಾರೆ. **ವಡಕಲೆ** ಸಂಪ್ರದಾಯದವರು ಎಲ್ಲಾ ಶುಭಕಾರ್ಯಗಳಲ್ಲಿಯೂ ಅವರುಗಳ ಪರಮಾಚಾರ್ಯರಾದ ಶ್ರೀಮದ್ವೇದಾಂತ ದೇಶಿಕರ ತನಿಯನ್‌ಗಳನ್ನು ಮೊದಲು ಹೇಳುವದುಂಟು. ಎಲ್ಲರೂ ಕರ್ಮಗಳನ್ನು ಶ್ರದ್ಧಾ ಭಕ್ತಿಯಿಂದ ಮಾಡುವುದರಿಂದ ದೇವತೆಗಳು ತೃಪ್ತಿ ಹೊಂದಿ ಲೋಕಕ್ಕೇ ಕ್ಷೇಮವನ್ನುಂಟುಮಾಡುತ್ತಾರೆ. ದೊಡ್ಡವರು ಮಾಡುವ ಪದ್ಧತಿಗಳನ್ನು ಚಿಕ್ಕವರೂ ಮತ್ತು ಇತರರೂ ಸಹ ಆಚರಿಸಲು ಮಾರ್ಗವೂ ಆಸೆಯೂ ಸಹ ಉಂಟಾಗುವುವು. "**ಅವಶ್ಯಂ ಪಿತುರಾಚಾರಂ**" ಎಂಬುದನ್ನೇ ಮುಖ್ಯ ಗುರಿಯಾಗಿಟ್ಟುಕೊಂಡು ಅವರವರ ವರ್ಣಾಶ್ರಮ ಧರ್ಮಕ್ಕನುಸಾರವಾಗಿ ಕರ್ಮಗಳನ್ನು ಮಾಡಲೇ ಬೇಕು. [ಗೀತೆ 3-20,21,22,23,35.] ಈ ಸನ್ಮಾರ್ಗವನ್ನೇ ಆಚರಿಸುವ ಪದ್ಧತಿಗಳು "**ಸಸ್ತ್ಯವಸ್ತ್ರವೆ ಸಾಪಿರವಾರಿ**" ಎಂಬ ಗಾಥೆಯಂತೆ ಅನೇಕರು ಅನೇಕ ಪ್ರಕಾರವಾಗಿ ಮಾಡುತ್ತಾರೆ. ಅದರಂತೆ ಎಲ್ಲಾ ಪದ್ಧತಿಗಳನ್ನೂ ಪ್ರಕಾಶಪಡಿಸಲು ಸಾಧ್ಯವಾಗಲಾರದು. ತಕ್ಕ ಮಟ್ಟಿಗೂ ಈ ಗ್ರಂಥದಲ್ಲಿ ಉಭಯಕಲೆಯವರು ಆಚರಿಸುವ ಕ್ರಮಗಳನ್ನು ಪ್ರಕಾಶಪಡಿಸಿರುತ್ತೇ. ಶುಚಿ, ಆಚಾರ, 'ಸಾತ್ವಿಕ ಆಹಾರ, ಮತ್ತು ಸಹವಾಸ ಮುಂತಾದುವುಗಳನ್ನೇ ಶ್ರೀವೈಷ್ಣವರು ಮುಖ್ಯಗುರಿಯಾಗಿಟ್ಟುಕೊಂಡು ಅದರಂತೆ ನಿತ್ಯವೂ ಆಚರಿಸಬೇಕು.

2. **ಅರ್ಘ್ಯಪ್ರದಾನ**—"**ಕಾಣಾಮಲ್ ಕೋಣಾಮಲ್ ಕಂಡು ಕೊಡು**" ಎಂಬ ತಮಿಳ್ ಗಾಥೆಯಂತೆ ಮೂರು ಪ್ರಾತ

---

(2) ದುರ್ಲಭಂ ಮಾನುಷಂ ಜನ್ಮ, ತದಪ್ಯಧ್ರುವಮರ್ಥದಂ । ತತೋ ಯತೇತ ಕುಶಲಃ, ಕ್ಷೇಮಾಯ ಭಯಮಾಶ್ರಿತಃ ॥ ಶ್ರೀಭಾಗವತೇ ।

(3) [illegible] ॥ ವಿಷ್ಣುಧರ್ಮೋತ್ತರೇ ॥

ಪ್ರಾತಸ್ಸಂಧ್ಯಾರ್ಘ್ಯಗಳನ್ನು ಸೂರ್ಯೋದಯಕ್ಕೆ ಮುಂಚೆಯೂ, ಎರಡು ಮಾಧ್ಯಾಹ್ನಿಕ ಅರ್ಘ್ಯಗಳನ್ನು ಸೂರ್ಯನು ನೆತ್ತಿಯಮೇಲೆ ಆಕಾಶದ ಮಧ್ಯದಲ್ಲಿ ಬಂದಾಗಲೂ, ಮೂರು ಸಾಯಂಸಂಧ್ಯಾರ್ಘ್ಯಗಳನ್ನು ಸೂರ್ಯನು ಪಶ್ಚಿಮಗಿರಿಯಲ್ಲಿ ಮುಳುಗುತ್ತಿರುವಾಗಲೂ ಕೊಡಬೇಕು. ಈ ಅರ್ಘ್ಯಗಳನ್ನು ಕೊಡುವುದಕ್ಕೆ ತೀರ್ಥವನ್ನು ತೆಗೆದುಕೊಂಡು ಎರಡು ಅಂಗೈಯಲ್ಲೂ ಹಿಡಿದಿರುವಾಗ ಹೆಬ್ಬೆಟ್ಟು ಮತ್ತು ತರ್ಜನೀ (ತೋರು) ಬೆರಳುಗಳನ್ನು ಬಿಟ್ಟು ಇತರ ಮೂರು ಮೂರು ಬೆರಳುಗಳನ್ನು ಸೇರಿಸಬೇಕು. ಎಲ್ಲಾ ಬೆರಳುಗಳನ್ನೂ ಸೇರಿಸಿದರೆ ಅದು ರಾಕ್ಷಸಮುಷ್ಟಿಯಾಗುತ್ತದೆ. ಅರ್ಘ್ಯವನ್ನು ಕೊಡುವಾಗ ಹಿಮ್ಮಡಿಯನ್ನು ಎತ್ತಿ ತುದಿಗಾಲಿನಲ್ಲಿ ನಿಂತುಕೊಂಡು ಸೂರ್ಯಮಂಡಲ ಮಧ್ಯವರ್ತಿಯಾದ ಶ್ರೀಮನ್ನಾರಾಯಣನ ಪಾದಾರವಿಂದಗಳನ್ನು ಧ್ಯಾನಿಸುತ್ತಾ, ಗಾಯತ್ರೀ ಮಂತ್ರವನ್ನು ಉಚ್ಚರಿಸಿ, ಕೈಗಳನ್ನು ಕಣ್ಣುಗಳ ಹುಬ್ಬಿನವರೆಗೂ ಮೇಲಕ್ಕೆ ಎತ್ತಿ ತೀರ್ಥವನ್ನು ಎಸೆಯಬೇಕು. [ಅನುಕೂಲವಿದ್ದರೆ ನದೀ, ತಟಾಕ ಮುಂತಾದ ನೀರಿನ ಪ್ರದೇಶದಮೇಲೆ ಎಸೆಯಬಹುದು.] ಹೀಗೆ ತೀರ್ಥವನ್ನು ಎಸೆಯುವುದರಿಂದ ಆ ತೀರ್ಥವು ವಜ್ರಾಯುಧದಂತೆ ಆಗಿ ಅದರಿಂದ ಪ್ರತಿ ಸಂಧ್ಯಾಕಾಲದಲ್ಲೂ ಸೂರ್ಯದೇವನೊಂದಿಗೆ ಯುದ್ಧಮಾಡುವ "ಮಂದೇಹ" ಎಂಬ ರಾಕ್ಷಸರುಗಳು ಹತರಾಗುತ್ತಾರೆ; ಮತ್ತೆ ಬ್ರಹ್ಮದೇವನ ವರದಿಂದ ಆ ರಾಕ್ಷಸರುಗಳು ಜೀವಂತರಾಗಿ ಪುನಃ ಮತ್ತೊಂದು ಸಂಧ್ಯಾಕಾಲದಲ್ಲಿ ಬಂದು ಯುದ್ಧಮಾಡಿ ನಾಶವಾಗುತ್ತಾರೆ. [ವಿ-ಪು 2-8.] ಈ ಅರ್ಘ್ಯ

---

† ಊರ್ಧ್ವಪುಂಡ್ರ ವಿಷಯ — ಈ ಊರ್ಧ್ವಪುಂಡ್ರಗಳನ್ನು ಶುಭ್ರವಾಗಿ ಸಾತ್ವಿಕಗುಣವನ್ನು ತೋರಿಸುವ ಬಿಳೀ ಮಣ್ಣಿನಿಂದ ಮಾಡಲ್ಪಟ್ಟಿರುವಾಗಿರಬೇಕು. ಶ್ರೀಕೃಷ್ಣನಲ್ಲಿ ಅಂಥಾ ಬಿಳೀ ಮಣ್ಣಿನಿಂದ ಊರ್ಧ್ವಪುಂಡ್ರಗಳನ್ನು ಹಣೆ ಮತ್ತು ಇತರ ಅಂಗಗಳ ಮೇಲೆ ಶಾಸ್ತ್ರೋಕ್ತವಾಗಿ ಧರಿಸುವಾಗ ಅವು ಭಗವಂತನಾದ ಶ್ರೀಮನ್ನಾರಾಯಣನ ಪಾದಾರವಿಂದಗಳಾದ ಶ್ರೀ [illegible] [ನಮ್ಮನ್ನು] [illegible]. ಆ [illegible] ಪವಿತ್ರ ವಸ್ತುವೆಂದು ಕರೆಯಲ್ಪಡುವ [illegible] ಶ್ರೀ [illegible]ವನ್ನು ಸೂಚಿಸುತ್ತದೆ. ಆದುದರಿಂದ ನಮ್ಮ ಪರಮಾಚಾರ್ಯರನ್ನು ಸೂಚಿಸುವ [illegible]ನ್ನು ನಾವು ತಪ್ಪದೆ ಧರಿಸಬೇಕು. ಇಲ್ಲದಿದ್ದರೆ ನಾವು ನಮ್ಮ ಶ್ರೀಕೃಷ್ಣನ ಸ್ವರೂಪಕ್ಕೆ ಹಾನಿ ಉಂಟುಮಾಡಿದಂತೆ ಆಗುತ್ತದೆ; ಮತ್ತು ಮಹತ್ತರವಾದ ಭಾಗವತಾಪಚಾರಕ್ಕೆ ಗುರಿಯಾಗುತ್ತೇವೆ. ಕೆಂಪು (ಅಥವಾ ಹಳದಿ) ತಿಲಕವು ಶ್ರೀಲಕ್ಷ್ಮೀ ದೇವಿಯನ್ನು ಸೂಚಿಸುತ್ತದೆ. ಈ ನಾಮ [ಊರ್ಧ್ವಪುಂಡ್ರ]ಗಳನ್ನು ಅಲಂಕಾರಕ್ಕಾಗಿ ಕ್ಷೇತ್ರಗಳಲ್ಲಿ ಪೂಜೆಮಾಡಿರುವ ದೇವರುಗಳಿಗೆ ಧಾರಣೆಮಾಡುವುದು ನ್ಯಾಯವೇ? ಎಂದು ಕೆಲವರು ಆಕ್ಷೇಪಿಸುತ್ತಾರೆ. ಶಾಸ್ತ್ರ

ಪ್ರದಾನದಿಂದ ಸೂರ್ಯ ದೇವನಿಗೆ ಬರುವ ಆಪತ್ತುಗಳು ನೀಗಿ ಲೋಕಕ್ಕೆ ಸುಖವುಂಟಾಗುತ್ತದೆ. ಈ ರಾಕ್ಷಸರುಗಳನ್ನು ಅರ್ಘ್ಯಪ್ರದಾನ ವಜ್ರಾಯುಧದಿಂದ ಸಂಹರಿಸಿದ ಪಾಪವನ್ನು ಹೋಗಲಾಡಿಸಿ ಕೊಳ್ಳಲು "ಅಸಾವಾದಿತ್ಯೋ ಬ್ರಹ್ಮ" ಎಂದು ಬ್ರಾಹ್ಮಣರು ವೇದದಲ್ಲಿ ವಿಧಿಸಿದಂತೆ ಉಚ್ಚರಿಸಿ ಆತ್ಮಪ್ರದಕ್ಷಿಣೆಯನ್ನು ಮಾಡಿಕೊಳ್ಳುತ್ತಾರೆ. ಅನಂತರ ಮಾಡುವ ಉಪಾಸನಾದಿ ಹೋಮಗಳಿಂದ ಸೂರ್ಯದೇವನ ತೇಜಸ್ಸು ವೃದ್ಧಿಯಾಗುತ್ತದೆ. ಆದುದರಿಂದ ನಾವುಗಳು ನಿತ್ಯಕರ್ಮಗಳನ್ನು ಬಿಡದೇ ಭಕ್ತಿಯಿಂದ ಮಾಡಲೇಬೇಕು. ಇದರಿಂದ ಭಗವಂತನು ನಮಗೂ ಮತ್ತು ಲೋಕಕ್ಕೂ ಕ್ಷೇಮವನ್ನುಂಟುಮಾಡಿ ಕಾಪಾಡುವುದರಲ್ಲಿ ಸಂದೇಹವೇ ಇಲ್ಲ. ಅರ್ಘ್ಯಪ್ರದಾನಕಾಲವು ಮೀರಿ ಹೋದರೆ ಒಂದು ಪ್ರಾಣಾಯಾಮವನ್ನು ಮಾಡಿ ಸಂಕಲ್ಪವನ್ನು ಮಾಡಿಕೊಂಡು ಮತ್ತೊಂದು ಅರ್ಘ್ಯವನ್ನು ಹಿಂದೆ ಹೇಳಿದಂತೆ ಕೊಡಬೇಕು. ಕೆಲವರು ಮೊದಲು ಸಂಕಲ್ಪವನ್ನು ಮಾಡಿ ತುರ್ಯಾರ್ಘ್ಯವನ್ನು ಕೊಟ್ಟು ಅನಂತರ ಆಯಾ ಕಾಲ ವಿಧಿಗಳಿಗೆ ತಕ್ಕಂತೆ ಮೂರು ಅಥವಾ ಎರಡು ಅರ್ಘ್ಯಗಳನ್ನು ಕೊಡುತ್ತಾರೆ. ಆದುದರಿಂದ ಅವರವರ ಹಿರಿಯರ ಪದ್ಧತಿಯನ್ನು ಅನುಸರಿಸುವುದು ಉತ್ತಮ. ಸಾಯಂಸಂಧ್ಯಾರ್ಘ್ಯವನ್ನು ಭೂಮಿಯ ಮೇಲೆ ಬೀಳುವಂತೆ ಕೊಡಬಹುದು.

---

ಪ್ರಾಜ್ಞರು ಇಂತಹ ನಾಮಗಳನ್ನು ದೇವರಿಗೆ ಧಾರಣೆಮಾಡುವಾಗ ಅಲಂಕಾರಾರ್ಥವೆಂದು ಭಾವಿಸುತ್ತಾರೆ. ಅನನ್ಯ ನಾವು ಧರಿಸುವಾಗ ನಮ್ಮ (ಶ್ರೀವೈಷ್ಣವರ) ಸತ್ವಗುಣವನ್ನು ಮತ್ತು ನಾವು ಭಗವದ್ಭಕ್ತರೆಂಬುದನ್ನು ತೋರಿಸುತ್ತವೆ. ಇವು ದೇವರಿಗೆ ಅಲಂಕಾರವಾಗು ಹೇಗೆ? ಎಂದರೆ ನಾವು ಧರಿಸುವ ವಸ್ತ್ರ ಆಭರಣಾದಿಗಳಂತೆ ದೇವರಿಗೂ ಅಲಂಕಾರಾರ್ಥವಾಗಿ ಅನೇಕ ವಸ್ತ್ರ ಆಭರಣಾದಿಗಳಿಂದಲೂ ಅಲಂಕರಿಸುವುದು ನಡೆಯುತ್ತಿದೆ. ಅದರಂತೆ ಈ ಊರ್ಧ್ವಪುಂಡ್ರಗಳನ್ನು ಧಾರಣೆಮಾಡುವುದೂ ಒಂದು ಅಲಂಕಾರವೆಂದೇ ಭಾವಿಸಬೇಕು. [ನಾವು (ಶ್ರೀವೈಷ್ಣವರು) ದೇವರ ದೇವಸ್ಥಾನಕ್ಕೆ ಹೋದಾಗ ದೇವರ ದರ್ಶನವನ್ನು ಮಾಡಿ ತೀರ್ಥವನ್ನು ಸ್ವೀಕರಿಸಿ ಪ್ರಾರ್ಥಿಸಿದಾದರೂ ಶ್ರೀ ಶಠಕೋಪವನ್ನು ನಮ್ಮಗಳ ಶಿರಸ್ಸಿನಲ್ಲಿ ಧಾರಣೆಮಾಡಿಸಿ ಕೊಳ್ಳುತ್ತೇವೆ. ಈ ಶ್ರೀ ಶಠಕೋಪವು ಅಲ್ಲಿ ಶ್ರೀ ನಮ್ಮಾಳ್ವಾರನ್ನು ಸೂಚಿಸುತ್ತದೆ. ಆ ನಮ್ಮಾಳ್ವಾರ್ ದೇವಸ್ಥಾನಕ್ಕೆ ದರ್ಶನಾರ್ಥವಾಗಿ ನಾವುಗಳು ಹೋದಾಗ ಅಲ್ಲಿ ಶ್ರೀ ರಾಮಾನುಜರನ್ನು ಶಿರಸ್ಸಿನಲ್ಲಿ ಧರಿಸುವಂತೆ ಪ್ರಾರ್ಥಿಸುತ್ತೇವೆ. ಅದರೆ ಅಲ್ಲಿ ಶ್ರೀ ಶಠಕೋಪವನ್ನು ಧರಿಸಿ ಎಂದು ಕೇಳುವ (ಬಯಸಿ) ಸಂಪ್ರದಾಯ ಇರುವುದಿಲ್ಲವೆಂಬುದನ್ನು ಶ್ರೀವೈಷ್ಣವರು ತಿಳಿದುಕೊಂಡಿರುವುದು ಉತ್ತಮವೆಂದು ಅಭಿಪ್ರಾಯ.]

## 3. ಆಶೌಚಾದಿ ಕಾಲಗಳಲ್ಲಿ ಆಚರಿಸುವ ನಿಯಮಗಳು.

ಔಪಾಸನೆ, ಸಮಿತಾಧಾನ, ದೇವರ್ಷಿಪಿತೃತರ್ಪಣಗಳು, ಬ್ರಹ್ಮಯಜ್ಞ ಮುಂತಾದವುಗಳನ್ನು ಮಾಡಕೂಡದು; ಆದರೆ ತ್ರಿಕಾಲ ಸನ್ಧ್ಯಾವನ್ದನೆಗಳನ್ನು ಮಾತ್ರ ತಪ್ಪದೆ ಮಾಡಲೇಬೇಕು. ಗಾಯತ್ರೀ ಮಂತ್ರ ಒಂದು ವಿನಾ ಮಿಕ್ಕ ಮಂತ್ರಗಳನ್ನು ಮನದಲ್ಲೇ ಅನುಸಂಧಿಸಬೇಕು.

## 4. ಗಾಯತ್ರೀ ಮಂತ್ರ ನಿಯಮಗಳು—

A. ಜಪಮಾಡುತ್ತಿರುವಾಗ ಮನಸ್ಸಿಗೆ ಬೇಸರಿಕೆ, ಸೋಮಾರಿತನ, ಆತುರ, ಅಶ್ರದ್ಧೆ, ಇತರವಿಧವಾದ ದೇಹಬಾಧೆಗಳು, ಅಪಾನವಾಯು ವಿಸರ್ಜನೆ, ಆಕಳಿಕೆ, ಕೋಪ, ಬೇರೆಯಾವದಾದರೂ ಒಂದು ಚಿಂತೆ, ನಿದ್ರೆ ಮರೆಯುವಿಕೆ, ಹಸಿವು, ಬಾಯಾರಿಕೆ, ಇವುಗಳೆಲ್ಲಕ್ಕೂ ಅವಕಾಶವೇ ಕೊಡಬಾರದು. ಮನಸ್ಸನ್ನು ಹಿಡಿದು ಒಂದು ಸ್ಥಾಯಿಯಲ್ಲಿ ನಿಲ್ಲಿಸಿ, ಭಗವಂತನ ಪಾದಾರವಿಂದಗಳನ್ನು ಧ್ಯಾನಿಸುತ್ತಾ, ಮೌನದಿಂದ ಏಕಾಂತವಾದ ಸ್ಥಳದಲ್ಲಿ ಕುಳಿತು, ಭಕ್ತಿಶ್ರದ್ಧೆಗಳಿಂದ ಜಪವನ್ನು ಮಾಡಿದರೆ ಇಂಥಾ ಅವಸ್ಥೆಗಳಿಗೆ ಅವಕಾಶವಿರಲಾರದು. ಪತಿತ, ಹೊಲೆಯ, ನಾಯಿ, ಬಹಿಷ್ಟೆ ಸ್ತ್ರೀ ಮುಂತಾದವರನ್ನು ನೋಡಬಾರದು; ಅಥವಾ ಅವರುಗಳೊಂದಿಗೆ ಮಾತನಾಡುವುದು ಮುಂತಾದವನ್ನು ಖಂಡಿತವಾಗಿಯೂ ತ್ಯಜಿಸಬೇಕು; ಮತ್ತು ಶ್ರೀವೈಷ್ಣವರಲ್ಲದ ಇತರರೊಂದಿಗೂ ಮಾತನಾಡಬಾರದು. ಒಂದು ವೇಳೆ ಅಂಥಾದ್ದು ಸಂಭವಿಸಿದಲ್ಲಿ ಆಚಮನವನ್ನು ಮಾಡಿಯೇ ಜಪವನ್ನು ಮುಂದುವರಿಸಬೇಕು. ಮೇಲೆ ಹೇಳಿದ ಪತಿತ ಮುಂತಾದವರ ಸ್ಪರ್ಶಮಾಡಿದರೂ ಅಥವಾ ಮಾತನಾಡಿದರೂ ಸ್ನಾನಮಾಡಿ ಮಡಿವಸ್ತ್ರವನ್ನುಟ್ಟು ಜಪವನ್ನು ಮಾಡಬೇಕು. ಜಪಕಾಲದಲ್ಲಿ ಹೊಕ್ಕಳ ಕೆಳಗೆ ದೇಹವನ್ನು ಮುಟ್ಟಿದರೆ ಕೈಯನ್ನು ತೀರ್ಥದಿಂದ ತೊಳೆಯಬೇಕು. ನೀರು ಕೈಗೆ ಸಮೀಪದಲ್ಲಿ ಸಿಕ್ಕದಿದ್ದರೆ "ಓಂ" ಎಂದುಹೇಳಿ ಬಲದ ಕಿವಿಯನ್ನಾದರೂ ಸ್ಪರ್ಶಿಸಬೇಕು; ಅಥವಾ ಒಬ್ಬ ಒಳ್ಳೆಯ ಶ್ರೀವೈಷ್ಣವನನ್ನಾದರೂ ಅಥವಾ ತಮ್ಮ ಗುರುವನ್ನಾದರೂ ಸ್ಮರಿಸಬೇಕು.

B. ಜಪಕಾಲದ ಮಧ್ಯದಲ್ಲಿ ಸದ್ಗುರು ಅಥವಾ ಭಗವದ್ಭಕ್ತರುಗಳು ಬಂದರೆ ಅವರಿಗೆ ಪ್ರಣಾಮಮಾಡಿ ಅಭಿವಾದನೆಯನ್ನು ಸಲ್ಲಿಸಿ

ಅವರ ಯೋಗಕ್ಷೇಮಗಳನ್ನು ವಿಚಾರಿಸಿ ಅವರ ಅಪ್ಪಣೆಯನ್ನು ಪಡೆದು ಜಪವನ್ನು ಮುಂದುವರಿಸಬೇಕು.

C. ಜಪಕಾಲದ ಮಧ್ಯದಲ್ಲಿ ಈ ನಿಯಮಗಳು ಅತಿಕ್ರಮಿಸಲ್ಪಟ್ಟರೆ **"ಇದಂ ವಿಷ್ಣುರ್ವಿಚಕ್ರಮೇ, ತ್ರೇಧಾನಿದಧೇ ಪದಂ, ಸಮೂಢಮಸ್ಯ ಪಾಗ್ಂಸುರೇ"** ಎಂಬ ಋಕ್ಕನ್ನು ಒಂದುಬಾರಿ ಹೇಳಿ ಜಪಿಸಬಹುದು; ಅಥವಾ ವಿಷ್ಣುವನ್ನಾದರೂ ಸ್ಮರಿಸಿ **ಶ್ರೀಕೃಷ್ಣ, ಕೃಷ್ಣ, ಕೃಷ್ಣ"** ಎಂದು ಅವನ ದಿವ್ಯನಾಮಗಳನ್ನಾದರೂ ಉಚ್ಚರಿಸಬೇಕು.

D. ಪ್ರತಿಪತ್, ಪೌರ್ಣಮಾ, ಅಮಾವಾಸ್ಯೆ ರಾತ್ರಿಕಾಲಗಳಲ್ಲಿ 30 ಸಾರಿಯೂ; ಚತುರ್ಥೀ, ಅಷ್ಟಮೀ, ಚತುರ್ದಶೀ, ರಾತ್ರಿಕಾಲಗಳಲ್ಲಿ 64 ಸಾರಿಯೂ ಸಪ್ತಮೀರಾತ್ರಿ 37 ಸಾರಿಯೂ; ವಿಷ್ವಯನ, ಮತ್ತು ತ್ರಯೋದಶೀ ರಾತ್ರಿಯಲ್ಲೂ. ಆಶೌಚಾದಿ ದಿನಗಳಲ್ಲೂ ಮತ್ತು ಆಪತ್ಕಾಲದಲ್ಲೂ 10 ಸಾರಿಯೂ ಗಾಯತ್ರೀ ಮಂತ್ರವನ್ನು ಜಪಿಸಬಹುದು. ಪ್ರಾತರ್ ಮತ್ತು ಮಾಧ್ಯಾಹ್ನಿಕ ಗಾಯತ್ರೀ ಜಪಗಳನ್ನು ನಿಂತುಕೊಂಡೂ, ಸಾಯಂ ಸನ್ಧ್ಯಾ ಗಾಯತ್ರೀ ಜಪವನ್ನು ಕುಳಿತುಕೊಂಡೂ ಮಾಡಬಹುದು. ಗೃಹಸ್ಥರು 1008 ಸಾರಿ ಗಾಯತ್ರೀ ಜಪಮಾಡುವುದು ಉತ್ತಮ, 108 ಮಧ್ಯಮ, 10 ಅಧಮ; ಬ್ರಹ್ಮಚಾರಿಗಳು 108 ಸಾರಿ ಜಪವನ್ನು ಮಾಡಬೇಕು.

E. ಗಾಯತ್ರೀ ಜಪವನ್ನು ಮಾಡುವಾಗ ಕೈಗಳನ್ನು ಎಡಬಿಡದೆ ಜೋಡಿಸಿಕೊಂಡು ಆ ಅಂಜಲಿಯನ್ನು ಮುಖಕ್ಕೆದುರಾಗಿ ಹಿಡಿದು ವಸ್ತ್ರದಿಂದ ಮುಚ್ಚಿಕೊಂಡು ಪ್ರಾತಃಕಾಲ ಜಪವನ್ನು ಮಾಡಬೇಕೆಂದೂ, ಹೃದಯಕ್ಕೆದುರಾಗಿ ಹಿಡಿದು ಮಾಧ್ಯಾಹ್ನಿಕ ಜಪವನ್ನು ಮಾಡಬೇಕೆಂದೂ, ಸಾಯಂಸನ್ಧ್ಯಾ ಜಪವನ್ನು ಹೊಕ್ಕಳಿಗೆದುರಾಗಿ ಹಿಡಿದು ಮಾಡಬೇಕೆಂದೂ ಅನೇಕ ಹಿರಿಯರ ಅಭಿಪ್ರಾಯ. ಜಪವನ್ನು ಮಾಡುವಾಗ ಬಲದ ಅಂಗೈ ನಡುವಿನ ಬೆರಳು ಬುಡದ ಗಿಣ್ಣಿನ ರೇಖೆಯನ್ನು ಅಂಗುಷ್ಠ ಬೆರಳಿನಿಂದ ಎಣಿಸುತ್ತಾ ತರ್ಜನೀ ಬೆರಳು ಬುಡದ ರೇಖೆಯವರೆಗೂ ಪ್ರದಕ್ಷಿಣೆಯಾಗಿ ಎಣಿಸಬೇಕು. ಕೆಲವರು ಕಿರಿಬೆರಳಿನ ಬುಡದ ಗಿಣ್ಣಿನ ರೇಖೆಯಿಂದ ಎಣಿಸುವರುಂಟು. ಹೀಗೆ ಒಂದು ಪ್ರದಕ್ಷಿಣೆಯಾಗಿ ಎಣಿಸಿದರೆ ಹತ್ತು ಸಾರಿ ಜಪಮಾಡಿದಂತೆ ಆಗುವುದು. **"ಮಹಾಮೇರು"** ಎಂದು ಹೆಸರಾದ ಅನಾಮಿಕಾ ಮತ್ತು ಮಧ್ಯದ ಬೆರಳುಗಳ ಮಧ್ಯದ ಗಿಣ್ಣಿನ ರೇಖೆ

ಗಳು ಲಕ್ಷ್ಮೀ ಮತ್ತು ನಾರಾಯಣ ಎಂದು ಭಾವಿಸಿ ಜಪ ಮಾಡಿದರೆ ಶ್ರೇಷ್ಠವೆನಿಸುವುದು. ಜಪಿಸುವಾಗ ರೇಖೆಗಳ ಮಧ್ಯಭಾಗಗಳನ್ನೂ ಮತ್ತು ಬೆರಳುಗಳ ತುದಿಯನ್ನೂ ಹೆಬ್ಬೆಟ್ಟಿನಿಂದ ಸ್ಪರ್ಶಿಸಬಾರದು. ಕೈಯಲ್ಲಿ ದರ್ಭ ಪವಿತ್ರವಿಲ್ಲದೇಯೂ, ಕೈಗಳನ್ನು ವಸ್ತ್ರದಿಂದ ಮುಚ್ಚದೇಯೂ, ಒದ್ದೆಬಟ್ಟೆಯನ್ನುಟ್ಟೂ, ಜಪವನ್ನು ಮಾಡಬಾರದು. ಜಪವನ್ನು ಮಾಡುವಾಗ ಭಗವಂತನಾದ ಶ್ರೀಮನ್ನಾರಾಯಣನ ಪಾದಾರವಿಂದಗಳಲ್ಲಿ ಚಿತ್ತವುಳ್ಳವರಾಗಿ ಶ್ರದ್ಧಾ ಭಕ್ತಿಗಳಿಂದ ಇರಬೇಕು. ತಾವು ಮಾಡಿದ ಪ್ರತಿಯೊಂದು ಕರ್ಮವೂ ಭಗವಂತನ ಆರಾಧನೆಯರೂಪವಾದ ಕೈಂಕರ್ಯವೆಂದು ಭಾವಿಸಿ ಅವನ ಪಾದಾರವಿಂದಗಳಲ್ಲಿ ಫಲಾಪೇಕ್ಷೆಗಳಿಲ್ಲದೆ ಅರ್ಪಿಸಬೇಕು. ಜಪಮಂತ್ರವನ್ನು ಇತರರಿಗೆ ಕೇಳುವಂತೆ ಗಟ್ಟಿಯಾಗಿ ಉಚ್ಚರಿಸಕೂಡದು.

## 5. ಪ್ರಾಣಾಯಾಮ ನಿಯಮಗಳು.

ಪವಿತ್ರ ಮತ್ತು ಕಿರುಬೆರಳುಗಳಿಂದ ಮೂಗಿನ ಎಡಗಡೆ ದ್ವಾರವನ್ನು ಮುಚ್ಚಿ, ಬಲಗಡೆದ್ವಾರದಿಂದ ಉಸಿರನ್ನು ನಿಧಾನವಾಗಿ ಒಳಕ್ಕೆಳೆದು ಹೆಬ್ಬೆಟ್ಟಿನಿಂದ ( ಆ ಬಲದ್ವಾರವನ್ನು ) ಮುಚ್ಚಿಕೊಂಡು ಉಸಿರನ್ನು ಶ್ವಾಸಕೋಶದಲ್ಲಿ ಧಾರಣೆಮಾಡಿ, ಅನಂತರ 4–ನೆಯ ಬೆರಳುಗಳನ್ನು ಸ್ವಲ್ಪ ಸ್ವಲ್ಪವಾಗಿ ಸಡಿಲಿಸಿ ಉಸಿರನ್ನು ನಿಧಾನವಾಗಿ ಎಡಗಡೆ ದ್ವಾರದಿಂದ ಹೊರಗಡೆ ಬಿಡಬೇಕು. ಕೆಲವರು ಐದು ಬೆರಳುಗಳನ್ನೂ ಉಪಯೋಗಿಸುವುದುಂಟು. ಈ ವಿಚಾರವನ್ನು 4 ನೇಯ ಪುಟದಲ್ಲಿ ಸಾಧ್ಯವಾದ ಮಟ್ಟಿಗೂ ವಿವರಿಸಿರುತ್ತೆ. ದರ್ಭಪವಿತ್ರವನ್ನು ಧರಿಸದೇ ಪ್ರಾಣಾಯಾಮವನ್ನು ಮಾಡಬಾರದು. ಪ್ರಾಣಾಯಾಮವನ್ನು ಒಂದು ಬಾರಿ ಮಾಡಿದ ಕೂಡಲೆ ಬಲದಕಿವಿಯನ್ನು ಸ್ಪರ್ಶಿಸಬೇಕು. ಪ್ರಾಣಾಯಾಮ ಮಂತ್ರವನ್ನು ಬೇಸರಿಕೆಪಡದೆ ಚೆನ್ನಾಗಿ ಉಚ್ಚರಿಸಬೇಕು.

## 6. ಸಂಧ್ಯಾವನ್ದನೆ ಮಂತ್ರಾರ್ಥಗಳು.

ಈ ಸನ್ಧ್ಯಾವನ್ದನೆ ಮಂತ್ರಾರ್ಥಗಳನ್ನೂ ಮತ್ತು ವ್ಯಾಖ್ಯಾನಗಳನ್ನೂ ಅನೇಕ ಮಹನೀಯರು ಅನೇಕವಾಗಿ ಬರೆದು ಅವರುಗಳ ಅಭಿಪ್ರಾಯಗಳನ್ನು ಗ್ರಂಥಗಳ ಮೂಲಕ ಪ್ರಕಾಶ ಪಡಿಸಿರುತ್ತಾರೆ. ಅವುಗಳನ್ನು ತಿಳಿದುಕೊಳ್ಳಲು ಕುತೂಹಲವುಳ್ಳವರು ಆಯಾ ಗ್ರಂಥಗಳನ್ನು ನೋಡಬಹುದು; ಆದರೆ ಪ್ರತಿ ಒಂದು ಮಂತ್ರವೂ ಆಯಾ ದೇವತೆಗಳನ್ನು

ಪ್ರತಿಪಾದಿಸುತ್ತದೆ. ಪ್ರಪನ್ನಾನುಷ್ಠಾನಪರರಿಗಿದು ಆವಶ್ಯಕವಿರಲಾರದು. ಈ ಅರ್ಥಗಳಲ್ಲೂ ಮತ್ತು ವ್ಯಾಖ್ಯಾನಗಳಲ್ಲೂ ಮನಸ್ಸನ್ನು ಅಧಿಕವಾಗಿ ಉಪಯೋಗಿಸಿದರೆ ಇತರ ದೇವತಾ ಭಜನಕ್ಕೆ ಅವಕಾಶವೂ ಅಹಂಕಾರ ಮಮಕಾರ ಮುಂತಾದವೂ ತಲೆದೋರಿ ಪ್ರಪನ್ನಾನುಷ್ಠಾನವನ್ನು ಕೆಡಿಸುವುದು. ಆದುದರಿಂದ ಕರ್ಮಿಯು ಇಂಥಾ ವಿಷಯಗಳಿಗೆ ಅವಕಾಶಕೊಡದೆ ಆಯಾ ಕರ್ಮಗಳನ್ನು ಫಲಾಪೇಕ್ಷೆಗಳಿಲ್ಲದೆ ಭಕ್ತಿ ಶ್ರದ್ಧೆಗಳಿಂದ ಆಚರಿಸಿ ಭಗವಂತನ ಪಾದಾರವಿಂದಗಳಲ್ಲಿ ಅರ್ಪಿಸಿದಂತೆ ಭಾವಿಸಬೇಕು. ಇತರ ದೇವತಾ ಭಜನೆಗಳಿಂದ ಅಲ್ಪಫಲವು ಪ್ರಾಪ್ತವಾಗಬಹುದು. ಭಗವಂತನಾದ ಶ್ರೀಮನ್ನಾರಾಯಣನು ಎಲ್ಲರಿಗೂ ಸರ್ವಾಂತರ್ಯಾಮಿಯಾದುದರಿಂದ **"ಯಥಾಸ್ಥಾನಂ ತದ್ಭವತಿ"** ಎಂಬಂತೆ ಅಲ್ಲಿಯೂ ಆಯಾ ದೇವತಾಶಕ್ತಿಗಳಿಗೆ ತಕ್ಕಂತೆ ಆಯಾ ಫಲಗಳನ್ನು ಕೊಡುತ್ತಾನೆ. ಅವು ಪ್ರಪನ್ನಾನುಷ್ಠಾನಪರರಿಗೆ ಪ್ರಯೋಜನವಿಲ್ಲ. ಶ್ರೀಮನ್ನಾರಾಯಣನು ಒಬ್ಬನು ವಿನಾ ಇತರ ದೇವತೆಗಳೆಲ್ಲವೂ ರಾಜಸ ತಾಮಸ ಗುಣಗಳುಳ್ಳವರೆಂದು ಅರಿಯಬೇಕು. [ ಗೀತೆ 4–11, 12; 7–20, 21, 22, 23 ] ಆದುದರಿಂದ ಕರ್ಮಿಯು ಕರ್ಮಫಲಗಳಮೇಲೆ ಆಶೆಯಿಲ್ಲದೆಯೂ, ಮಂತ್ರಾರ್ಥದಮೇಲೆ ದೃಷ್ಟಿ ಇಡದೆಯೂ ಭಗವಂತನ ಆರಾಧನರೂಪವಾದ ಕೈಂಕರ್ಯಗಳೆಂದು ಭಾವಿಸಿ ಭಕ್ತಿಯಿಂದ ಕರ್ಮಗಳನ್ನು ಮಾಡಬೇಕು.

## 7. ಗಾಯತ್ರೀ ಮತ್ತು ಇತರವಿಚಾರಗಳು.

A. **"ಓಂ ಭೂಃ........ಓಂಗ್ಂ ಸತ್ಯಂ"** ಎಂಬ ಏಳು ಪದಗಳಿಗೆ **"ವ್ಯಾಹೃತಿ"** ಎಂದು ಹೆಸರು. **ಅಕಾರ, ಉಕಾರ, ಮಕಾರ** ಗಳೆಂಬ ಮೂರು ಅಕ್ಷರಗಳೂ ಸೇರಿ **"ಓಂ"** ಎಂಬ ಅಕ್ಷರವು ಉಂಟಾಯಿತು. ಇದಕ್ಕೆ ಪ್ರಣವಾಕ್ಷರವೆಂದು ಹೆಸರು. **"ತತ್ಸವಿತುರ್ವರೇಣ್ಯಂ,.....ಪ್ರಚೋದಯಾತ್"** ಎಂಬುದೇ **ಗಾಯತ್ರೀ;** ಇದು ಮೂರುಪಾದಗಳಾಗಿಯೂ ಇಪ್ಪತ್ತನಾಲ್ಕು ಅಕ್ಷರಗಳುಳ್ಳದ್ದಾಗಿಯೂ ಇರುವುದು. "**ಓಂ ಆಪೋಜ್ಯೋತಿ**"–ಇತ್ಯಾದಿ ಪದಗಳಿಗೆ **ಗಾಯತ್ರೀಶಿರಸ್ಸು**" ಎಂದು ಹೆಸರು. ಋಕ್, ಯಜುಸ್ಸು, ಸಾಮವೇದಗಳ ಸಾರಭೂತವಾದ **"ಭೂಃ, ಭುವಃ, ಸುವಃ,"** ಎಂಬ ವ್ಯಾಹೃತಿಗಳಿಂದ **"ಓಂ"** ಎಂಬ ಪ್ರಣವಾಕ್ಷರವು ಉಂಟಾಯಿತು. ಈ ಶ್ರೇಷ್ಠವಾದ ಪ್ರಣವಾಕ್ಷರವನ್ನು ವೇದಮಂತ್ರಗಳಿಗೆ ಮೊದಲೂ ಮತ್ತು ಅಂತ್ಯದಲ್ಲೂ ಶಾಸ್ತ್ರೋಕ್ತವಾಗಿ ಉಚ್ಚರಿಸಬೇಕು. ಆದುದರಿಂದ **ತ್ರಿಪಾದ**

# ನಿತ್ಯಾಹ್ನಿಕ ಕ್ರಮ

ಗಾಯತ್ರಿಗೆ ಮೊದಲೂ "ಓಂ ಭೂಃ ಓಂ ಭುವಃ, ಓಂಗ್ಂ ಸುವಃ ಓಂ" ಎಂದು ವ್ಯಾಹೃತಿ ಬೀಜಾಕ್ಷರಗಳನ್ನೂ ಪ್ರಣವಾಕ್ಷರಗಳನ್ನೂ ಉಚ್ಚರಿಸಲೇಬೇಕು. [ಮನುಸ್ಮೃತಿ ೨ನೇ ಅಧ್ಯಾಯದಲ್ಲಿ ೭೩ರಿಂದ ೮೭ನೇ ಶ್ಲೋಕಗಳವರೆಗೂ ಓಂಕಾರವಿಚಾರವು ವಿವರಿಸಲ್ಪಟ್ಟಿರುತ್ತೆ. ಅವುಗಳಲ್ಲಿ ಮುಖ್ಯವಾದ ಶ್ಲೋಕಗಳನ್ನು ಮೇಲೆ ಬರೆದಿರುವ ವಿಚಾರಗಳಿಗೆ ಆಧಾರವಾಗಿ ಈ ಕೆಳಗೆ ಪ್ರಕಾಶಪಡಿಸಿರುತ್ತೆ.

(a) **"ಬ್ರಹ್ಮಣಃ ಪ್ರಣವಂ ಕುರ್ಯಾ, ಆದಾವಂತೇ ಚ ಸರ್ವದಾ ।**
**ಸ್ರವತ್ಯನೋಂಕೃತಂ ಪೂರ್ವಂ, ಪರಸ್ತಾಚ್ಚ ವಿಶೀರ್ಯತೇ ॥೭೪॥**

(b) **ಅಕಾರಂ ಚಾಪ್ಯುಕಾರಂ ಚ ಮಕಾರಂ ಚ ಪ್ರಜಾಪತಿಃ ।**
**ವೇದತ್ರಯಾನ್ನಿರದುಹತ್, ಭೂರ್ಭುವಸ್ಸ್ವರಿತೀತಿ ಚ ॥೭೬॥**

(c) **ತ್ರಿಭ್ಯ ಏವ ತು ವೇದೇಭ್ಯಃ, ಪಾದಂ ಪಾದಮದೂದುಹತ್ । ತದಿ**
**ತ್ಯೃಚೋಽಸ್ಯಾಃ ಸಾವಿತ್ರ್ಯಾಃ, ಪರಮೇಷ್ಠೀ ಪ್ರಜಾಪತಿಃ ॥೭೭॥**

(d) **ಏತದಕ್ಷರಮೇತಾಂ ಚ ಜಪನ್ ವ್ಯಾಹೃತಿ ಪೂರ್ವಿಕಾಂ ।**
**ಸನ್ಧ್ಯಯೋರ್ವೇದವಿದ್ವಿಪ್ರೋ, ವೇದಪುಣ್ಯೇನ ಯುಜ್ಯತೇ ॥೭೮॥**

(e) **ಓಂಕಾರ ಪೂರ್ವಿಕಾಸ್ತಿಸ್ರೋ, ಮಹಾವ್ಯಾಹೃತಯೋಽವ್ಯಯಾಃ ।**
**ತ್ರಿಪಾದಾ ಚೈವ ಸಾವಿತ್ರೀ, ವಿಜ್ಞೇಯಾ ಬ್ರಹ್ಮಣೋ ಮುಖಮ್ ॥೮೦॥**

ಈ ಪ್ರಕಾರವಾಗಿ ಸ್ಮೃತಿ ಹೇಳುವುದರಿಂದ "ಓಂ ತತ್ಸವಿತುರ್ವರೇಣ್ಯಂ" ಎಂದು ಗಾಯತ್ರೀಮಂತ್ರವನ್ನು ಉಚ್ಚರಿಸುವುದು ಸರಿಯಲ್ಲ; ಆದುದರಿಂದ **"ಓಂ ಭೂರ್ಭುವಸ್ಸುವಃ ಓಂ ತತ್ಸವಿತುರ್ವರೇಣಿಯಂ । ಭರ್ಗೋ ದೇವಸ್ಯ ಧೀಮಹಿ । ಧಿಯೋ ಯೋ ನಃ ಪ್ರಚೋದಯಾತ್ ॥"** ಎಂದು ಉಚ್ಚರಿಸಿ ಮಂತ್ರವನ್ನು ಹೇಳುವುದೇ ಸರಿಯಾದುದೆಂದು ವ್ಯಕ್ತವಾಗುತ್ತದೆ. ಇದರಿಂದ "ಓಂ" ಎಂಬ ಪ್ರಣವಾಕ್ಷರವನ್ನು ವ್ಯಾಹೃತಿಯ ಮೊದಲೂ ಮತ್ತು ಅಂತ್ಯದಲ್ಲೂ ಉಚ್ಚರಿಸಲೇಬೇಕೆಂದು ನಿರ್ಣಯಿಸಲ್ಪಟ್ಟಿತು.

## B. ಅಧಿಕ ಪಾಠಗಳು—(1) ಅಷ್ಟಾಂಗನ್ಯಾಸ ಮಂತ್ರಗಳು

ಓಂ ತತ್ಸವಿತುಃ, ಜ್ಞಾನಾಯ ಹೃದಯಾಯನಮಃ । ಓಂ ವರೇಣ್ಯಂ, ಐಶ್ವರ್ಯಾಯಶಿರಸೇಸ್ವಾಹಾ । ಓಂ ಭರ್ಗೋದೇವಸ್ಯ, ಶಕ್ತ್ಯೈ ಶಿಖಾಯೈ ವೌಷಟ್ । ಓಂ ಧೀಮಹಿ, ಬಲಾಯಕವಚಾಯಹುಂ । ಓಂ ಧಿಯೋ ಯೋನಃ, ತೇಜಸೇ ನೇತ್ರಾಭ್ಯಾಂ ವೌಷಟ್ । ಓಂ ಪ್ರಚೋದಯಾತ್, ವೀರ್ಯಾಯಅಸ್ತ್ರಾಯಫಟ್ ॥ ಈ ಅಂಗನ್ಯಾಸವನ್ನು "ಮುಕ್ತಾವಿದ್ರುಮಹೇಮನೀಲ" ಇತ್ಯಾದಿ ಗಾಯತ್ರೀ ಧ್ಯಾನಮಂತ್ರವನ್ನು ಉಚ್ಚರಿಸುವುದಕ್ಕೆ ಮುಂಚಿತವಾಗಿ ಮಾಡುವುದುಂಟು; ಅನಂತರ "ಓ ಮಾಪೋ ಜ್ಯೋತೀರಸೋಽಮೃತಂ ಬ್ರಹ್ಮ ಭೂರ್ಭುವಸ್ಸುವರೋಮ್" ಎಂದು ವ್ಯಾಪಕನ್ಯಾಸವನ್ನು ಮಾಡುವುದುಂಟು.

(2) ಓಂ ಭೂಃ, ಅಂಗುಷ್ಠಾಭ್ಯಾಂ ನಮಃ । ಓಂ ಭುವಃ, ತರ್ಜನೀಭ್ಯಾಂ ನಮಃ । ಓಗ್‌ಂಸುವಃ, ಮಧ್ಯಮಾಭ್ಯಾಂ ನಮಃ । ಓಂ ತತ್ಸವಿತುರ್ವರೇಣ್ಯಂ, ಅನಾಮಿಕಾಭ್ಯಾಂ ನಮಃ । ಓಂ ಭರ್ಗೋದೇವಸ್ಯಧೀಮಹಿ, ಕನಿಷ್ಠಿಕಾಭ್ಯಾಂ ನಮಃ । ಓಂ ಧಿಯೋ ಯೋನಃ ಪ್ರಚೋದಯಾತ್, ಕರತಲಕರಪೃಷ್ಠಾಭ್ಯಾಂ ನಮಃ ॥ ಎಂದು ಗಾಯತ್ರೀ ಜಪಮಾಡುವುದಕ್ಕೆ ಮುಂಚೆ ಈ ಕರನ್ಯಾಸಗಳನ್ನು ಮಾಡುವುದುಂಟು.

(3) ಸೂರ್ಯನನ್ನೂ ಮತ್ತು ನಾರಾಯಣನನ್ನೂ ಧ್ಯಾನ ಮಾಡುವಕ್ರಮ.—

"ಯೋದೇವಸ್ಸವಿತಾಸ್ಮಾಕಂ, ಧಿಯೋಧರ್ಮಾದಿಗೋಚರಾಃ ।
ಪ್ರೇರಯೇತ್ತಸ್ಯ ಯದ್ಭರ್ಗ, ಸ್ತದ್ವರೇಣ್ಯಮುಪಾಸ್ಮಹೇ ॥ ಎಂದು ಸೂರ್ಯದೇವತೋಪಾಸನೆಯನ್ನೂ, ಅನಂತರ ಸೂರ್ಯಮಂಡಲ ಮಧ್ಯವರ್ತಿಯಾದ ಶ್ರೀಮನ್ನಾರಾಯಣನನ್ನೂ "ಆದಿತ್ಯಮಂಡಲೇಧ್ಯಾಯೇತ್ಪರಮಾತ್ಮಾನಮವ್ಯಯಂ । ವಿಷ್ಣುಂಚತುರ್ಭುಜಂ ರಕ್ತಪಂಕಜಾಸನಮಧ್ಯಗಮ್ ॥ ಕಿರೀಟಹಾರ ಕೇಯೂರ ಕಟಕಾದಿ ವಿಭೂಷಿತಮ್ । ಶ್ರೀವತ್ಸವನಮಾಲಾ ಶ್ರೀತುಳಸೀಕೌಸ್ತುಭೋಜ್ವಲಮ್ ॥ ಹರಿಂ ಪೀತಾಂಬರಧರಂ, ಶಙ್ಖಚಕ್ರಗದಾಧರಂ । ಪ್ರಸನ್ನವದನಂ ರಕ್ತಂ, ಕುಂಡಲೈರ್ಮಣ್ಡಿತಾನನಮ್ ॥ ಸರ್ವರತ್ನಸಮಾಯುಕ್ತಂ, ಸರ್ವಾಭರಣಭೂಷಿತಮ್" ॥ ಎಂದು ಗಾಯತ್ರೀಜಪ ಮಾಡುವುದಕ್ಕೆಮುಂಚಿತವಾಗಿ ಧ್ಯಾನಮಾಡುವುದುಂಟು.

## C. ಸಪ್ತವ್ಯಾಹೃತಿಗಳ ಧ್ಯಾನಾಂಗ ಕ್ರಮ.

| ಸಂಖ್ಯೆ | ಹೆಸರು | ಋಷಿ | ಛನ್ದಸ್ಸು | ಸ್ಥಳಗಳದೇವತೆ | ನ್ಯಾಸಾಂಗಗಳು | ಲೋಕಗಳು |
|---|---|---|---|---|---|---|
| 1 | ಓಂ ಭೂಃ | ಅತ್ರಿ | ಗಾಯತ್ರೀ | ಅಗ್ನಿ | ಪಾದಗಳು | ಭೂಲೋಕ |
| 2 | ಓಂ ಭುವಃ | ಭೃಗು | ಉಷ್ಣಿಕ್ | ವಾಯು | ಕಾಲಿನ ಮೀನುಖಂಡ | ಭುವರ್ಲೋಕ |
| 3 | ಓಗ್ಂ ಸುವಃ | ಕುತ್ಸ | ಅನುಷ್ಟುಪ್ | ಸೂರ್ಯ | ಮೊಣಕಾಲು ಮತ್ತು ತೊಡೆ | ಸುವರ್ಲೋಕ |
| 4 | ಓಂ ಮಹಃ | ವಸಿಷ್ಠ | ಬೃಹತೀ | ಬೃಹಸ್ಪತಿ | ಹೊಟ್ಟೆ | ಮಹರ್ಲೋಕ |
| 5 | ಓಂ ಜನಃ | ಗೌತಮ | ಪಙ್ಕ್ತೀ | ವರುಣ | ಎದೆ | ಜನೋಲೋಕ |
| 6 | ಓಂ ತಪಃ | ಕಾಶ್ಯಪ | ತ್ರಿಷ್ಟುಪ್ | ಇಂದ್ರ | ಮುಖ | ತಪೋಲೋಕ |
| 7 | ಓಗ್ಂ ಸತ್ಯಮ್ | ಅಂಗಿರಸ | ಜಗತೀ | ವಿಶ್ವೇದೇವತೆಗಳು | ಶಿರಸ್ಸು | ಸತ್ಯಲೋಕ |

ಈ ಪ್ರಕಾರ ಧ್ಯಾನಿಸುತ್ತಾ ನ್ಯಾಸಗಳನ್ನು ಮಾಡಬೇಕು. ಒಂದೊಂದು ವ್ಯಾಹೃತಿ ದೇವತೆಗಳೂ ನಾಲ್ಕು ಕೈಗಳನ್ನೂ, ಪವಿತ್ರವನ್ನೂ, ಅಭಯ ಮುದ್ರೆಯನ್ನೂ, ಅಕ್ಷರಮಾಲೆಯನ್ನೂ, ಜಲಪಾತ್ರೆಯನ್ನೂ, ವರದಾನ ಮುದ್ರೆಯನ್ನೂ ಧರಿಸಿರುತ್ತಾರೆ; ಮತ್ತು ಚಂದನ, ಕುಸುಮಮಾಲೆ, ಆಭರಣ, ಯಜ್ಞೋಪವೀತ ಮುಂತಾದುವುಗಳಿಂದ ಅಲಂಕೃತನಾಗಿಯೂ, ಬಿಳುಪು, ಕಪ್ಪು, ಹಳದಿ, ಪಿಂಗಳ, ಕೆಂಪು, ನೀಲ, ಸುವರ್ಣ ಬಣ್ಣಗಳುಳ್ಳವರಾಗಿಯೂ, ಇರುವಂತೆ ಧ್ಯಾನಿಸಿ ಗಾಯತ್ರೀಯ ಒಂದೊಂದು ಪಾದವನ್ನು ಎರಡಾಗಿ ಭಾಗಮಾಡಿ ಆರು ಪಾದಗಳಂತೆ ಮಾಡಿಕೊಂಡು, ಎದೆ, ಶಿರಸ್ಸು, ಕೈ, ತೋಳುಗಳು, ಕಾಲುಗಳು, ದಿಕ್ಕು, ವಿದಿಕ್ಕುಗಳು ಇವುಗಳಲ್ಲಿ ನ್ಯಾಸಮಾಡಬೇಕು. ಅದರೊಂದಿಗೆ ಹೃದಯಾದಿ ಅಂಗಮಂತ್ರಗಳನ್ನೂ ಸೇರಿಸಿಕೊಳ್ಳಬಹುದು.

## 8. ಗಾಯತ್ರೀದೇವತಾಸ್ವರೂಪ ಧ್ಯಾನಮ್.

"ಮುಕ್ತಾವಿದ್ರುಮ" ಇತ್ಯಾದಿ—ಕಿರೀಟದಲ್ಲಿ ಚಂದ್ರನೂ, ಐದು ಮುಖಗಳೂ, ಆ ಒಂದೊಂದು ಮುಖದಲ್ಲಿ ಮೂರು ಮೂರು ಕಣ್ಣುಗಳೂ ಮುಖಗಳ ವರ್ಣನೆಯಂತೆ ಮುತ್ತು, ಹವಳ, ಚಿನ್ನ, ನೀಲ, ಮತ್ತು ಬಿಳುಪು ಹೀಗೆ ಐದು ಮುಖಗಳೂ ಪಂಚಕಾಂತಿಯಿಂದ ಕೂಡಿರುವುವು; ಹತ್ತು ಕೈಗಳೂ, ಆ ಕೈಗಳೊಂದೊಂದರಲ್ಲಿ ವರದಾನಮುದ್ರೆ, ಅಂಕುಶ, ಚಾವಟಿ, ಬಿಳೀ ಕಪಾಲ, ಹಗ್ಗ, ಶಂಖ, ಚಕ್ರ, ಎರಡು ತಾವರೆಹೂವು ಇವುಗಳನ್ನು ಧರಿಸಿರುವ - ಸರ್ವತತ್ತ್ವಸ್ವರೂಪಿಣೀ, ಸರ್ವಾರ್ಥರೂಪಿಣೀ, ಸರ್ವಾಕ್ಷರರೂಪಿಣಿಯಾದ ಗಾಯತ್ರೀದೇವತೆಯನ್ನು ಭಗವಚ್ಛಕ್ತಿರೂಪವನ್ನಾಗಿ ಧ್ಯಾನಮಾಡಬೇಕು. ಈ ರೂಪವಾಗಿರುವಂಥಾ ಭಗವಂತನನ್ನು ಭಕ್ತಿಯಿಂದ ಧ್ಯಾನಿಸಿ ಅವನ ಪಾದಾರವಿಂದಗಳಲ್ಲಿ ಗಾಯತ್ರೀ ಮಂತ್ರಜಪವನ್ನು ಮಾಡಿ ಅರ್ಪಿಸಬೇಕು. ಇದರಿಂದ ಗಾಯತ್ರೀ ದೇವತೆ ಅವನೇ ಎಂದು ವ್ಯಕ್ತವಾಗುತ್ತದೆ. [ಗೀತೆ 10-35] "ಅಂಥಾ ಭಗವತ್ಸ್ವರೂಪಿಯಾದ ಶ್ರೀಮನ್ನಾರಾಯಣನನ್ನೇ ಅಂತರ್ಯಾಮಿಯಾಗುಳ್ಳ ಸೂರ್ಯದೇವನ ಶ್ರೇಷ್ಠವಾದ ಕಿರಣಗಳು ನಮ್ಮ ಬುದ್ಧಿಯಲ್ಲಿ ಪ್ರವೇಶಿಸಿ ಆ ಮೂರ್ತಿಯನ್ನು ಧ್ಯಾನಮಾಡುವಂತೆ ಮಾಡಿ ನಮ್ಮಗಳ ಅಜ್ಞಾನವನ್ನು ಹೋಗಲಾಡಿಸಲಿ ಮತ್ತು ಪಾಪಗಳನ್ನು ನಾಶಮಾಡಿ ಕಾಪಾಡಲಿ" ಎಂಬುದೇ ಗಾಯತ್ರೀಮಂತ್ರದ ಭಾವಾರ್ಥವು.

## 9. ಸೂರ್ಯದೇವನ ಸ್ಥಿತಿಗತಿಗಳು:

(A) * ವೈಜ್ಞಾನಿಕ ಶಾಸ್ತ್ರೀಕರುಗಳು ಈ ಭೂಮಂಡಲವು ಪೂರ್ವಾಭಿಮುಖವಾಗಿ ಸುತ್ತುತ್ತಿರುವುದೆಂಬುದಾಗಿಯೂ; ಋಷಿಗಳು ಮುಂತಾದ ಪೂರ್ವೀಕ ಪ್ರಾಜ್ಞರುಗಳು ಸೂರ್ಯನು ತನ್ನ ರತ್ನಖಚಿತವಾದ ರಥದಲ್ಲಿ ಆಕಾಶಮಾರ್ಗದಲ್ಲಿ ಸಂಚರಿಸುವುದಾಗಿಯೂ ಅನೇಕ ಶಾಸ್ತ್ರಗಳ ಮೂಲಕವಾಗಿ ಅಭಿಪ್ರಾಯಭೇದಗಳನ್ನು ನಮ್ಮಗಳಿಗೆ ಉಂಟುಮಾಡಿರುತ್ತಾರೆ. ಇದು ಒಂದು ಮಹದಾಶ್ಚರ್ಯವೇಸರಿ. ಪ್ರಸ್ತುತದಲ್ಲಿ ನಾವು ನಮ್ಮ ಹಿರಿಯರುಗಳ ಪೂರ್ವೀಕ ಪದ್ಧತಿಯನ್ನೇ ಅನುಸರಿಸುತ್ತಿರುವುದು ಉತ್ತಮ.

---

* Please see the *Ptolemic Theory* which held good till it was replaced by the untenable *Copernican Theory* of the 16th Century. [1473 to 1643.]

"ರಸಾವಿಶ್ವಂಭರಾ ಸ್ಥಿರಾ" ಎಂದು ಅಮರಸಿಂಹನೂ ಸಹ ಭೂಮಿಯು ಚಲಿಸದೇ ಇರುವ ಗೋಳವೆಂಬುದಾಗಿ ಘಂಟಾ ಘೋಷವಾಗಿ ಹೇಳಿರುತ್ತಾನೆ.

ಸೂರ್ಯನು ಒಂದು ಸಾರಿ ಈ ಭೂಮಂಡಲವನ್ನು ಸುತ್ತಿದರೆ 23 ಘಂಟೆ 56 ನಿಮಿಷಗಳಾಗುವುದಾಗಿಯೂ, ಭೂಮಿಗೂ ಮತ್ತು ಸೂರ್ಯನಿಗೂ ಸುಮಾರು 9,30,00,000 ಮೈಲಿಗಳಷ್ಟು ದೂರವಿರುವುದಾಗಿಯೂ, ಸೂರ್ಯನ ವ್ಯಾಸವು (Diameter) ಸುಮಾರು 8,60,000 ಮೈಲಿಗಳಿರುವುದಾಗಿಯೂ, ಅವನ ಬೆಳಕು ಒಂದು ಸೆಕೆಂಡಿನಲ್ಲಿ ಸುಮಾರು 1,86,000 ಮೈಲಿಗಳು ಹೋಗುವುದಾಗಿಯೂ, ಈ ಭೂಮಂಡಲದ ವ್ಯಾಸವು ಸುಮಾರು 8,000 ಮೈಲಿಗಳಿರುವುದಾಗಿಯೂ, ಸೂರ್ಯನು ಒಂದು ಸೆಕೆಂಡಿನಲ್ಲಿ ಸುಮಾರು * 6,785 ಮೈಲಿಗಳ ವೇಗದಲ್ಲಿ ಆಕಾಶಮಾರ್ಗವಾಗಿ ಸಂಚರಿಸುವುದಾಗಿಯೂ, ಶಾಸ್ತ್ರಜ್ಞರು ಯಂತ್ರೋಪಕರಣ ಮುಂತಾದವುಗಳ ಮೂಲಕವಾಗಿ ಕಂಡುಹಿಡಿದಿರುತ್ತಾರೆ. ಸೂರ್ಯನ ಗಾತ್ರವು ನಕ್ಷತ್ರಗಳ ಸಮುದಾಯದಲ್ಲಿ ಸಾಮಾನ್ಯವಾದುದೆಂದು ಹೇಳುತ್ತಾರೆ. ಇದರಿಂದ ಸೂರ್ಯನಿಗಿಂತ ಬಹಳದೂರದಲ್ಲಿರುವ ನಕ್ಷತ್ರಗಳು ಬಹಳ ದೊಡ್ಡವೆಂದು ತಿಳಿದು ಬರುತ್ತೆ. ಚಂದ್ರನು ಸೂರ್ಯನಿಗಿಂತಲೂ 12 ಲಕ್ಷ ಮೈಲಿಗಳಷ್ಟು ದೂರದಲ್ಲಿ ಆಕಾಶದಲ್ಲಿ ಸಂಚರಿಸುವುದರಿಂದ ಸೂರ್ಯತೇಜಸ್ಸಿನ ಬೆಳಕಿನಿಂದ ಪ್ರಕಾಶಿಸುತ್ತಾನೆ.

ಸೂರ್ಯದೇವನ ರಥವನ್ನು ಕಾಲುಗಳಿಲ್ಲದ ಅರುಣದೇವನು ನಡೆಸುತ್ತಾನೆ. ಸೂರ್ಯನು ಯಾವಾಗಲೂ ಒಂದೇ ಪ್ರಕಾರ ತೀಕ್ಷ್ಣಕಾಂತಿಯಿಂದ ಪ್ರಜ್ವಲಿಸುತ್ತಾ ಈ ಲೋಕವನ್ನು ಶ್ರೀ ಮಹಾವಿಷ್ಣುವಿನ ಅಂಶದಿಂದ ಕಾಪಾಡುತ್ತಾನೆ. ಇವನ ಚಲನೆಗಳಿಂದಲೂ ದೇಶವ್ಯತ್ಯಾಸ ಕಾಲಗಳಿಂದಲೂ ಉದಯ ಮತ್ತು ಅಸ್ತಮಾನಕಾಲಗಳಲ್ಲಿ ಕೆಂಪು, ಬಿಳುಪು ಮುಂತಾದ ಬಣ್ಣಗಳಿಂದ ಪ್ರಕಾಶಿಸುತ್ತಾನೆ. ಇವನ ರಥವು 9 ಸಾವಿರ × ಯೋಜನವಿಸ್ತಾರವಾಗಿಯೂ, ಮೂಕಿಯುಮರವು 18 ಯೋಜನ ವಿಸ್ತಾರವಾಗಿಯೂ, ಪೂರ್ವಾಹ್ಣ, ಅಪರಾಹ್ಣ, ಮಧ್ಯಾಹ್ನ ಎಂಬ ಮೂರು ನಾಭಿಗಳುಳ್ಳ ಅಕ್ಷವು 50 ಸಾವಿರಯೋಜನ ವಿಸ್ತಾರವಾಗಿಯೂ ಇರುವುದು. ಈ

---

* $\frac{2 \times 9{,}30{,}00{,}000 + 8{,}000 \times 22}{86160 \times 7}$ =6785 ಮೈಲಿಗಳು (ಒಂದುಸೆಕೆಂಡಿಗೆ)

× ಯೋಜನ—12 ಮೈಲಿಗಳು; ಕೆಲವರು 8 ಮೈಲಿಗಳೆನ್ನುತ್ತಾರೆ.

10 miles

# ಸೂರ್ಯದೇವನ ಸ್ಥಿತಿಗತಿಗಳು

ಅದಕ್ಕೆ ಸಂವತ್ಸರ, ಪರಿವತ್ಸರ, ಇಡಾವತ್ಸರ, ಅನುವತ್ಸರ, ಇದ್ವತ್ಸರ ಗಳೆಂಬ ಐದು ಸಂವತ್ಸರಾತ್ಮಕವಾದ ಅರಗಳುಳ್ಳ ಒಂದು ಚಕ್ರವು ಮಧ್ಯ ದಲ್ಲಿ ಸ್ಥಾಪಿತವಾಗಿರುವುದು. ಆರು ಋತುಗಳೇ ಚಕ್ರಕ್ಕೆ ಬಳೆಗಳಾಗಿರು ವುವು. ಆ ರಥಕ್ಕೆ ಗಾಯತ್ರೀ, ಬೃಹತೀ, ಉಷ್ಣಿಕ್, ಜಗತೀ, ತ್ರಿಷ್ಟುಪ್, ಅನುಷ್ಟುಪ್, ಪಂಕ್ತಿ ಎಂಬದಾಗಿ ಏಳು ಛಂದಸ್ಸುಗಳೆಂಬ ಕುದುರೆಗಳನ್ನು ಕಟ್ಟಿ, ವಾಯ್ವಾತ್ಮಕವಾದ ಪಗ್ಗವನ್ನು ಹಿಡಿದು ಅರುಣನು ಸಾರಥ್ಯವನ್ನು ಮಾಡುತ್ತಾನೆ. ಹೀಗೆ ರಥವು ಪೂರ್ವದಿಂದ ಪಶ್ಚಿಮಾಭಿಮುಖವಾಗಿ ಮಹಾಮೇರುಪರ್ವತದ ಶಿಂಶುಮಾರಾಕೃತಿಯ ಪೃಷ್ಠದಲ್ಲಿ ಸ್ಥಾಪಿತವಾಗಿರುವ ಧ್ರುವ ಮಂಡಲವನ್ನು ಪ್ರದಕ್ಷಿಣೆಯಾಗಿ ಸಂಚರಿಸುತ್ತದೆ. ಧ್ರುವಮಂಡಲವು ಮಹಾಮೇರು ಪರ್ವತದಿಂದ ಸುಮಾರು 15 ಲಕ್ಷ ಯೋಜನ ದೂರದಲ್ಲಿರುವುದು. ಈ ಧ್ರುವಮಂಡಲ ವನ್ನು ಎಲ್ಲಾ ಗ್ರಹಗಳೂ ಪ್ರದಕ್ಷಿಣೆಯಾಗಿ ಸುತ್ತುತ್ತವೆ.

ಶಿಂಶುಮಾರಚಕ್ರಕ್ಕೆ ಶ್ರೀಮನ್ನಾರಾಯಣನು ಆಧಾರನು. ಶಿಂಶು ಮಾರವು ಧ್ರುವನಿಗೆ ಆಧಾರವು. ಧ್ರುವನು ಸೂರ್ಯಾದಿಗ್ರಹಗಳಿಗೆ ಆಧಾ ರನು. ಸೂರ್ಯನು ತನ್ನ ತೀಕ್ಷ್ಣವಾದ ಕಿರಣಗಳಿಂದ ಭೂಮಿಯಲ್ಲಿರುವ ಜಲವನ್ನು ಪಾನಮಾಡಿ ಚಂದ್ರನಲ್ಲಿ ಬಿಡುತ್ತಾನೆ. ಚಂದ್ರನು ಆ ಜಲ ವನ್ನು ಮೇಘಗಳಲ್ಲಿ ಬಿಡುತ್ತಾನೆ. ಮೇಘಗಳು ವಾಯು ಸಹಾಯ ದಿಂದ ಭೂಮಿಯಮೇಲೆ ವರ್ಷಿಸುತ್ತವೆ. ಇದರಿಂದ ಅನ್ನವು ಉತ್ಪತ್ತಿ ಯಾಗುತ್ತದೆ. ಅನ್ನದಿಂದ ಅಖಿಲಜಗತ್ತೂ, ಜೀವರಾಶಿಗಳೂ ಹುಟ್ಟಿ ಬೆಳೆ ಯುವುವು. ಜನಗಳು ಮಾಡುವ ಫಲಾಪೇಕ್ಷೆಯಿಲ್ಲದ ಸತ್ಕರ್ಮಗಳಿಂದ ದೇವತೆಗಳು ತೃಪ್ತಿಹೊಂದಿ ಭಗವಂತನ ಅನುಗ್ರಹದಿಂದ ಲೋಕವನ್ನು ಸಂರಕ್ಷಿಸುತ್ತಾರೆ. ಸೂರ್ಯನ ರಥವು ದೇವತೆಗಳು, ಋಷಿಗಳು ಮುಂತಾದ ಸಪ್ತಗಣಗಳಿಂದ ಆಯಾ ಮಾಸಗಳಲ್ಲಿ ಅಲಂಕೃತವಾಗಿರುವುದು. ಅವು ಗಳ ವಿವರಗಳು 32 ನೇ ಪುಟದ ಪಟ್ಟಿಯಲ್ಲಿರುವುವು; ಮತ್ತು ರಥದಲ್ಲಿ ಇವರುಗಳಿಂದ ಸ್ತೋತ್ರ, ಗಾನ, ನರ್ತನಗಳು ನಡೆಯುತ್ತವೆ. ರಾಕ್ಷ ಸರು ಅನುಚರರಾಗಿರುತ್ತಾರೆ. ಸರ್ಪಗಳು ಹೊರುತ್ತವೆ. ಯಕ್ಷರು ಕುದುರೆಗಳನ್ನು ಕಟ್ಟುತ್ತಾರೆ. 60 [illegible] ವಾಲಖಿಲ್ಯಾದಿ ಮಹರ್ಷಿಗಳು ಸೂರ್ಯನಸುತ್ತಲೂ ಲೋಕಪ್ರಕಾಶನಾರ್ಥಕ್ಕಾಗಿ ಗಾಯತ್ರೀ ಮಂತ್ರ ದಿಂದ ಉಪಾಸನೆ ಮಾಡುತ್ತಾರೆ. ಸೂರ್ಯನು ಆಯಾ ಕಾಲಗಳಲ್ಲಿ ಹಿಮ, ಉಷ್ಣ, ಜಲ, ವೃಷ್ಟಿ ಮುಂತಾದವುಗಳಿಗೆ ಕಾರಣನಾಗಿ, ಶ್ರೀಮಹಾವಿಷ್ಣು

ವಿನ ಸಹಾಯದಿಂದಲೇ ಲೋಕವನ್ನು ಕಾಪಾಡುತ್ತಾನೆ. ಎಲ್ಲರಿಗೂ ಪ್ರತ್ಯಕ್ಷನಾದ ದೈವವೂ ಮತ್ತು ನಾವು ತ್ರಿಕರಣದಿಂದ ಮಾಡುವ ಕೆಲಸಗಳಿಗೆಲ್ಲಾ ಸಾಕ್ಷಿಭೂತನಾಗಿರುವವನೂ ಇವನೇ. ಸೂರ್ಯಮಂಡಲದ ಮೇಲುಭಾಗದಲ್ಲಿ ಚಂದ್ರಮಂಡಲವಿರುವುದು, ಅದರ ಮೇಲೆ ನಕ್ಷತ್ರ ಮಂಡಲಗಳಿರುವುವು. ನಕ್ಷತ್ರಗಳಲ್ಲಿ ದೊಡ್ಡದಾದ ಜ್ಯೇಷ್ಠಾ ನಕ್ಷತ್ರವು ಸುಮಾರು 41 ಕೋಟಿ ಮೈಲಿಗಳವ್ಯಾಸ (Diameter) ವುಳ್ಳದುದಾಗಿರುವುದು. ಹೀಗೆ ಅನೇಕಾನೇಕ ನಕ್ಷತ್ರಗಳು ಬಹಳಮೈಲಿಗಳ ದೂರವಿರುವುದರಿಂದ ನಮ್ಮಗಳ ಕಣ್ಣಿಗೆ ಬಹಳ ಸಣ್ಣಸಣ್ಣದಾಗಿ ಕಾಣುವುವು. ಹೀಗೆ ಭಗವಂತನಿಂದ ಸೃಷ್ಟಿಸಲ್ಪಟ್ಟ ವಿಶ್ವವನ್ನು ಹಾಗೆಯೇ ಸ್ವಲ್ಪ ನಿಧಾನವಾಗಿ ಯೋಚಿಸಿ ನೋಡಿದರೆ ನಮ್ಮಗಳಿಗೆ ಬಹಳ ವಿಚಿತ್ರವಾಗಿಯೂ ಆಶ್ಚರ್ಯವಾಗಿಯೂ ಮನಸ್ಸಿಗೆತೋರುವುದು. ಮತ್ತು ಈ ಭೂಮಂಡಲವು ಆವನ ಸೃಷ್ಟಿಕ್ರಮದಲ್ಲಿ ಒಂದಣುವಾಗಿ ಕಾಣಬಹುದು. ಬ್ರಹ್ಮಾದಿ ದೇವತೆಗಳೇ ಆವನಿಗೆ (ಭಗವಂತನ ಲೀಲೆಯಲ್ಲಿ) ಒಂದು × ಸಣ್ಣಹುಲ್ಲಿಗಿಂತ ಕಡೆಯಾಗಿ ಕಾಣುವಾಗ ನಮ್ಮಗಳಗತಿ ಏನು? ಆದುದರಿಂದ ಅತ್ಯಲ್ಪನಾದ ನಾವು ಶ್ರೀ ಭಗವದ್ಗೀತಾ ವಾಕ್ಯಗಳನ್ನನುಸರಿಸಿ ಆವನ ಪಾದಾರವಿಂದಗಳಲ್ಲಿ ಫಲಾಪೇಕ್ಷೆಗಳಿಲ್ಲದ ಭಕ್ತಿಯಿಂದ ಕೈಂಕರ್ಯರೂಪವಾದ ಕರ್ಮಗಳನ್ನು ಮಾಡಿ ಈ ಜನ್ಮವನ್ನು ಉದ್ಧಾರಮಾಡಿಕೊಳ್ಳಲು ಕಾರ್ಯತಃ ನಾವುಗಳು ಪ್ರತಿದಿನವೂ ಅಭ್ಯಾಸ ಮಾಡಬೇಕು.

(B) **ಚಂದ್ರನು**—ಇವನು ಮೂರು ಚಕ್ರಗಳೂ ಮತ್ತು ಹತ್ತು ಬಿಳೀ ಕುದುರೆಗಳೂ ಕಟ್ಟಿರುವ ರಥದಲ್ಲಿ ಕುಳಿತು ಸೂರ್ಯಮಂಡಲಕ್ಕಿಂತಲೂ ಮೇಲೆ ಒಂದು ಲಕ್ಷ ಯೋಜನದೂರದಲ್ಲಿ ಸಂಚರಿಸುತ್ತಾ ಧ್ರುವ ಮಂಡಲವನ್ನು ಇತರ ಗ್ರಹಗಳಂತೆ ಪ್ರದಕ್ಷಿಣೆಮಾಡುತ್ತಾನೆ. ಇವನ ಅಮೃತಮಯವಾದ ಕಲೆಯನ್ನು 15 ದಿನಗಳಲ್ಲಿ ದೇವತೆಗಳು ಪಾನಮಾಡುವುದರಿಂದ ಕಲಾಹೀನನಾಗಿ 16 ನೇ ದಿವಸ ಸೂರ್ಯಮಂಡಲವನ್ನು ಪ್ರವೇಶಮಾಡಿ ನೀರನ್ನು ಪಾನಮಾಡುತ್ತಾನೆ. ಆಗ ಸೂರ್ಯನು "**ಸುಷುಮ್ನಾ**" ಎಂಬ ಕಿರಣದಿಂದ ಚಂದ್ರನ ಕಲೆಯನ್ನು ಶುಕ್ಲ ಪಕ್ಷದಲ್ಲಿ ವೃದ್ಧಿ ಮಾಡುತ್ತಾನೆ. ಆ ಕಾಲದಲ್ಲಿ ಇನ್ನು ಆಹ್ಲಾದ ಜನಕಗಳಾದ

---

× ಸ್ತೋತ್ರರತ್ನ 7, 11 ನೇ ಶ್ಲೋಕಗಳನ್ನು, ಮುಕುಂದಮಾಲೆ 19 ನೇ ಶ್ಲೋಕವನ್ನು ನೋಡಬಹುದು.

ಕಿರಣಗಳಿಂದ ಮನುಷ್ಯ, ಪಶು, ಪಕ್ಷಿ ಮುಂತಾದುವುಗಳನ್ನು ಪೋಷಿಸುತ್ತಾನೆ. ಇವನು ಕಲಾಹೀನನಾಗಿರುವಾಗ "ಸಾನುಮತಿ" ಎಂದೂ ಪೂರ್ಣಕಲಾಯುಕ್ತನಾಗಿರುವಾಗ "ರಾಕಾ" ಎಂದೂ, ಇವನ ಕಿರಣಗಳು ಶೀತಳವಾಗಿರುವುದರಿಂದ "ಹಿಮಾಂಶು" ಎಂದೂ ಮತ್ತು "ನಿಶಾಪತಿ" ಎಂದೂ ಕರೆಯಲ್ಪಡುತ್ತಾನೆ. ಸೂರ್ಯನ ಕಾಂತಿಯಿಂದ ಹಗಲಲ್ಲಿ ತಾವರೆಹೂವು ಅರಳುವಂತೆ ಚಂದ್ರನ ಕಾಂತಿಯಿಂದ ರಾತ್ರಿಯಲ್ಲಿ "ಬಿಳೇ ನೈದಿಲೆ" [ಚಂದ್ರಕಾಂತಿ] ಹೂವು ಅರಳುತ್ತದೆ. ಇವನನ್ನು ಮಹಾ ಮಹಾ ಕವಿಗಳು ನಾನಾವಿಧವಾಗಿ ವರ್ಣಿಸಿರುತ್ತಾರೆ. ಇವನ ಮಗನಾದ ಬುಧನು ಹೊಂಬಣ್ಣವುಳ್ಳ 8 ಕುದುರೆಗಳು ಕಟ್ಟಿದ ರಥದಲ್ಲಿ ಇವನಿಗಿಂತ 3 ಲಕ್ಷ ಯೋಜನ ಎತ್ತರದಲ್ಲಿ ಸಂಚರಿಸುತ್ತಾನೆ.

ಚಂದ್ರನು ಅಶ್ವಿನಿ, ಭರಣಿ ಮುಂತಾದ 27 ನಕ್ಷತ್ರಗಳಲ್ಲಿ ಪ್ರತಿದಿನವೂ ಸ್ವಲ್ಪ ಹೆಚ್ಚು ಕಡಿಮೆ ತನ್ನ ಪಥದ ಭಾಗದಲ್ಲಿ ಚಲಿಸುತ್ತಾನೆ. ಚಂದ್ರ ಸೂರ್ಯ ಗ್ರಹಣಗಳು ಒಂದು ವರ್ಷದಲ್ಲಿ 2 ರಿಂದ 7 ರವರೆಗೂ ಆಗಬಹುದು. ಒಟ್ಟು ಭೂಮಿಯ ಎಲ್ಲಾ ಭಾಗಗಳಲ್ಲಿ ಆಗುವ ಗ್ರಹಣಗಳನ್ನು ನೋಡಿದರೆ ಸೂರ್ಯ ಗ್ರಹಣಗಳೇ ಹೆಚ್ಚೆಂದು ಹೇಳಬಹುದು. ಒಂದು ಸ್ಥಳದಿಂದಮಾತ್ರ ಯೋಚಿಸಿ ನೋಡಿದರೆ ಚಂದ್ರ ಗ್ರಹಣಗಳೇ ಸಾಮಾನ್ಯವೆಂದೂ ಸೂರ್ಯ ಗ್ರಹಣ ಅಪರೂಪವೆಂದೂ ಹೇಳಬಹುದು. ಈ ಗ್ರಹಣ ಪುಣ್ಯಕಾಲಗಳಲ್ಲಿ ತ್ರಿವರ್ಣದವರೂ ತಮ್ಮ ಪಿತೃಗಳಿಗೆ ತಿಲತರ್ಪಣಾದಿಗಳನ್ನು ಕೊಟ್ಟು ಕೃತಾರ್ಥರಾಗುತ್ತಾರೆ, ಮತ್ತು ಅನೇಕರು ಮಂತ್ರಗಳ ಪುರಶ್ಚರಣೆಮಾಡಿ ಸಿದ್ಧಿಯನ್ನು ಪಡೆಯುತ್ತಾರೆ. ಚಂದ್ರ ಸೂರ್ಯರಿಬ್ಬರೂ ಭಗವಂತನ ಕಣ್ಣುಗಳು, ಅವುಗಳಲ್ಲಿ ಒಂದು (ಚಂದ್ರ) ಕರುಣಾಮಯ—ಶೀತಳ, ಮತ್ತೊಂದು (ಸೂರ್ಯ) ಕೋಪಮಯ—ಉಷ್ಣ. ಆದುದರಿಂದ ಇದನ್ನು ಭಗವಂತನ ದುಷ್ಟನಿಗ್ರಹ ಶಿಷ್ಟಪರಿಪಾಲನಾ ಗುಣಗಳಿಗೆ ತಿಳಿದಂಥಾ ಸಾದೃಶ್ಯದ ಹೋಲಿಸಿರುತ್ತಾರೆ. ಚೇತನರು ಭಗವಂತನ ಕೋಪಕ್ಕೆ ಪಾತ್ರರಾಗದೆ ಚಂದ್ರನಂತೆ ಸೌಮ್ಯ ಗುಣವನ್ನು ತಾಳಿ ಭಗವದ್ಭಾಗವತಕೈಂಕರ್ಯಗಳಲ್ಲಿ ಭಕ್ತಿಯಿಂದ ನಿರತರಾಗಿರಬೇಕು. ಇದೇ ಮುಖ್ಯತತ್ತ್ವ. ಆದರೆ ಸೂರ್ಯನಿಂದಲೇ ಲೋಕವು ಬೆಳಗುವುದು. ಸೂರ್ಯನಾರಾಯಣನೇ ಲೋಕೋಪಕಾರಿ ಎಂದು ತಿಳಿಯಬೇಕು.

ಸೂರ್ಯದೇವನ ಸ್ಥಿತಿಗತಿಗಳು

## ಸೂರ್ಯನ ರಥವನ್ನು ಅಲಂಕರಿಸಿರುವ ಸಪ್ತಗಣಗಳ ಹೆಸರುಗಳು.

| ಮಾಸದ ಹೆಸರು | ಸೂರ್ಯನ ದೇವತಾ ನಾಮಗಳು | ಸ್ತೋತ್ರಮಾಡುವ ಋಷಿಗಳೂ ಮತ್ತು ಬ್ರಹ್ಮರೂ | ಗಾನಮಾಡುವ ಗಂಧರ್ವರುಗಳು | ನಟಿಸುವ ಅಪ್ಸರ ಸ್ತ್ರೀಯರು | ಯಕ್ಷರು | ಸರ್ಪಗಳು | ರಾಕ್ಷಸರು |
|---|---|---|---|---|---|---|---|
| ಚೈತ್ರ | ಧಾತ | ಪುಲಸ್ತ್ಯ ಬ್ರಹ್ಮ | ಮಧು | ಕೃತಸ್ಥಲಾ | ರಥಕೃತ್ | ವಾಸುಕಿ | ಹೇತಿ |
| ವೈಶಾಖ | ಅರ್ಯಮಾ | ಪುಲಹಬ್ರಹ್ಮ ನಾರದರು | ನಾರದ | ಪುಂಜಿಕಸ್ಥಲಾ | ರಥೌಜಾ | ಕಚ್ಛನೀರ | ಪ್ರಹೇತಿ |
| ಜ್ಯೇಷ್ಠ | ಮಿತ್ರ | ಅತ್ರಿ | ಹಂಕ | ಮೇನಕೆ | ರಥಸ್ವನ | ತಕ್ಷಕ | ಪೌರುಷೇಯ |
| ಆಷಾಢ | ವರುಣ | ವಸಿಷ್ಠ | ಹುಹು | ಸಹಜನ್ಯಾ | ಚಿತ್ರ | ಮೊಸೂ | ರಥ |
| ಶ್ರಾವಣ | ಇಂದ್ರ | ಅಂಗೀರಸ | ನಭ | ಪ್ರಮ್ಲೋಚಾ | ವಿಶ್ವಾವಸು | ಶ್ರೋತಾ | ಎಲಾಪುತ್ರ |
| ಭಾದ್ರಪದ | ವಿವಸ್ವಾನ್ | ಭೃಗು | ಉಗ್ರಸೇನ | ಅನುಮ್ಲೋಚಾ | ಅಪೂರ್ಣ್ | ಶಂಖಪಾಲ | ವ್ಯಾಘ್ರ |
| ಆಶ್ವೀಜ | ಪೂಷಾ | ಗೌತಮ | ವಸುರುಚಿ | ಘೃತಾಚೀ | ಸುಷೇಣ | ಧನಂಜಯ | ವಾತ |
| ಕಾರ್ತೀಕ | ಪರ್ಜನ್ಯ | ಭರದ್ವಾಜ | ವಿಶ್ವಾವಸು | ವಿಶ್ವಾಚೀ | ಸೇನಜಿತ್ | ಐರಾವತ | ಚಾಪ |
| ಮಾರ್ಗಶಿರ | ಅಂಶ | ಕಾಶ್ಯಪ | ಚಿತ್ರಸೇನ | ಊರ್ವಶೀ | ತಾರ್ಕ್ಷ್ಯ | ಮಹಾಪದ್ಮ | ವಿದ್ಯುತ್ |
| ಪುಷ್ಯ | ಭಗ | ಕ್ರತು | ಊರ್ಣಾಯು | ಪೂರ್ವಚಿತ್ತಿ | ಅರಿಷ್ಟನೇಮಿ | ಕರ್ಕೋಟಕ | ಸ್ಫೂರ್ಜ |
| ಮಾಘ | ತ್ವಷ್ಟಾ | ಜಮದಗ್ನಿ | ಧೃತರಾಷ್ಟ್ರ | ತಿಲೋತ್ತಮೆ | ಋತಜಿತ್ | ಕಂಬಳ | ಬ್ರಹ್ಮೋಪೇತ |
| ಫಾಲ್ಗುಣ | ವಿಷ್ಣು | ವಿಶ್ವಾಮಿತ್ರ | ಸೂರ್ಯವರ್ಚಾ | ರಂಭಾ | ಸತ್ಯಜಿತ್ | ಅಶ್ವತರ | ಯಜ್ಞೋಪೇತ |

# VI ದೇವರ್ಷಿಪಿತೃತರ್ಪಣ ಕ್ರಮ

ಸೂಚನೆ—ಕೈಬೆರಳುಗಳತುದಿಯಿಂದ ಒಂದಾವರ್ತಿ ದೇವತೆಗಳಿಗೂ, ಕೈಗಳನ್ನು ಮೇಲಕ್ಕೆತ್ತಿ ಅಂಗುಷ್ಠ ಮತ್ತು ಕಿರಿಬೆರಳುಗಳ ಮೂಲದ ಮಧ್ಯದಿಂದ ಎರಡುಮುಂಗೈಗಳನಡುವೆ ಹರಿಯುವಂತೆ ಒಂದಾವರ್ತಿ ಬ್ರಹ್ಮನಿಗೂ, ಕಿರಿಬೆರಳಿನ ಮೂಲದಿಂದ ಅಂಗೈಗಳನ್ನು ಒಳಕ್ಕೆ ಬಗ್ಗಿಸಿ ಎರಡಾವರ್ತಿ ಋಷಿಗಳಿಗೂ, ತರ್ಜನೀ ಮತ್ತು ಅಂಗುಷ್ಠಗಳ ನಡುವೆ ಬಲಗೈ ಅಂಗುಷ್ಠದಮೇಲೆ ಹರಿಯುವಂತೆ ಮೂರಾವರ್ತಿ ಪಿತೃಗಳಿಗೂ, ತರ್ಪಣವನ್ನು ಕೊಡಬೇಕು. ಈ ತರ್ಪಣಗಳನ್ನು ಗೌಣಸ್ನಾನ ಅಥವಾ ನೈಮಿತ್ತಿಕ ಕರ್ಮಗಳಲ್ಲಿ ಮಾಡಬಾರದು. ಕೆಲವರು ಸ್ನಾನವಾದ ಪ್ರಾತಸ್ಸಂಧ್ಯಾವಂದನ ಮಾಡುವುದಕ್ಕೆಮುಂಚೆಯೇ ಈ ಕರ್ಮವನ್ನು ಮಾಡುವುದುಂಟು. ಮತ್ತು "ಓಂ ಶುಕ್ಲಾಂಬರಧರಂ ವಿಷ್ಣುಂ" ಇತ್ಯಾದಿ ಸಂಕಲ್ಪವನ್ನು ಮಾಡುವುದಕ್ಕೆ ಮುಂಚಿತವಾಗಿ ವಡಕಲೆ ಮತ್ತು ತೆಂಗಲೆ ಸಂಪ್ರದಾಯದ ಶ್ರೀವೈಷ್ಣವರುಗಳು ಈ ಕೆಳಗೆ ಹೇಳುವ ತನಿಯನ್‌ಗಳನ್ನು ಪ್ರತಿಒಂದು ಕರ್ಮದಲ್ಲಿಯೂ ಅನುಸಂಧಿಸುವುದುಂಟು.

ವಡಕಲೆಯವರು—"ಶ್ರೀಮಾನ್ ವೇಂಕಟನಾಥಾರ್ಯಃ ಕವಿತಾರ್ಕಿಕಕೇಸರೀ । ವೇದಾಂತಾಚಾರ್ಯವರ್ಯೋ ಮೇ ಸನ್ನಿಧತ್ತಾಂ ಸದಾ ಹೃದಿ ॥ ಗುರುಭ್ಯಸ್ತದ್ಗುರುಭ್ಯಶ್ಚ ನಮೋವಾಕಮಧೀಮಹೇ । ವೃಣೀಮಹೇ ಚ ತತ್ರಾದ್ಯೌ ದಂಪತೀ ಜಗತಾಂ ಪತೀ ॥ ೨ ॥ ಸ್ವಶೇಷಭೂತೇನ ಮಯಾ ಸ್ವೀಯೈಸ್ಸರ್ವಪರಿಚ್ಛದೈಃ । ವಿಧಾತುಂ ಪ್ರೀತಮಾತ್ಮಾನಂ ದೇವಃ ಪ್ರಕ್ರಮತೇ ಸ್ವಯಮ್ "॥ ೩ ॥

ತೆಂಗಲೆಯವರು—"ಶ್ರೀಮಾನ್ ಶಿಷ್ಟಪರಿತ್ರಾತಾ ವೇದಾಂತದ್ವಯಕೇಸರೀ । ಸೌಮ್ಯಜಾಮಾತೃಯೋಗೀ ಮೇ ಸನ್ನಿಧತ್ತಾಂ ಸದಾ ಹೃದಿ ॥" ಈ ಶ್ಲೋಕವನ್ನು ಕೆಲವರು ಉಚ್ಚರಿಸುತ್ತಾರೆ.

1 ಕಾಲುಗಳನ್ನು ತೊಳೆದುಕೊಂಡು ಎರಡು ಆಚಮನಗಳನ್ನುಮಾಡಿ ದರ್ಭಾಸನದಮೇಲೆ ಕುಳಿತು ದರ್ಭಪವಿತ್ರವನ್ನು ಧರಿಸಿ ಮೂರುಪ್ರಾಣಾಯಾಮವನ್ನು ಮಾಡಬೇಕು.

2 ಸಂಕಲ್ಪ—ಶ್ರೀಭಗವದಾಜ್ಞಯಾ ಭಗವತ್ಕೈಂಕರ್ಯರೂಪಂ (ಶ್ರೀಮನ್ನಾರಾಯಣ ಪ್ರೀತ್ಯರ್ಥಂ) ದೇವರ್ಷಿ ಪಿತೃತರ್ಪಣಂ ಕರಿಷ್ಯೇ ಎಂದು ಸಂಕಲ್ಪಿಸಿ;

3 ಶುಕ್ಲಾಂಬರಾಸನದಲ್ಲಿ ಕುಳಿತು ಭಗವಂತನ ಶರೀರಗಳಾದ ದೇವತೆಗಳನ್ನೂ, ಋಷಿಗಳನ್ನೂ ಮತ್ತು ಪಿತೃಗಳನ್ನೂ ಧ್ಯಾನಿಸಿ;

(a) ದೇವತೆಗಳಿಗೆ

"ಓಂ ಬ್ರಹ್ಮಾದಯೋ ಯೇ ದೇವಾ ಸ್ತಾನ್ ದೇವಾ(ಗ್)ಂಸ್ತರ್ಪಯಾಮಿ

ಓಂ ಸರ್ವಾನ್ ದೇವಾ(ಗ್)ಂಸ್ತರ್ಪಯಾಮಿ ।
ಓಂ ಸರ್ವದೇವಗಣಾ(ಗ್)ಂಸ್ತರ್ಪಯಾಮಿ ।
ಓಂ ಸರ್ವದೇವಪತ್ನೀಸ್ತರ್ಪಯಾಮಿ ।
ಓಂ ಸರ್ವದೇವಗಣಪತ್ನೀಸ್ತರ್ಪಯಾಮಿ ॥"

ಎಂದು ಒಂದೊಂದು ಮಂತ್ರಕ್ಕೂ ಒಂದಾವರ್ತಿ ಮಾತ್ರ ಮೇಲೆ ಹೇಳಿದಂತೆ × ಉಪವೀತಿಯಲ್ಲಿ ತೀರ್ಥವನ್ನು ಬಿಡಬೇಕು.

(b) ಋಷಿಗಳಿಗೆ

"ಓಂ ಕೃಷ್ಣದ್ವೈಪಾಯನಾದಯೋ ಯೇ ಋಷಯಃ ತಾನ್ ಋಷೀ(ಗ್)ಂಸ್ತರ್ಪಯಾಮಿ ।

ಓಂ ಸರ್ವಾನ್ ಋಷೀ(ಗ್)ಂಸ್ತರ್ಪಯಾಮಿ ।
ಓಂ ಸರ್ವಋಷಿಗಣಾ(ಗ್)ಂಸ್ತರ್ಪಯಾಮಿ ।
ಓಂ ಸರ್ವಋಷಿಪತ್ನೀಸ್ತರ್ಪಯಾಮಿ ।
ಓಂ ಸರ್ವಋಷಿಗಣಪತ್ನೀಸ್ತರ್ಪಯಾಮಿ" ॥

ಎಂದು ಪ್ರತಿ ಒಂದು ಮಂತ್ರವನ್ನು ಉಚ್ಚರಿಸಿ ಯಜ್ಞೋಪವೀತವನ್ನು ನಿವೀತಿಯಲ್ಲಿ ಧರಿಸಿ ಉತ್ತರಾಭಿಮುಖನಾಗಿ ಎರಡಾವರ್ತಿ ತೀರ್ಥವನ್ನು ಮೇಲೆ ಹೇಳಿದಂತೆ ಬಿಡಬೇಕು.

---

× ಉಪವೀತಿ—ಯಜ್ಞೋಪವೀತವನ್ನು ಬಲದ ಕೈ ಕೆಳಗೆ ಇರುವಂತೆ ಎಡಭುಜದ ಮೇಲೆ ಧರಿಸುವುದು.

ನಿವೀತಿ—ಯಜ್ಞೋಪವೀತವನ್ನು ಮಾಲೆಯಂತೆ ಕತ್ತಿಗೆ ಹಾಕಿಕೊಂಡು ಅದನ್ನು ಹೆಬ್ಬೆರಳುಗಳಿಂದ ಹಿಡಿದು ತರ್ಪಣವನ್ನು ಕೊಡುವುದು

ಪ್ರಾಚೀನಾವೀತಿ—ಯಜ್ಞೋಪವೀತವನ್ನು ಎಡಗೈ ಕೆಳಗೆ ಇರುವಂತೆ ಬಲಭುಜದ ಮೇಲೆ ಧರಿಸುವುದು.

## • (c) ಪಿತೃಗಳಿಗೆ

"ಓಂ ಸೋಮಃ ಪಿತೃಮಾನ್ ಯಮೋಂಗಿರಸ್ವಾನ್ ಅಗ್ನಿಕವ್ಯವಾಹನಾದಯೋ ಯೇ ಪಿತರಃ ತಾನ್ ಪಿತೄ(ಗ್ʼ)ಂಸ್ತರ್ಪಯಾಮಿ ।

ಓಂ ಸರ್ವಾನ್ ಪಿತೄ(ಗ್ʼ)ಂಸ್ತರ್ಪಯಾಮಿ ।
ಓಂ ಸರ್ವ ಪಿತೃಗಣಾ(ಗ್ʼ)ಂಸ್ತರ್ಪಯಾಮಿ ।
ಓಂ ಸರ್ವ ಪಿತೃಪತ್ನೀಸ್ತರ್ಪಯಾಮಿ ।
ಓಂ ಸರ್ವ ಪಿತೃಗಣಪತ್ನೀಸ್ತರ್ಪಯಾಮಿ ।

ಎಂದು ಪ್ರಾಚೀನಾವೀತಿಯಲ್ಲಿ ದಕ್ಷಿಣಾಭಿಮುಖನಾಗಿ ಮೂರಾವರ್ತಿ ಮೇಲೆ ಹೇಳಿದಂತೆ ತೀರ್ಥವನ್ನು ಬಿಡಬೇಕು.

4 "ಊರ್ಜಂವಹಂತೀರಮೃತಂ ಘೃತಂ ಪಯಃ ಕೀಲಾಲಂ ಪರಿಸ್ರುತಂ, ಸ್ವಧಾಸ್ಥ ತರ್ಪಯತ ಮೇ ಪಿತೄನ್" ಎಂದು ತೀರ್ಥಾಂಜಲಿಯಿಂದ ಮೂರು ಬಾರಿ ಪ್ರದಕ್ಷಿಣವಾಡಿ ದಕ್ಷಿಣ ಪಶ್ಚಿಮ [ತನ್ನ ಬಲಗಡೆ] ತೀರವನ್ನು "ತೃಪ್ಯತ, ತೃಪ್ಯತ, ತೃಪ್ಯತ," ಎಂದು ಉಚ್ಚರಿಸಿ ಜಲಾಂಜಲಿಯನ್ನು ಕೆಳಗೆ ಹಾಕಿ ಆ ಸ್ಥಳವನ್ನು ಚೆನ್ನಾಗಿ ಶುದ್ಧಿಮಾಡಿ ಕೈಯನ್ನು ತೊಳೆದುಕೊಂಡನಂತರ ಉಪವೀತಿಯಲ್ಲಿ ದರ್ಭ ಪವಿತ್ರವನ್ನು ತೆಗೆದುಹಾಕಿ

5 ಎರಡು ಆಚಮನಗಳನ್ನು ಮಾಡಿ* ದೇವರು ಮತ್ತು ಗುರುಹಿರಿಯರುಗಳಿಗೆ ಸಾಷ್ಟಾಂಗವಾಗಿ ನಮಸ್ಕಾರಮಾಡಬೇಕು.

॥ ಇತಿ ದೇವರ್ಷಿ ಪಿತೃ ತರ್ಪಣ ಸಂಪೂರ್ಣ ॥

---

* ದೇವರು ಮತ್ತು ಅಪ್ಪನವರ ಫೋಟೋಗಳ ಮುಂದೆ ನಮಸ್ಕಾರಮಾಡುವಾಗ "ನಮಸ್ತೇ ಭಗವತೇ ತ್ರಿಮೂರ್ತಿನಾರಾಯಣಾಯ ನಮಃ" ಎಂದು ಉಚ್ಚರಿಸಿ ಸಾಷ್ಟಾಂಗವಾಗಿ ನಮಸ್ಕಾರಮಾಡಬೇಕು. ಶ್ರೀರಾಮಾನುಜಾಚಾರ್ಯರಿಗೆ ನಮಸ್ಕಾರ ಮಾಡುವಾಗ "ನಮಸ್ತೇ ಭಗವತೇ ತ್ರಿಮೂರ್ತಿ ರಾಮಾನುಜಾಯ ನಮಃ" ಎಂದು ಉಚ್ಚರಿಸಬೇಕು. ಮತ್ತು ಗುರುಹಿರಿಯರುಗಳಿಗೆ ನಮಸ್ಕರಿಸುವಾಗ "ಅಭಿವಾದಯೇ ನಾಮಧೇಯ ಶರ್ಮಾ" ಎಂದು ಉಚ್ಚರಿಸಬೇಕು.

ಗೃಹಸ್ಥಾಶ್ರಮಿಗಳು ನಿತ್ಯವು ಆಚರಿಸಬೇಕಾದ

# VII ಔಪಾಸನ ಕ್ರಮ

1. ಪಾದಗಳನ್ನು ತೊಳೆದುಕೊಂಡು ಎರಡು ಆಚಮನಗಳನ್ನು ಮಾಡಬೇಕು.

## ಅಗ್ನಿಪ್ರತಿಷ್ಠಾಪನೆ

2. A **ಆತ್ಮಸಮಾರೋಪಣ** ಮಾಡಿದ್ದವರು ಹೇಳುವ ಮಂತ್ರ— **"ಉಪಾವರೋಹಜಾತವೇದಃ ಪುನಸ್ತ್ವಂದೇವೇಭ್ಯೋಹವ್ಯಂವಹನಃ ಪ್ರಜಾನನ್, ಆಯುಃ ಪ್ರಜಾಗ್ಂರಯಿಮಸ್ಮಾಸುಧೇಹಿ, ಅಜಸ್ರೋದೀದಿಹಿನೋದುರೋಣೇ"**—ಎಂದು ಹೇಳಿ ಹಿಂದಿನ ರಾತ್ರಿಯಲ್ಲಿ ಹೃದಯದಲ್ಲಿ ಆವಾಹನೆಮಾಡಿದ್ದ ಅಗ್ನಿಯನ್ನು ಹೊರಗೆ ತೆಗೆದು ಲೌಕಿಕಾಗ್ನಿಯಲ್ಲಿ ಪ್ರತಿಷ್ಠೆಮಾಡಿದಂತೆ ಭಾವಿಸಬೇಕು.

ಆತ್ಮ **ಸಮಾರೋಪಣವೆಂದರೆ**—ಧಾರೆಯಾಗ್ನಿ ಇಟ್ಟು ಪ್ರತಿ ದಿನವೂ ಔಪಾಸನ ಮಾಡುವವರು; ತಾವು ಹಿಂದಿನ ದಿವಸ ಮಾಡಿದ ಅಗ್ನಿಕಾರ್ಯವು ಮುಗಿದನಂತರ ಆ ಅಗ್ನಿಯನ್ನು ತಮ್ಮ ಶರೀರದಲ್ಲಿ ಆವಾಹನ ಮಾಡಿಕೊಂಡಿರುತ್ತಾರೆ. ಮಾರನೇ ದಿವಸ ತಾವು ಅಗ್ನಿಯ ಮೂಲಕ ಮಾಡುವ ಕರ್ಮಕಾಲದಲ್ಲಿ ಹಿಂದೆ ತಮ್ಮ ಶರೀರದಲ್ಲಿ ಆವಾಹಿಸಿಕೊಂಡಿದ್ದ ಅಗ್ನಿಯನ್ನು ಮೇಲಿನ ಕ್ರಮದಿಂದ ಮತ್ತೆ ಪ್ರತ್ಯಕ್ಷವಾಗಿ ವೇದಿಕೆಯಲ್ಲಿರುವ ಅಗ್ನಿಯೊಂದಿಗೆ ಸೇರಿಸುವುದು. ಮಂತ್ರ ಪ್ರಾರಂಭ ಮಾಡುವಾಗ ತನ್ನ ಮೊಣಕಾಲುಗಳ ಮೇಲೆ ಕೈಗಳನ್ನು ಇಟ್ಟು, ಕ್ರಮವಾಗಿ ಮಂತ್ರ ಹೇಳಿ ಪೂರ್ತೈಸುವವರೆಗೆ ಬಾಯಿನವರೆಗೆ ಕೈಯನ್ನು ತಂದು "ಹಾ" ಎಂದು ಬಾಯಿಬಿಟ್ಟು ಅಲ್ಲಿಂದ ಅಗ್ನಿಯು ಹೊರಕ್ಕೆ ಬಂದುದಾಗಿ ಭಾವಿಸಿ ಕೈಯಿಂದ ಆತುಕೊಂಡು ವೇದಿಕಾಗ್ನಿಯಲ್ಲಿ ಬಿಡುವುದು.

B **ಸಮಿತ್ಸಮಾರೋಪಣವೆಂದರೆ**—ಕೆಲವರು A ಗೆ ಬದಲಾಗಿ ಸಮಿತ್ತಿನಲ್ಲಿ ಆವಾಹನೆ ಮಾಡಿ ಇಟ್ಟುಕೊಂಡು ಆ ಸಮಿತ್ತನ್ನು **"ಆ ಜುಹ್ವಾನಸ್ಸುಪ್ರತೀಕಃ"** ಎಂಬ ಮಂತ್ರವನ್ನು ಹೇಳಿ ಕರ್ಮಕಾಲದಲ್ಲಿ ವೇದಿಕೆಯಲ್ಲಿರುವ ಅಗ್ನಿಯಲ್ಲಿ ಸೇರಿಸುವರು. ಯಾರು ಯಾವರೀತಿಯಾಗಿ ಆವಾಹನೆ ಮಾಡಿಕೊಂಡಿರುತ್ತಾರೋ ಅವರು ಆ ರೀತಿಯಲ್ಲೇ ಅಗ್ನಿಯನ್ನು ಸಾಧಿಸಬೇಕು.

# ಔಪಾಸನ ಕ್ರಮ

ಕೆಲವರು ರಾತ್ರಿಯಲ್ಲಿ ಔಪಾಸನವಮಾಡದೇಇರುವಲ್ಲಿ ಮಾರನೇ ದಿವಸ ಅದನ್ನು ಮೊದಲುಮಾಡಿ ಅನಂತರ ಪ್ರಾತರೌಪಾಸನವನ್ನು ಮಾಡುವುದುಂಟು.

ಸಮಿತ್ಸಮಾರೋಪಣೆ ಮಾಡಿದವರು ಹೇಳುವ ಮನ್ತ್ರ—

"ಆಜುಹ್ವಾನಸ್ಸುಪ್ರತೀಕಃ ಪುರಸ್ತಾದಗ್ನೇಸ್ವಾಂ ಯೋನಿಮಾಸೀದ ಸಾಧ್ಯಾ ಅಸ್ಮಿನ್ತ್ಸಧಸ್ಥೇ ಅಧ್ಯುತ್ತರಸ್ಮಿನ್ವಿಶ್ವೇದೇವಾ ಯಜಮಾನಶ್ಚ ಸೀದತ. ಉದ್ಬುಧ್ಯ "ಸ್ವಾಗ್ನೇ ಪ್ರತಿಜಾಗೃಹ್ಯೇನಮಿಷ್ಟಾಪೂರ್ತೇ ಸಗ್ಂ ಸೃಜೇಥಾಮಯಂಚ, ಪುನಃ ಕೃಣ್ವಗ್ಂ ಸ್ತ್ವಾಪಿತರಂಯುವಾನಮನ್ವಾತಾಗ್ಂ ಸೀತ್ತ್ವಯಿತಂತುಮೇತಮ್" ಎಂದು ಹಿಂದಿನ ರಾತ್ರಿ ಸಮಿತ್ಸಮಾರೋಪಣೆಮಾಡಿದ್ದ ಸಮಿತ್ತನ್ನು ಲೌಕಿಕಾಗ್ನಿಯಲ್ಲಿ ಸಮರ್ಪಿಸುವುದು.

೩. ಪವಿತ್ರವನ್ನು ಧರಿಸಿ ಮೂರು ಪ್ರಾಣಾಯಾಮವನ್ನು ಮಾಡಬೇಕು.

4. ಸಂಕಲ್ಪ—ಶ್ರೀಭಗವದಾಜ್ಞಯಾ ಭಗವತ್ಕೈಂಕರ್ಯರೂಪಂ (ಶ್ರೀಮನ್ನಾರಾಯಣಪ್ರೀತ್ಯರ್ಥಂ) ಪ್ರಾತರೌಪಾಸನ [ಸಂಜೆಯಲ್ಲಿ "ಸಾಯಮೌಪಾಸನ" ವೆಂದು ಹೇಳಬೇಕು] ಹೋಮಂ ತಂಡುಲೈರ್ಹೋಷ್ಯೇ(ಕ್ಷ್ಯೇ) ಷ್ಯಾಮಿ ಎಂದು ಸಂಕಲ್ಪಿಸಿ;

5. ಅಗ್ನಿಪ್ರತಿಷ್ಠೆ ಮುಂತಾದವುಗಳಿಗೆ ಬೇಕಾದ ತೀರ್ಥ, ಅಕ್ಷತೆ, ದರ್ಭೆ ಮುಂತಾದವುಗಳನ್ನು ಸಮೀಪದಲ್ಲಿರಿಸಿಕೊಂಡು ಅಗ್ನಿಪ್ರತಿಷ್ಠೆ ಮಾಡುವುದಕ್ಕೆ ಹುತ್ತದ ಮಣ್ಣನ್ನು ತಂದು ಹರವಿ ಅದರಮೇಲೆ ಎರಡು ದರ್ಭೆಗಳಿಂದ ಪ್ರಾಚೀಃ ಪೂರ್ವಮುದಕ್ಸಗ್ಂಸ್ಥಂ ದಕ್ಷಿಣಾರಂಭಮಾಲಿಖೇತ್, ಅಥೋದೀಚೀಃ ಪುರಃಸಗ್ಗ್ಂಸ್ಥಂ ಪಶ್ಚಿಮಾರಂಭಮಾಲಿಖೇತ್ ಎಂದು ಬಲಗಡೆಯಿಂದ ಮೇಲಕ್ಕೆ [ಪಶ್ಚಿಮದಿಂದ ಪೂರ್ವಕ್ಕೆ] ಮೂರು ಗೆರೆಗಳನ್ನೂ ಮತ್ತು ದಕ್ಷಿಣದಿಂದ ಉತ್ತರಕ್ಕೆ ಮೂರು ಗೆರೆಗಳನ್ನೂ ಎಳೆದು ಅದನ್ನು ಪ್ರೋಕ್ಷಿಸಿ ಆ ದರ್ಭೆಯನ್ನು ನೈಋತ್ಯ ದಿಕ್ಕಿನಕಡೆ ಹಾಕಿ ಕೈಯನ್ನು ಶುದ್ಧಿಮಾಡಿಕೊಳ್ಳಬೇಕು. ಭೂರ್ಭುವಸ್ಸುವರೋಂ ಎಂದು ಉಚ್ಚರಿಸಿ ಅಗ್ನಿಯನ್ನು ತಟ್ಟೆಯಲ್ಲಿ ತಂದು ಆ ಮಣ್ಣಿನಮೇಲೆ ಪ್ರತಿಷ್ಠಿಸುವುದು. ಅನಂತರ ಆ ತಟ್ಟೆಗೆ ಅಕ್ಷತೆ ಮತ್ತು ಸ್ವಲ್ಪ ತೀರ್ಥವನ್ನು ಹಾಕಬೇಕು.

## ನಿತ್ಯಾಹ್ನಿಕ ಕ್ರಮ

೬. ಅನಂತರ ಕೈಮುಗಿಯುತ್ತಾ "**ಚತ್ವಾರಿಶೃಙ್ಗಾತ್ರಯೋ ಅಸ್ಯ ಪಾದಾದ್ವೇಶೀರ್ಷೇ ಸಪ್ತಹಸ್ತಾಸೋ ಅಸ್ಯ, ತ್ರಿಧಾಬದ್ಧೋ ವೃಷಭೋರೋರವೀತಿ ಮಹೋದೇವೋ ಮರ್ತ್ಯಾಗ್ಂ ಆವಿವೇಶ. ಏಷಹಿದೇವಃ ಪ್ರದಿಶೋನುಸರ್ವಾಃ ಪೂರ್ವೋಹಿಜಾತಃ ಸಉಗರ್ಭೇ ಅನ್ತಃ, ಸವಿಜಾಯಮಾನಸ್ಸ ಜನಿಷ್ಯಮಾಣಃ ಪ್ರತ್ಯಙ್ಮುಖಾಸ್ತಿಷ್ಠತಿ ವಿಶ್ವತೋ ಮುಖಃ, ಪ್ರಾಙ್ಮುಖೋದೇವ ಅಗ್ನೇಭಿಮುಖೋಭವ**" ಎಂದು ಅಗ್ನಿಯ ಪೂರ್ವ ದಿಕ್ಕಿನಕಡೆ ಸ್ವಲ್ಪ ಅಕ್ಷತೆ ಮತ್ತು ತೀರ್ಥವನ್ನು ಹಾಕಿ ಪ್ರಾರ್ಥಿಸಿ;

೭. **ಓಂ ಅಗ್ನಯೇ ನಮಃ, ಓಂ ಜಾತವೇದಸೇ ನಮಃ, ಓಂ ಸಹೋಜಸೇ ನಮಃ, ಓಂ ಅಜಿರಾಪ್ರಭವೇ ನಮಃ, ಓಂ ವೈಶ್ವಾನರಾಯ ನಮಃ, ಓಂ ನರ್ಯಾಪಸೇ ನಮಃ, ಓಂ ಪಙ್ಕ್ತಿರಾಧಸೇ ನಮಃ, ಓಂ ವಿಸರ್ಪಿಣೇ ನಮಃ,** ಎಂದು ಅಗ್ನಿಯ ಎಂಟು ದಿಕ್ಕುಗಳಿಗೂ ಅಕ್ಷತೆಯನ್ನು ಪ್ರದಕ್ಷಿಣೆಯಾಗಿ ಹಾಕಿ ಪೂಜಿಸಬೇಕು. ಅನಂತರ **ಓಂ ಯಜ್ಞಪುರುಷಾಯ ನಮಃ** ಎಂದು ಅಕ್ಷತೆಯಿಂದ ಮಧ್ಯದಲ್ಲಿ ಅಗ್ನಿದೇವರನ್ನು ಪೂಜಿಸಬೇಕು; ಅನಂತರ ಸರ್ವೇಭ್ಯ ವೈಷ್ಣ **ವೇಭ್ಯೋನಮಃ**— ಎಂದು ಅಲ್ಲಿ ಕುಳಿತಿರುವ ವೈಷ್ಣವರುಗಳನ್ನು ಅಕ್ಷತೆಯಿಂದ ಪೂಜಿಸಬೇಕು.

೮. **ಓಂ ಅದಿತೇನುಮನ್ಯಸ್ವ, ಓಂ ಅನುಮತೇನುಮನ್ಯಸ್ವ, ಓಂ ಸರಸ್ವತೇನುಮನ್ಯಸ್ವ, ಓಂ ದೇವಸವಿತಃ ಪ್ರಸುವ** ಎಂದು ಅಗ್ನಿಯ ನಾಲ್ಕು ದಿಕ್ಕುಗಳಿಗೂ * ಪರಿಷೇಚನೆಯನ್ನು ತೀರ್ಥದಿಂದ ಮಾಡಬೇಕು. "**ಹೋಷ್ಯಾಮಿ**" ಎಂದು ಅಗ್ನಿಗೆ ಎರಡು ದರ್ಭೆಗಳನ್ನು ಸಮರ್ಪಣೆಮಾಡಿ, ಪತ್ನಿಯು "ಜುಹುಧಿ" ಎಂದು ಹೇಳಿದನಂತರ ಆಕೆಯ ಕೈಗಳಿಗೆ ಪ್ರೋಕ್ಷಿಸಿ, ನೆನೆಸಿದ ಅಕ್ಕಿ [ತಂಡುಲ] ಯನ್ನು ಕೊಟ್ಟು ಅದನ್ನು ಅರ್ಧಭಾಗ ಮಾಡಿಸಿ ಒಂದು ಭಾಗವನ್ನು ತೆಗೆದುಕೊಂಡು "ಓಂ" "**ಸೂರ್ಯಾಯಸ್ವಾಹಾ**" ಎಂದು ಉಚ್ಚರಿಸಿ ಅಗ್ನಿಯ ಮಧ್ಯಭಾಗದಲ್ಲಿ ಸಮರ್ಪಿಸಿ, **ಸೂರ್ಯಾಯೇದನ್ನಮಮ** ಎಂದು ಹೇಳಿ, **ಅಗ್ನಯೇ ಸ್ವಿಷ್ಟ "ಕೃತೇ ಸ್ವಾಹಾ"** ಎಂದು ಮತ್ತೊಂದು ಭಾಗವನ್ನು ಆಕೆಯಿಂದ ತೆಗೆದು

---

* ಅನ್ನವನ್ನು ಮತ್ತು ಅಗ್ನಿಯನ್ನು ಪರಿಷೇಚನೆ ಮಾಡುವಾಗ ನೀರನ್ನು ಎಡಗಡೆಯಿಂದ ಪ್ರಾರಂಭಿಸಿ ಪ್ರದಕ್ಷಿಣೆಯಾಗಿ ಸುತ್ತಿ ಪ್ರಾರಂಭಿಸಿದ ಜಾಗದವರೆಗೆ ತಂದು, ಬಳಿಕ್ಕೆ ಅದನ್ನು ಹಾಗೆಯೇ ಹಿಂದಕ್ಕೆ ತೆಗೆದುಕೊಳ್ಳಬೇಕು; ಇತ್ಯಾದಿ.

ಈಶಾನ್ಯಭಾಗದ ಮಧ್ಯದಲ್ಲಿ ಸಮರ್ಪಿಸಿ ಅಗ್ನಯೇ ಸ್ವಿಷ್ಟಕೃತೆ ಇದನ್ನ ಮಮ ಎಂದು ಉಚ್ಚರಿಸಬೇಕು. [ರಾತ್ರಿಯಲ್ಲಿ "ಓಂ ಅಗ್ನಯೇ ಸ್ವಾಹಾ" ಎಂದು ಅಗ್ನಿಯ ವಾಯವ್ಯ ಭಾಗದ ಮಧ್ಯದಲ್ಲೂ ಮತ್ತು ಈಶಾನ್ಯ ಭಾಗದ ಮಧ್ಯದಲ್ಲೂ ತಂಡುಲವನ್ನು ಮೇಲೆ ಹೇಳಿದ ಕ್ರಮದಂತೆ ಸಮರ್ಪಿಸಬೇಕು.]

9. ಆಹುತಿ ಸಂಸರ್ಗ ಪ್ರಾಯಶ್ಚಿತ್ತಾರ್ಥಂ ವನಸ್ಪತಿ ಹೋಮಂ ಕರಿಷ್ಯೇ—ಎಂದು ಸಂಕಲ್ಪಿಸಿ ಒಂದು ಸಮಿತ್ತನ್ನು ತೆಗೆದುಕೊಂಡು, "ಯತ್ರವೇತ್ಥ ವನಸ್ಪತೇ ದೇವಾನಾಂ ಗುಹ್ಯಾನಾಮಾನಿ, ತತ್ರ ಹವ್ಯಾನಿಗಾಮಯ (ಸ್ವಾಹಾ)" ಎಂದು ಹೇಳಿ ಅಗ್ನಿಯಲ್ಲಿ ಸಮರ್ಪಿಸಿ ವನಸ್ಪತಯೆ ಇದನ್ನಮಮ—ಎಂದು ಉಚ್ಚರಿಸಬೇಕು.

10. ತೀರ್ಥದಿಂದ ಮೇಲೆ 8 ನೇ ವಿಧಿಯಲ್ಲಿ ಹೇಳಿರುವಂತೆ "ಓಂ ಅದಿತೇನ್ವ ಮಗ್ಗ್ಂಸ್ಥಾಃ" ಎಂದು ಇತ್ಯಾದಿ ಹೇಳಿ ಪರಿಷೇಚನೆಯನ್ನುಮಾಡಿ ಶ್ರೀವಿಷ್ಣವೇಸ್ವಾಹಾ-ಎಂದು ಹೇಳಿ ಒಂದು ಸಮಿತ್ತನ್ನು ಅಥವಾ ಎರಡು ದರ್ಭೆಯನ್ನು ಅಗ್ನಿಯಲ್ಲಿ ಅರ್ಪಿಸಿ ಶ್ರೀವಿಷ್ಣವೇ ಪರಮಾತ್ಮನ ಇದನ್ನಮಮ—ಎಂದು ಉಚ್ಚರಿಸಬೇಕು.

11. ಎದ್ದುನಿಂತು ಕೈಗಳನ್ನು ಮುಗಿಯುತ್ತಾ, "ಅಗ್ನೇನಯಸು ಪಥಾರಾಯೇ ಅಸ್ಮಾನ್ ವಿಶ್ವಾನಿದೇವ ವಯುನಾನಿವಿದ್ವಾನ್ ಯುಯೋಧ್ಯಸ್ಮಜ್ಜುಹುರಾಣ ಮೇನೋ ಭೂಯಿಷ್ಠಾಂತೇನಮ ಉಕ್ತಿಂ ವಿಧೇಮ; ಓಂ ಅಗ್ನಯೇ ನಮಃ । ಮನ್ತ್ರಹೀನಂಕ್ರಿಯಾ ಹೀನಂ ಭಕ್ತಿಹೀನಂ ಹುತಾಶನ । ಯದ್ಧುತಂತುಮಯಾದೇವ ಪರಿಪೂರ್ಣಂ ತದಸ್ತುತೇ । ಪ್ರಾಯಶ್ಚಿತ್ತಾನ್ಯಶೇಷಾಣಿತಪಃ ಕರ್ಮಾತ್ಮಕಾನಿವೈ । ಯಾನಿತೇಷಾಮಶೇಷಾಣಾಂಕೃಷ್ಣಾನು ಸ್ಮರಣಂ ಪರಮ್ ॥"—ಎಂದು ಹೇಳಿ ಸಾಷ್ಟಾಂಗವಾಗಿ ಯಜ್ಞಮೂರ್ತಿಯಾದ ಶ್ರೀಮನ್ನಾರಾಯಣನಿಗೆ ನಮಸ್ಕರಿಸಿ ಅಭಿವಾದನವನ್ನು ಸಲ್ಲಿಸಬೇಕು.

12. ಎರಡು ಆಚಮನಗಳನ್ನೂ, ಒಂದು ಪ್ರಾಣಾಯಾಮವನ್ನೂ ಮಾಡಿ;

13. ಶ್ರೀಭಗವದಾಜ್ಞಯಾ........ರೂಪಂ (ಶ್ರೀಮನ್ನಾರಾಯಣ ಪ್ರೀತ್ಯರ್ಥಂ) ಅತ್ಮಸಮಾರೋಪಣಂ ಕರಿಷ್ಯೇ—ಎಂದು ಸಂಕಲ್ಪಿಸಿ "ಯಾತೇ ಅಗ್ನೇ ಯಜ್ಞಿಯಾತನೂಸ್ತಯೇಹ್ಯಾರೋ

ಪಾತಾನ್ಯಾತ್ಯಾನಂ, ಅಚ್ಯಾವಸೂನಿ ಕೃಣ್ವನ್ನಸ್ಮೇನರ್ಯಾ ಪುರೂಣಿ. ಯಜ್ಞೋಭೂತ್ವಾ ಯಜ್ಞಮಾಸೀದಸ್ವಾಂ ಯೋನಿಂ, ಜಾತವೇದೋ ಭುವ ಆಜಾಯಮಾನಸ್ಸಕ್ಷಯ ಏಹಿ"—ಎಂದು ಹೇಳಿ ಅಗ್ನಿಯಲ್ಲಿ ಬಲದ ಅಂಗೈಯನ್ನು ಮೂರಾವರ್ತಿ ಕಾಯಿಸಿ "ತೇಜೋಽಸಿ ಮಯಿ ದೇಹಿ" ಎಂದು ಹೇಳಿ ಯಥಾಸ್ಥಾನ ಹೃದಯಕಮಲದಲ್ಲಿ ಅಗ್ನಿಯನ್ನು ಧರಿಸಿದಂತೆ ಭಾವಿಸಬೇಕು.

ಶ್ರೀ ಭಗವದಾಜ್ಞಯಾ..................ರೂಪಂ (ಶ್ರೀಮನ್ನಾರಾಯಣ ಪ್ರೀತ್ಯರ್ಥಂ) ಸಮಿತ್ಸಮಾರೋಪಣಂ ಕರಿಷ್ಯೇ ಎಂದು ಸಂಕಲ್ಪಿಸಿ "ಅಯನ್ತೇಯೋನಿರ್ ಋತ್ವಿಯೋಯತೋಜಾತೋ ಅರೋಚಥಾಃ, ತಂಜಾನನ್ನಗ್ನ ಆರೋಹಥಾನೋವರ್ಧಯಾರಯಿಮ್" ಎಂದು ಅಗ್ನಿಯಲ್ಲಿ ಸಮಿತ್ತನ್ನಿಡಬೇಕು.

14. ಎರಡು ಆಚಮನಗಳನ್ನು ಮಾಡಿ "ಸರ್ವಂ ಶ್ರೀಕೃಷ್ಣಾರ್ಪಣಮಸ್ತು" ಎಂದು ಉಚ್ಚರಿಸಿ ಎಲ್ಲಾ ಕರ್ಮಗಳನ್ನೂ ಭಗವಂತನಾದ ಶ್ರೀಮನ್ನಾರಾಯಣನ ಪಾದಾರವಿಂದಗಳಲ್ಲಿ ಫಲಾಪೇಕ್ಷೆಯಿಲ್ಲದಂತೆ ಭಾವಿಸಿ ಅರ್ಪಿಸಬೇಕು. "ಕಾಯೇನವಾಚಾ" ಎಂಬ ಶ್ಲೋಕವನ್ನೂ ಸಹ ಹೇಳಿ ಸಾಷ್ಟಾಂಗವಾಗಿ ನಮಸ್ಕರಿಸಿ ಅಭಿವಾದನವನ್ನು ಸಲ್ಲಿಸಬೇಕು.

**ಸೂಚನೆ**—ಧರ್ಮಪತ್ನಿ ಇಲ್ಲದಿರುವಾಗ ಈ ಕರ್ಮವನ್ನು ಮಾಡುವ ಪತಿಯೇ ತಂಡುಲವನ್ನು ಎರಡು ಭಾಗವನ್ನಾಗಿ ಮಾಡಿಕೊಂಡು ಮೇಲೆ ಹೇಳಿದಂತೆ ಅಗ್ನಿದೇವನಿಗೆ ಆಹುತಿಯನ್ನು ಕೊಡಬಹುದು. ಪತಿಯು ಊರಿನಲ್ಲಿ ಇಲ್ಲದಿರುವಾಗ ಪತ್ನಿಯೇ ಹಿಂದಿನ ದಿವಸದ ಅಗ್ನಿಯಲ್ಲಿ ತಂಡುಲವನ್ನು ಎರಡಾವರ್ತಿ ಆಹುತಿಕೊಟ್ಟು ನಮಸ್ಕರಿಸಬಹುದು. ತಿಳಿಯದಿರುವ ವಿಷಯಗಳನ್ನು ಗುರುಹಿರಿಯರಿಂದ ತಿಳಿದು ಈ ನಿತ್ಯಕರ್ಮವನ್ನು ಮಾಡಬಹುದು.

॥ ಇತಿ ಔಪಾಸನಕ್ರಮಃ ಸಂಪೂರ್ಣಃ ॥

ಬ್ರಹ್ಮಚಾರಿಗಳು ನಿತ್ಯವೂ ಮಾಡಬೇಕಾದ

# VIII ಸಮಿತಾಧಾನ ಕ್ರಮ

1. ಪಾದಗಳನ್ನು ತೊಳೆದುಕೊಂಡು ಎರಡು ಆಚಮನಗಳನ್ನು ಮಾಡಬೇಕು.

## ನಿತ್ಯಾಹ್ನಿಕ ಕ್ರಮ

2. ದರ್ಭಪವಿತ್ರವನ್ನು ಧರಿಸಿ ಕುಳಿತು ಮೂರು ಪ್ರಾಣಾಯಾಮವನ್ನು ಮಾಡಬೇಕು. ಗುರುಗಳ ತನಿಯಗಳನ್ನು ಹೇಳಬಹುದು.

3. ಸಂಕಲ್ಪ — ಓಂ ಶ್ರೀಗೋವಿಂದಗೋವಿಂದೇತ್ಯಾದಿ ಭಗವದಾಜ್ಞಯಾ ಭಗವತ್ಕೈಂಕರ್ಯರೂಪಂ (ಶ್ರೀಮನ್ನಾರಾಯಣ ಪ್ರೀತ್ಯರ್ಥಂ) ಪ್ರಾತಸ್ಸಮಿಂಧ [ಸಾಯಂಕಾಲದಲ್ಲಿ ಸಾಯಂಸಮಿಂಧ ಎಂದು ಹೇಳಬೇಕು]. ಆಧಾಸ್ಯೇ—ಎಂದು ಹೇಳಿ ಸಂಕಲ್ಪಿಸಿ ;

4. ಪರಿತ್ವಾಗ್ನೇ ಪರಿಮೃಜಾಮ್ಯಾಯುಷಾಚ ಧನೇನಚ, ಸುಪ್ರಜಾಃ ಪ್ರಜಯಾ ಭೂಯಾಸಗ್ಂ ಸುವೀರೋವೀರೈಃ ಸುವರ್ಚಾ ವರ್ಚಸಾ ಸುಪೋಷಃ ಪೋಷೈಃ ಸುಗೃಹೋಗೃಹೈಃ ಸುಪತಿಃ ಪತ್ಯಾ ಸುಮೇಧಾ ಮೇಧಯಾ ಸುಬ್ರಹ್ಮಾ ಬ್ರಹ್ಮಚಾರಿಭಿಃ—ಎಂದು ಕೈ ಮುಗಿಯಬೇಕು.

5. ಅನಂತರ ಆ ಅಗ್ನಿವೇದಿಕೆ ಮೇಲೆ ಹಿಂದಿನ ಅಧ್ಯಾಯ 5 ನೇ ವಿಧಿಯಲ್ಲಿ ಹೇಳಿದಂತೆ "ಪ್ರಾಚೀಃ ಪೂರ್ವಮುದಕ್ಸಗ್ಂಸ್ಥಂ" ಇತ್ಯಾದಿ ಹೇಳಿ ಮೂರುಮೂರು ಗೆರೆಗಳನ್ನು ದರ್ಭೆಯಿಂದ ಎಳೆದು ಮುಂದೆ ಹೇಳಿದಂತೆ ಮಾಡಬೇಕು.

6. ದರ್ಭೆಯ ತುದಿಯನ್ನು ಪ್ರಾಗಗ್ರವಾಗಿಯೂ ಉದಗಗ್ರವಾಗಿಯೂ ಅಗ್ನಿಯ ನಾಲ್ಕು ದಿಕ್ಕಿನ ಕಡೆಯಲ್ಲಿ ಪರಿಸ್ತರಣವಾಗಿ ಇಡಬೇಕು.

7. ಅದಿತೇನುಮನ್ಯಸ್ವ— ಇತ್ಯಾದಿ ಹೇಳಿ ನಾಲ್ಕು ದಿಕ್ಕಿಗೂ ಪರಿಷೇಚನೆಯನ್ನು ಮಾತ್ರ ಹಿಂದಿನ ಅಧ್ಯಾಯ 8 ನೇ ವಿಧಿಯಲ್ಲಿ ಹೇಳಿದಂತೆ ಮಾಡಬೇಕು.

8. ಹೋಮ—"ಓಂ ಅಗ್ನಯೇ ಸಮಿಧಮಾಹಾರ್ಷಂ ಬೃಹತೇ ಜಾತವೇದಸೇ, ಯಥಾತ್ವಮಗ್ನೇ ಸಮಿಧಾಸಮಿಧ್ಯಸ ಏವಂ ಮಾಮಾಯುಷಾ ವರ್ಚಸಾ ಸನ್ಯಾಮೇಧಯಾ ಪ್ರಜಯಾ ಪಶುಭಿಃ ಬ್ರಹ್ಮವರ್ಚಸೇನಾನ್ನಾದ್ಯೇನ ಸಮೇಧಯ ಸ್ವಾಹಾ । ಏಧೋಽಸ್ಯೇಧಿಷೀಮಹಿ ಸ್ವಾಹಾ । ಸಮಿದಸಿ ಸಮೇಧಿಷೀಮಹಿ ಸ್ವಾಹಾ । ತೇಜೋಽಸಿ ತೇಜೋಮಯಿಧೇಹಿ ಸ್ವಾಹಾ । ಅಪೋ

ಅದಭ್ಯಂತ್ವಾ ಭಾರಿಷಗ್ಂ ರಸೇನ ಸಮಸೃಕ್ಷ್ಮಹಿ ಪಯಸ್ವಾಗ್ಂ ಅಗ್ನ ಆಗಮಂ ತಂಮಾಸಗ್ಂ ಸೃಜ ವರ್ಚಸಾ ಸ್ವಾಹಾ । ಸಂಮಾಗ್ನೇ ವರ್ಚಸಾಸೃಜ ಪ್ರಜಯಾಚ ಧನೇನ ಚ ಸ್ವಾಹಾ । ವಿದ್ಯುನ್ಮೇ ಅಸ್ಯ ದೇವಾ ಇಂದ್ರೋವಿದ್ಯಾತ್ಸಹಋಷಿಭಿಸ್ಸ್ವಾಹಾ । ಅಗ್ನಯೇ ಬೃಹತೇ ನಾಕಾಯಸ್ವಾಹಾ । ದ್ಯಾವಾ ಪೃಥಿವೀಭ್ಯಾಗ್ಂ ಸ್ವಾಹಾ । ಏಷಾತೇ ಅಗ್ನೇ ಸಮಿತ್ತಯಾ ವರ್ಧಸ್ವಚಾಪ್ಯಾಯಸ್ವಚ ತಯಾಹಂ ವರ್ಧಮಾನೋ ಭೂಯಾಸ ಮಾಪ್ಯಾಯಮಾನಶ್ಚ ಸ್ವಾಹಾ । ಯೋಮಾಗ್ನೇ ಭಾಗಿನಗ್ಂ ಸಂತ ಮಥಾಭಾಗಂ ಚಿಕೀರ್ಷತಿ । ಅಭಾಗಮಗ್ನೇತಂಕುರು ಮಾಮಗ್ನೇ ಭಾಗಿನಂ ಕುರು ಸ್ವಾಹಾ । ಸಮಿಧಮಾಧಾಯಾಗ್ನೇ ಸರ್ವವ್ರತೋ ಭೂಯಾಸಗ್ಂ ಸ್ವಾಹಾ । ಓಂ ಭೂಃ ಸ್ವಾಹಾ । ಓಂ ಭುವಃ ಸ್ವಾಹಾ । ಓಂ ಸುವಃ ಸ್ವಾಹಾ । ಓಂ ಭೂರ್ಭುವಸ್ಸುವಸ್ಸ್ವಾಹಾ ।" ಎಂದು ಮುತ್ತುಗದಗಿಡದ ಸಮಿತ್ತಿನಿಂದ ಪ್ರತಿ ಒಂದು ಸ್ವಾಹಾ ಮಂತ್ರಕ್ಕೂ ಒಂದೊಂದು ಸಮಿತ್ತನ್ನು ತುಪ್ಪದಲ್ಲಿ ಅದ್ದಿ ಹೋಮಮಾಡಬೇಕು.

9. ಅನಂತರ ಮೇಲೆ ಹೇಳಿದಂತೆ ನಾಲ್ಕು ಕಡೆಗೂ ತೀರ್ಥದಿಂದ * "ಅದಿತೇಽನ್ವಮಗ್ಗ್ಂಸ್ಥಾಃ" ಇತ್ಯಾದಿ ಹೇಳಿ ಪರಿಷೇಚನೆಮಾಡಿ "ಶ್ರೀ ವಿಷ್ಣವೇಸ್ವಾಹಾ"—ಎಂದು ಒಂದು ಸಮಿತ್ತನ್ನು ಅಗ್ನಿಯಲ್ಲಿ ಅರ್ಪಿಸಿ ಶ್ರೀವಿಷ್ಣವೇ ಪರಮಾತ್ಮನ ಇದನ್ನಮಮ—ಎಂದು ಉಚ್ಚರಿಸಬೇಕು. ಅನಂತರ ಅಗ್ನಿ "ಅಗ್ನ್ಯುಪಸ್ಥಾನಂ ಕರಿಷ್ಯೇ" ಎಂದು ಉಚ್ಚರಿಸಿ,

10. ಎದ್ದು ನಿಂತುಕೊಂಡು ಕೈಗಳನ್ನು ಮುಗಿಯುತ್ತಾ ಒಂದು ಉದ್ದವಾದ ಮುತ್ತುಗದದಣ್ಣವನ್ನು ಕೈಯಲ್ಲಿ ಧರಿಸಿ "ಯತ್ತೇ ಅಗ್ನೇ ತೇಜಸ್ತೇನಾಹಂ ತೇಜಸ್ವೀ ಭೂಯಾಸಂ, ಯತ್ತೇ ಅಗ್ನೇ ವರ್ಚಸ್ತೇನಾಹಂ ವರ್ಚಸ್ವೀ ಭೂಯಾಸಂ, ಯತ್ತೇ ಅಗ್ನೇ ಹರಸ್ತೇನಾಹಂ ಹರಸ್ವೀ ಭೂಯಾಸಂ, ಮಯಿಮೇಧಾಂ ಮಯಿಪ್ರಜಾಂ ಮಯ್ಯಗ್ನಿಸ್ತೇಜೋದಧಾತು, ಮಯಿಮೇಧಾಂ ಮಯಿಪ್ರಜಾಂ ಮಯೀಂದ್ರ ಇಂದ್ರಿಯಂ ದಧಾತು, ಮಯಿಮೇಧಾಂ ಮಯಿ ಪ್ರಜಾಂ ಮಯಿಸೂರ್ಯೋ ಭ್ರಾಜೋದಧಾತು, × ಅಗ್ನಯೇ ನಮಃ, ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ಹುತಾಶನ ಯದ್ಧುತಂತುಮಯಾದೇವ ಪರಿಪೂರ್ಣಂ ತದಸ್ತುತೇ, ಪ್ರಾಯಶ್ಚಿ

* ಅನುಮತೇಽನ್ವಮಗ್ಗ್ಂಸ್ಥಾಃ, ಸರಸ್ವತೇಽನ್ವಮಗ್ಗ್ಂಸ್ಥಾಃ, ದೇವಸವಿತಃ ಪ್ರಾಸಾವೀಃ.

× ಮಾನಸ್ತೋಕೇ ತನಯೇ ಮಾನ ಆಯುಷಿ ಮಾನೋ ಗೋಷು ಮಾನೋ ಅಶ್ವೇಷು ರೀರಿಷಃ । ವೀರಾನ್ಮಾನೋ ರುದ್ರಭಾಮಿತೋ ವಧೀರ್ಹವಿಷ್ಮಂತೋ ನಮಸಾ ವಿಧೇಮತೇ ಎಂದು ಹೇಳಬೇಕು.

ತ್ತಾನ್ಯಶೇಷಾಣಿ ತಪಃ ಕರ್ಮಾತ್ಮಕಾನಿ ವೈ, ಯಾನಿತೇಷಾಮ ಶೇಷಾಣಾಂ ಕೃಷ್ಣಾನು ಸ್ಮರಣಂ ಪರಂ — ಎಂದು ಹೇಳಿ ಸಾಷ್ಟಾಂಗವಾಗಿ ಅಗ್ನಿದೇವನಿಗೆ ನಮಸ್ಕರಿಸಿ ಅಭಿವಾದನವನ್ನು ಸಲ್ಲಿಸಬೇಕು.

11. ಎರಡು ಆಚಮನಗಳನ್ನು ಮಾಡಬೇಕು.

॥ ಇತಿ ಸಮಿದಾಧಾನಕ್ರಮ ಸಂಪೂರ್ಣಂ ॥

# IX ಬ್ರಹ್ಮಯಜ್ಞಕ್ರಮ

1. ಎರಡು ಆಚಮನಗಳನ್ನು ಮಾಡಿ ದರ್ಭಾಸನದ ಮೇಲೆ ಕುಳಿತು ದರ್ಭಪವಿತ್ರವನ್ನು ಧರಿಸಿ ಮೂರು ಪ್ರಾಣಾಯಾಮವನ್ನು ಮಾಡಬೇಕು. ಮತ್ತು ಗುರುಗಳ ತನಿಯಗಳನ್ನು ಹೇಳಬಹುದು.

2. **ಸಂಕಲ್ಪ — ಶ್ರೀ ಭಗವದಾಜ್ಞಯಾ ಭಗವತ್ಕೈಂಕರ್ಯರೂಪಂ (ಶ್ರೀಮನ್ನಾರಾಯಣ ಪ್ರೀತ್ಯರ್ಥಂ) ಬ್ರಹ್ಮಯಜ್ಞೇನ ಯಕ್ಷ್ಯೇ** ಎಂದು ಸಂಕಲ್ಪಿಸಿ;

3. **ವಿದ್ಯುದಸಿ ವಿದ್ಯ ಮೇ ಪಾಪ್ಮಾನಮೃತಾತ್ ಸತ್ಯಮುಪೈಮಿ ।** ಎಂದು ಬಲಗೈಯಿಂದ ತೀರ್ಥವನ್ನು ಸ್ಪರ್ಶಿಸಿ ಎಡಗೈಯನ್ನು ಒರಸಿ ಮೌನವಾಗಿ ಎರಡಾಚಮನಗಳನ್ನು ಮಾಡಿ ಮೂರು ಪ್ರಾಣಾಯಾಮವನ್ನು ಮಾಡಬೇಕು.

4. ಬಲಮಂಡಿಯಮೇಲೆ ಎಡಗೈಯನ್ನಿಟ್ಟು ಅದರ ಮೇಲೆ ದಕ್ಷಿಣೋತ್ತರವಾಗಿ ಬಲಗೈಯನ್ನಿಟ್ಟು ಓಂ, ಎಂದು ಉಚ್ಚರಿಸಿ **ಓಂ ಭೂಃ, ಓಂ ಭುವಃ, ಓಗ್ಂಸುವಃ** ಎಂದು ವ್ಯಾಹೃತಿ ಮಂತ್ರವನ್ನು ಉಚ್ಚರಿಸಿ **ಓಂ ತತ್ಸವಿತುರ್ವರೇಣ್ಯಂ । ಓಂ ಭರ್ಗೋ ದೇವಸ್ಯ ಧೀಮಹಿ । ಓಂ ಧಿಯೋ ಯೋ ನಃ ಪ್ರಚೋದಯಾತ್** ಎಂದು ಒಂದೊಂದು ಪಾದವಾಗಿಯೂ, ಮತ್ತು ಇವನ್ನೇ ಅರ್ಧಭಾಗವಾಗಿಯೂ ಮತ್ತು ಒಟ್ಟಾಗಿಯೂ ಹೇಳಿ ಶ್ರೌತಪ್ರಕ್ರಿಯೆಯಿಂದ (ವೇದರೀತಿಯಿಂದ) ಅಥವಾ ಒಂದೊಂದು ಪಾದವಾಗಿಯೂ ಅಂದರೆ— **ಓಂ ಭೂಃ, ತತ್ಸವಿತುರ್ವರೇಣ್ಯಂ । ಓಂ ಭುವಃ, ಭರ್ಗೋ ದೇವಸ್ಯ ಧೀಮಹಿ । ಓಗ್ಂಸುವಃ, ಧಿಯೋ ಯೋ ನಃ ಪ್ರಚೋದಯಾತ್ ।** ಎಂದೂ, **ಓಂ ಭೂಃ ತತ್ಸವಿತುರ್ವರೇಣ್ಯಂ ...... ಧೀಮಹಿ । ಓಂ ಭುವಃ ಧಿಯೋ ಯೋ ನ...... ದಯಾತ್** ಎಂದು

ಅರ್ಧಭಾಗವಾಗಿಯೂ; ಓಗ್ಂಸುವಃ ತತ್ಸವಿತು.........ದಯಾತ್ ಎಂದೂ; ಓಂ ಭೂರ್ಭುವಸ್ಸುವಃ ಓಂ, ತತ್ಸವಿತು.........ದಯಾತ್ ಎಂದೂ ಉಚ್ಚರಿಸಿ, ಅನಂತರ; ತಲೆ, ಕಣ್ಣುಗಳು ಮೂಗು, ಕಿವಿಗಳು, ಹೃದಯ ಇವುಗಳಲ್ಲಿ ಕರನ್ಯಾಸಮಾಡಿ ಓಂ, ಓಂ, ಓಂ, ಎಂದು ಶ್ರೋತ್ರಾಚಮನವನ್ನು ಮಾಡಿ;

5. (a) ಹರಿಃ ಓಂ। ಅಗ್ನಿಮೀಳೇ (ಳೇ) ಪುರೋಹಿತಂ। ಯಜ್ಞಸ್ಯ ದೇವ ಮೃತ್ವಿಜಂ। ಹೋತಾರಗ್ಂ ರತ್ನ ಧಾತಮಮ್ ॥ ಹರಿಃ ಓಂ ॥

(b) ಹರಿಃ ಓಂ। ಇಷೇತ್ವೋರ್ಜೇತ್ವಾ। ವಾಯವಸ್ಥೋಪಾಯವಸ್ಥ। ದೇವೋವಸ್ಸವಿತಾ ಪ್ರಾರ್ಪಯತು। ಶ್ರೇಷ್ಠತಮಾಯಕರ್ಮಣೇ ॥ ಹರಿಃ ಓಂ।

(c) ಹರಿಃ ಓಂ। ಅಗ್ನ ಆಯಾಹಿ ವೀತಯೇ। ಗೃಣಾನೋ ಹವ್ಯದಾತಯೇ। ನಿಹೋತಾಸತ್ಸಿ ಬರ್ಹಿಷಿ ॥ ಹರಿಃ ಓಂ ॥

(d) ಹರಿಃ ಓಂ। ಶನ್ನೋದೇವೀರಭಿಷ್ಟಯೇ। ಆಪೋಭವಂತು ಪೀತಯೇ। ಶಂಯೋರಭಿಸ್ರವಂತುನಃ ॥ ಹರಿಃ ಓಂ ॥

ಹೀಗೆ ಕಲಿತ ಕ್ರಮದಿಂದ ತಮ್ಮ ಶಾಖೆಯ ಪ್ರಶ್ನವನ್ನಾಗಲಿ, ಅನುವಾಕವನ್ನಾಗಲಿ ಯಥಾಶಕ್ತಿ ಅಧ್ಯಯನಮಾಡುವುದು; ಅಥವಾ ಪುರುಷಸೂಕ್ತವನ್ನಾಗಲಿ ಆವರ್ತನೆಮಾಡಬಹುದು. ಸ್ವಾಧ್ಯಾಯವನ್ನು ಅಧ್ಯಯನಮಾಡದೇ ಇದ್ದರೆ ಪುರುಷಸೂಕ್ತವನ್ನಾಗಲಿ ಹತ್ತು ಗಾಯತ್ರೀಯನ್ನಾಗಲಿ ಪುನಶ್ಚರಣೆ ಮಾಡಿದನಂತರ, ಓಂ ಭೂರ್ಭುವಸ್ಸುವಃ ಎಂದು ತನ್ನನ್ನೇ ತೀರ್ಥದೊಡನೆ ಒಂದು ಪ್ರದಕ್ಷಿಣೆಮಾಡಿ;

6. "ಓಂ ಸತ್ಯಂತಪಃ ಶ್ರದ್ಧಾಯಾಂಜುಹೋಮಿ। ಓಂ ನಮೋ ಬ್ರಹ್ಮಣೇ। ನಮೋ ಅಸ್ತ್ವಗ್ನಯೇ। ನಮಃ ಪೃಥಿವ್ಯೈ। ನಮ ಓಷಧೀಭ್ಯಃ। ನಮೋವಾಚೇ। ನಮೋವಾಚಸ್ಪತಯೇ। ನಮೋ ವಿಷ್ಣವೇ। ಬೃಹತೇ ಕರೋಮಿ" ॥ ಎಂದು ಒಂದೊಂದು ಪದವಾಗಿಯೂ, ಎರಡೆರಡು ಪದಗಳಾಗಿಯೂ, ನಾಲ್ಕುನಾಲ್ಕು ಪದಗಳಾಗಿಯೂ ಸೇರಿಸಿ ಹೀಗೆ ಮೂರು ಬಾರಿ ಹೇಳಬೇಕು.

7. ವೃಷ್ಟಿರಸಿ ವೃಶ್ಚ ಮೇ। ಪಾಪ್ಮಾನಮೃತಾತ್ಸತ್ಯಮುಪಾಗಾಮ್ ॥ ಎಂದು ಬಲದ ಹಸ್ತದಿಂದ ತೀರ್ಥವನ್ನು ಸ್ಪರ್ಶಿಸಿ, ಎಡಗೈಯನ್ನು ಮೂಲದಿಂದ ಬೆರಳುಗಳ ತುದಿವರೆಗೂ ಉಜ್ಜಿ, ಅನಂತರ ಎರಡು ಆಚಮನಗಳನ್ನು ಮಾಡಬೇಕು.

8. ಸೂಚನೆ—ಬೆಳಗ್ಗೆ ಬ್ರಹ್ಮಯಜ್ಞವನ್ನು ಮಾಡದಿದ್ದರೆ ಮಾಧ್ಯಾಹ್ನಿಕವಾದನಂತರವಾಗಲಿ ದೇವರ್ಷಿ ಪಿತೃತರ್ಪಣಕ್ಕೆ ಮುಂಚೆಯಾಗಲಿ, ವೈಶ್ವದೇವವಾದನಂತರವೇ ಯಾಗಲಿ ಇದನ್ನು ಮಾಡಬಹುದು.

॥ ಇತಿ ಬ್ರಹ್ಮಯಜ್ಞ ಕ್ರಮ ಸಂಪೂರ್ಣ ॥

---

ಎರಡನೇ ಪರಿಚ್ಛೇದ

## ನೈಮಿತ್ತಿಕಾಹ್ನಿಕ ಕ್ರಮ

# 1 ನೂತನ ಯಜ್ಞೋಪವೀತ ಧಾರಣಾ ಕ್ರಮ

1. ಸ್ನಾನಾದಿಕರ್ಮಗಳನ್ನು ಪೂರೈಸಿಕೊಂಡು ಪರಿಶುದ್ಧರಾಗಿ ಎರಡು ಆಚಮನಗಳನ್ನು ಮಾಡಬೇಕು.

2. ದರ್ಭಾಸನದಮೇಲೆ ಕುಳಿತು ದರ್ಭ ಪವಿತ್ರವನ್ನು ಧರಿಸಿ ಮೂರು ಪ್ರಾಣಾಯಾಮವನ್ನು ಮಾಡಿ ಅವರವರುಗಳ ಗುರುಗಳ ತನಿಯನ್‌ಗಳನ್ನು 84 ನೇ ಪುಟದಲ್ಲಿ ವಿವರಿಸಿದಂತೆ ಅನುಸಂಧಿಸಿದನಂತರ,

3. ಸಙ್ಕಲ್ಪ—“(ಓಂ) ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ। ಪ್ರಸನ್ನವದನಂ ಧ್ಯಾಯೇತ್ಸರ್ವವಿಘ್ನೋಪಶಾಂತಯೇ॥ ಯಸ್ಯದ್ವಿರದವಕ್ತ್ರಾದ್ಯಾಃ ಪಾರಿಷದ್ಯಾಃ ಪರಶ್ಶತಂ। ವಿಘ್ನಂ ನಿಘ್ನನ್ತಿ ಸತತಂ ವಿಷ್ವಕ್ಸೇನಂ ತಮಾಶ್ರಯೇ॥ ಓಂ ಶ್ರೀಗೋವಿನ್ದ ಗೋವಿನ್ದ ಗೋವಿನ್ದ। ಅಸ್ಯ ಶ್ರೀ ಭಗವತೋ। ಮಹಾಪುರುಷಸ್ಯ। ಶ್ರೀವಿಷ್ಣೋರಾಜ್ಞಯಾ। ಪ್ರವರ್ಧ [ರ್ತ]

ಮಾನಸ್ಯ । ಅದ್ಯಬ್ರಹ್ಮಣಃ । ದ್ವಿತೀಯಪರಾರ್ಧೇ । ಶ್ರೀಶ್ವೇತವರಾಹ ಕಲ್ಪೇ । ವೈವಸ್ವತಮನ್ವಂತರೇ । ಕಲಿಯುಗೇ । ಪ್ರಥಮಪಾದೇ । ಜಂಬೂದ್ವೀಪೇ । ಭಾರತವರ್ಷೇ । ಭರತಖಂಡೇ । ಶಕಾಬ್ದೇ । ಮೇರೋರ್ದಕ್ಷಿಣೇ ಪಾರ್ಶ್ವೇ । ಅಸ್ಮಿನ್ವರ್ತಮಾನೇ । ವ್ಯಾವಹಾರಿಕೇ । ಪ್ರಭವಾದಿ ಷಷ್ಟಿಸಂವತ್ಸರಾಣಾಂ ಮಧ್ಯೇ......ನಾಮ ಸಂವತ್ಸರೇ......ಅಯನೇ......ಋತೌ......ಮಾಸೇ......ಪಕ್ಷೇ ......ತಿಥೌ ವಾಸರಃ......ವಾಸರಯುಕ್ತಾಯಾಂ...... ನಕ್ಷತ್ರ ಯುಕ್ತಾಯಾಂ ಶುಭನಕ್ಷತ್ರ ಶುಭಯೋಗ ಶುಭಕರಣ ಏವಂಗುಣ ವಿಶೇಷಣ ವಿಶಿಷ್ಟಾಯಾಮಸ್ಯಾಂ ಶುಭತಿಥೌ ಶ್ರೀಭಗವದಾಜ್ಞಯಾ ಭಗವತ್ಕೈಂಕರ್ಯರೂಪಂ (ಶ್ರೀಮನ್ನಾರಾಯಣಪ್ರೀತ್ಯರ್ಥಂ) ಶ್ರೌತ ಸ್ಮಾರ್ತನಿತ್ಯಕರ್ಮಾನುಷ್ಠಾನ ಯೋಗ್ಯತಾಸಿದ್ಧ್ಯರ್ಥಂ ನೂತನ ಯಜ್ಞೋಪವೀತಧಾರಣಂ ಕರಿಷ್ಯೇ ।" ಎಂದು ಹೇಳಿ ಮೂರು ಎಳೆಯಿಂದ ಶಾಸ್ತ್ರೋಕ್ತವಾಗಿಯೂ, ಪರಿಶುದ್ಧವಾಗಿಯೂ ಶ್ರೀವೈಷ್ಣವ ಬ್ರಾಹ್ಮಣರಿಂದ ಮಾಡಲ್ಪಟ್ಟ ಯಜ್ಞೋಪವೀತವನ್ನು ಸಿದ್ಧಪಡಿಸಿ ಕೊಂಡಿರಬೇಕು.

4. ಯಜ್ಞೋಪವೀತಧಾರಣಮಂತ್ರಸ್ಯ ಬ್ರಹ್ಮಾಋಷಿಃ ಅನು (ತ್ರಿ)ಷ್ಟುಪ್ ಛಂದಃ ವೇದಾಸ್ತ್ರಯೋ ದೇವತಾ — ಎಂದು ಕರನ್ಯಾಸಗಳನ್ನು ಮಾಡಿ ಹೊಸ ಯಜ್ಞೋಪವೀತವನ್ನು ಬಲಅಂಗೈಯನ್ನು ಮೇಲ್ಮುಖವಾಗಿಯೂ; ಎಡ ಅಂಗೈಯನ್ನು ಕೆಳಮುಖವಾಗಿಯೂ ಮತ್ತು ಬ್ರಹ್ಮಗಂಟನ್ನು ಮೇಲ್ಮುಖ ಅಂಗೈಯಲ್ಲಿ ದಕ್ಷಿಣಾಭಿಮುಖವಾಗಿ ಬರುವ ರೀತಿಯಲ್ಲಿಯೂ ಯಜ್ಞೋಪವೀತವನ್ನು ಹಿಡಿದುಕೊಂಡು;

5. "ಯಜ್ಞೋಪವೀತಂ । ಪರಮಂ ಪವಿತ್ರಂ । ಪ್ರಜಾಪತೇರ್ಯತ್ಸಹಜಂ । ಪುರಸ್ತಾಽಽದಾಯುಷ್ಯಮಗ್ರ್ಯಂ । ಪ್ರತಿಮುಂಚ ಶುಭ್ರಂ ಯಜ್ಞೋಪವೀತಂ । ಬಲಮಸ್ತು ತೇಜಃ" ॥ ಎಂದು ಮಂತ್ರವನ್ನು ಉಚ್ಚರಿಸಿ ಯಜ್ಞೋಪವೀತವನ್ನು ಧರಿಸಬೇಕು.

6. ಎರಡು ಆಚಮನಗಳನ್ನು ಮಾಡಿ ಬ್ರಹ್ಮಚಾರಿಗಳು ಹಳೆ ಯಜ್ಞೋಪವೀತವನ್ನು ತೆಗೆದುಹಾಕಿ ಅನಂತರ ಪ್ರಾತಸ್ಸಂಧ್ಯಾವಂದನೆ ಮುಂತಾದ ಕರ್ಮಗಳನ್ನು ಮಾಡಬೇಕು.

7. ಗೃಹಸ್ಥಾಶ್ರಮಿಗಳು ೨ನೇ ಆವರ್ತಿ ಧರಿಸಬೇಕಾದ ನೂತನ ಯಜ್ಞೋಪವೀತ ಧಾರಣ ಕ್ರಮವು

## ನೂತನ ಯಜ್ಞೋಪವೀತ ಧಾರಣಾ ಕ್ರಮ

(a) ಒಂದು (ಎರಡು) ಆಚಮನ ಮತ್ತು ಒಂದು (ಮೂರು) ಪ್ರಾಣಾಯಾಮವನ್ನು ಮಾಡಿ;

(b) ಪೂರ್ವೋಕ್ತ ಏವಂಗುಣ ವಿಶೇಷಣ ವಿಶಿಷ್ಟಾಯಾಮಸ್ಯಾಂ ಶುಭತಿಥೌ । ಶ್ರೀಭಗವದಾಜ್ಞಯಾ । ಭಗವತ್ಕೈಂಕರ್ಯ ರೂಪಂ (ಶ್ರೀಮನ್ನಾರಾಯಣ ಪ್ರೀತ್ಯರ್ಥಂ) ಗೃಹಸ್ಥಾಶ್ರ (ಮಾಂಗಂ) ಮಾರ್ಥಂ । ದ್ವಿತೀಯ ಯಜ್ಞೋಪವೀತ ಧಾರಣಂ ಕರಿಷ್ಯೇ ಎಂದು ಸಂಕಲ್ಪಿಸಿ ಮತ್ತೊಂದು ಯಜ್ಞೋಪವೀತವನ್ನು ಮೇಲೆ 4–5 ನೇ ವಿಧಗಳಲ್ಲಿ ತಿಳಿಸಿದಂತೆ ಕರನ್ಯಾಸ ಮತ್ತು ಮಂತ್ರಗಳನ್ನು ಉಚ್ಚರಿಸಿ ಧರಿಸಬೇಕು.

೮. ಎರಡು ಆಚಮನಗಳನ್ನು ಮಾಡಿ ಹಳೆಯ ಯಜ್ಞೋಪವೀತಗಳನ್ನು ತೆಗೆದು ಹಾಕಬೇಕು.

**ಸೂಚನೆ**— ಅಸ್ಪೃಶ್ಯತೆ, ಆಶೌಚಾದಿಗಳಲ್ಲೂ, ದೂರದೇಶಯಾತ್ರೆಯನ್ನು ಸಮುದ್ರದಲ್ಲಿ ಮೂರು ದಿವಸಗಳ ಮೇಲ್ಪಟ್ಟು ಮಾಡಿ ಹಿಂತಿರುಗಿ ಬಂದಾಗಲೂ, ಬಹಳವ್ಯಾಧಿಯಿಂದ ನರಳುತ್ತಾ ಖಾಯಿಲೆ ಗುಣವಾಗಿ ತಲೆಗೆಸ್ನಾನ ಮಾಡಿದ ಅನಂತರದಲ್ಲೂ, ಗುರುವಿನಿಂದ ಪಂಚ ಸಂಸ್ಕಾರಗಳನ್ನು ಪಡೆಯುವ ಮುಂಚೆಯೂ, ಶ್ರಾದ್ಧಕಾಲದಲ್ಲೂ, ಕ್ಷೌರಮಾಡಿಕೊಂಡು ಸ್ನಾನ ಮಾಡಿದನಂತರವೂ, ಮತ್ತು ಉಪಾಕರ್ಮಾದಿ ಶುಭಕಾರ್ಯಗಳಲ್ಲಿಯೂ ನೂತನ ಯಜ್ಞೋಪವೀತವನ್ನು ಧಾರಣೆ ಮಾಡಬೇಕು. ಮಲಮೂತ್ರಾದಿ ವಿಸರ್ಜನೆ ಕಾಲದಲ್ಲಿ ಯಜ್ಞೋಪವೀತವನ್ನು ಬಲಕಿವಿಯಮೇಲೆ ಸುತ್ತಿ, ಅನಂತರ ಕೈ ಕಾಲು ಮುಂತಾದವುಗಳನ್ನು ತೊಳೆದುಕೊಂಡು ಉಪವೀತಿಯಲ್ಲಿ ಪುನಃ ಧರಿಸಿ ಎರಡು ಆಚಮನಗಳನ್ನು ಮಾಡಬೇಕು. ತಾಮಸಪ್ರಕೃತಿಗಳ ದೇವಾಲಯಗಳಿಗೆ ಪ್ರವೇಶಿಸುವಾಗ ಯಜ್ಞೋಪವೀತವನ್ನು ನಿವೀತಿಯಲ್ಲಿ ಧರಿಸಿ ಅನಂತರ ಪರಿಶುದ್ಧರಾಗಿ ಎರಡು ಆಚಮನಗಳನ್ನು ಮಾಡಬಹುದು. ಪಂಚಮರ ಗೃಹವನ್ನಾಗಲಿ ಅಥವಾ ಅವರುಗಳು ವಾಸವಾಗಿರುವ ಪ್ರದೇಶವನ್ನಾಗಲಿ ಯಜ್ಞೋಪವೀತವನ್ನು ಧರಿಸಿಕೊಂಡು ಪ್ರವೇಶಿಸಬಾರದು. ಹಾಗೆ ಒಂದುವೇಳೆ ಪ್ರವೇಶಿಸಿದರೆ ಸ್ನಾನಮಾಡಿ ನೂತನ ಯಜ್ಞೋಪವೀತವನ್ನು ಧರಿಸಿ ಅನಂತರ ನಿತ್ಯಕರ್ಮಗಳನ್ನು ಆಚರಿಸಬೇಕು.

॥ ಇತಿ ನೂತನ ಯಜ್ಞೋಪವೀತ ಧಾರಣಾಕ್ರಮ ಸಂಪೂರ್ಣ ॥

# II ಉಪಾಕರ್ಮ ಕ್ರಮ

1. ಎರಡು ಆಚಮನಗಳನ್ನು ಮಾಡಬೇಕು.

2. ದರ್ಭಪವಿತ್ರವನ್ನು ಧರಿಸಿ, ದರ್ಭಾಸನದಮೇಲೆ ಕುಳಿತು ಮೂರು ಪ್ರಾಣಾಯಾಮವನ್ನು ಮಾಡಬೇಕು; 34 ನೇ ಪುಟದಲ್ಲಿ ವಿವರಿಸಿದಂತೆ ಅವರವರುಗಳ ಗುರುಗಳ ತನಿಯರ್ಗಳನ್ನು ಹೇಳಿದನಂತರ,

3. ಸಂಕಲ್ಪ—ಹಿಂದಿನ ಅಧ್ಯಾಯ 3 ನೇ ವಿಧಿಯಲ್ಲಿ ವಿವರಿಸಿದಂತೆ ಪ್ರವರಗಳನ್ನು ಹೇಳಿ **ಶ್ರೀಭಗವದಾಜ್ಞಯಾ ಭಗವತ್ಕೈಂಕರ್ಯರೂಪಂ (ಶ್ರೀಮನ್ನಾರಾಯಣಪ್ರೀತ್ಯರ್ಥಂ) ತೈಷ್ಯಾಂ ಪೌರ್ಣಮಾಸ್ಯಾಂ ಅಧ್ಯಾಯೋತ್ಸರ್ಜನ ಅಕರಣದೋಷಪ್ರಾಯಶ್ಚಿತ್ತಾರ್ಥಂ ಅಷ್ಟೋತ್ತರಶತ [ಅಥವಾ-ಸಹಸ್ರ] ಸಂಖ್ಯಯಾ * "ಕಾಮೋಕಾರ್ಷೀನ್ಮನ್ಯುರಕಾರ್ಷೀನ್ನಮೋನಮಃ" ಇತಿ ಮಂತ್ರಜಪಂ ಕರಿಷ್ಯೇ"** ಎಂದು ಸಂಕಲ್ಪಿಸಿ 108 ಅಥವಾ 1008 ಸಾರಿ ಮಂತ್ರವನ್ನು ಜಪಿಸಬೇಕು.

4. ಎರಡು ಆಚಮನಗಳನ್ನು ಮಾಡಬೇಕು.

5. ಮಾಧ್ಯಾಹ್ನಿಕ, ಗೃಹದೇವತಾರಾಧನೆಗಳನ್ನು ಮಾಡಿ, ಅನಂತರ ನದೀಮುಂತಾದವುಗಳಲ್ಲಿ ಸ್ನಾನಮಾಡಿ ವಸ್ತ್ರಗಳನ್ನುಟ್ಟು × ಊರ್ಧ್ವಪುಂಡ್ರಗಳನ್ನು ಧರಿಸಬಹುದು.

6. ಎರಡು ಆಚಮನಗಳನ್ನು ಮಾಡಿ ದರ್ಭಪವಿತ್ರವನ್ನು ಧರಿಸಿ ದರ್ಭಾಸನದಮೇಲೆ ಕುಳಿತು, "ಶುಕ್ಲಾಂಬರಧರಂ ವಿಷ್ಣುಂ" ಇತ್ಯಾದಿ ಪ್ರವರಗಳನ್ನು ಹೇಳಿ, ಶ್ರೀಭಗವದಾಜ್ಞಯಾ ಭಗವತ್ಕೈಂಕರ್ಯರೂಪಂ **(ಶ್ರೀಮನ್ನಾರಾಯಣಪ್ರೀತ್ಯರ್ಥಂ) [ಶ್ರಾವಣ್ಯಾಂ ಪೌರ್ಣಮಾಸ್ಯಾಂ] ಅಧ್ಯಾಯೋಪಾಕರ್ಮ ಕರಿಷ್ಯೇ; ತದಂಗಂ ನೂತನ ಯಜ್ಞೋಪವೀತ ಧಾರಣಂ ಕರಿಷ್ಯೇ; ತದಂಗಂ ನವಕಾಂಡ ಋಷಿ ತರ್ಪಣಂ ಕರಿಷ್ಯೇ** ಎಂದು ಸಂಕಲ್ಪಿಸಬೇಕು. ಅನಂತರ ನೂತನ ಯಜ್ಞೋಪವೀತವನ್ನು ಧರಿಸಬೇಕು.

7. ಬ್ರಹ್ಮಚಾರಿಗಳು—ಮೌಂಜ್ಯಜಿನದಂಡಗಳನ್ನು ಕೆಳಗೆ ತಿಳಿಸಿರುವ ಆಯಾ ಮಂತ್ರಗಳನ್ನು ಉಚ್ಚರಿಸಿ ಧರಿಸಬೇಕು.

(a) **ಮೌಂಜೀಧಾರಣೆ—ಇಯಂ ದುರುಕ್ತಾತ್ಪರಿಬಾಧಮಾನಾ ಶರ್ಮವರೂಥಂ ಪುನತೀನ ಆಗಾತ್ । ಪ್ರಾಣಾಪಾನಾಭ್ಯಾಂ ಬಲಮಾ**

---

* ಸ. ಕಾಮೋಕಾರ್ಷೀತ್ ಮನ್ಯುರಕಾರ್ಷೀತ್ " ಇತಿ ಮಂತ್ರಜಪಂ ಕರಿಷ್ಯೇ

× 18ನೇ ಪುಟವನ್ನು ನೋಡು, "ಶ್ರೀಕೃಷ್ಣಶರಣಂ" ಮಂತ್ರವನ್ನು ಹೇಳಬಹುದು.

ಭರಂತೀ। ಪ್ರಿಯಾದೇವಾನಾ (ಗ್‌ಂ) ಸುಭಗಾ ಮೇಖಲೇಯಮ್ ॥ ಋತಸ್ಯ ಗೋಪ್ತ್ರೀ ತಪಸಃ ಪರಸ್ವೀ । ಘ್ನತೀರಕ್ಷಸ್ಸಹಮಾನಾ ಅರಾತೀಃ । ಸಾನಸ್ಸಮಂತಮನುಪರೀಹಿ ಭದ್ರಯಾಭರ್ತಾರಸ್ತೇಮೇಖಲೇಮಾರಿಷಾಮ ॥ ಎಂದು ಮುಂಜಿ ಹುಲ್ಲಿನಿಂದ ಹೆಣೆದುಮಾಡಿದ ಉಡಿದಾರದಂತಿರುವ ಮೌಂಜಿಯನ್ನು ಉಟ್ಟಿರುವ ಬಟ್ಟೆಯಮೇಲೆ ಮೂರುಸುತ್ತು ಬರುವಂತೆ ಸೊಂಟದಲ್ಲಿ ಕಟ್ಟಬೇಕು.

(b) ಕೃಷ್ಣಾಜಿನವನ್ನು ಯಜ್ಞೋಪವೀತದಲ್ಲಿ ಕಟ್ಟುವ ಮಂತ್ರ—ಮಿತ್ರಸ್ಯ ಚಕ್ಷುರ್ಧರುಣಂ ಬಲೀಯಸ್ತೇಜೋಯಶಸ್ವಿ ಸ್ಥವಿರಗ್‌ಂಸಮಿದ್ಧಂ । ಅನಾಹನಸ್ಯಂ ವಸನಂಜರಿಷ್ಣು ಪರೀದಂ ವಾಜ್ಯಜಿನಂ ದಧೇಽಹಮ್ ॥

(c) ದಂಡಧಾರಣ ಮಂತ್ರ—ಸುಶ್ರವಸ್ಸುಶ್ರವಸಂ ಮಾಕುರು ಯಥಾತ್ವ(ಗ್‌ಂ) ಸುಶ್ರವಸ್ಸುಶ್ರವಾ ಅಸ್ಯೇವ ಮಹ(ಗ್‌ಂ) ಸುಶ್ರವಸ್ಸುಶ್ರವಾ ಭೂಯಾಸಂ ಯಥಾತ್ವ(ಗ್‌ಂ) ಸುಶ್ರವಸ್ಸುಶ್ರವೋ ದೇವಾನಾಂನಿಧಿಗೋಪೋಽಸ್ಯೇವಮಹಂ ಬ್ರಾಹ್ಮಣಾನಾಂಬ್ರಹ್ಮಣೋ ನಿಧಿಗೋಪೋ ಭೂಯಾಸಮ್ ॥ ಎಂದು ಮಂತ್ರವನ್ನು ಹೇಳಿ ಮುತ್ತುಗದ ಎಲೆಗಳಿಂದ ಕೂಡಿದ ದಂಡವನ್ನು ಬಲದ ಕೈಯಲ್ಲಿ ಹಿಡಿಯಬೇಕು.

೪. ತರ್ಪಣಕ್ರಮ।— ನದೀ, ಕೊಳ, ತಟಾಕ ಮುಂತಾದ ಕಡೆ ನೀರು ಸಮೃದ್ಧಿಯುಳ್ಳ ಪ್ರದೇಶಗಳಿಗೆ ತೆರಳಿ, ಎಳ್ಳು ಮತ್ತು ಅಕ್ಕಿ ಬೆರಕೆ ಮಾಡಿಟ್ಟು ಯಜ್ಞೋಪವೀತವನ್ನು ನಿವೀತಿ ಹಾಕಿಕೊಂಡು ಒಂದೊಂದು ಮಂತ್ರಕ್ಕೂ ಎರಡಾವರ್ತಿ ಎಳ್ಳು ಅಕ್ಕಿ ಬೆರಕೆಯಾಗಿರುವುದನ್ನು ಅಂಗೈಯಲ್ಲಿಟ್ಟು ನೀರಿನಲ್ಲಿ ತರ್ಪಣವನ್ನು ಕೊಡಬೇಕು.

(a) ಪ್ರಜಾಪತಿಂ ಕಾಂಡಋಷಿಂ ತರ್ಪಯಾಮಿ,

(b) ಸೋಮಂ ಕಾಂಡಋಷಿಂ ತರ್ಪಯಾಮಿ,

(c) ಅಗ್ನಿಂ ಕಾಂಡಋಷಿಂ ತರ್ಪಯಾಮಿ,

(d) ವಿಶ್ವಾನ್ದೇವಾನ್ ಕಾಂಡಋಷೀ(ಗ್‌ಂ)ಸ್ತರ್ಪಯಾಮಿ,

(a) ಇಂದ (d) ವರೆಗೂ ತೀರ್ಥವನ್ನು ಎರಡು ಅಂಗೈಗಳಮಧ್ಯದಲ್ಲಿ ಒಳಮುಖವಾಗಿ ಎರಡಾವರ್ತಿ ಬಿಡಬೇಕು.



7

(e) ಸಾ(ಗ್)ಂಹಿತೀರ್ದೇವತಾ ಉಪನಿಷದ ಸ್ತರ್ಪಯಾಮಿ,

(f) ಯಾಜ್ಞಿಕೀರ್ದೇವತಾ ಉಪನಿಷದ ಸ್ತರ್ಪಯಾಮಿ,

(g) ವಾರುಣೀರ್ದೇವತಾ ಉಪನಿಷದ ಸ್ತರ್ಪಯಾಮಿ,

(e) ಇಂದ (g) ವರೆಗೂ ತೀರ್ಥವನ್ನು ತುದಿ ಬೆರಳುಗಳ ಮೂಲಕವಾಗಿ ಹರಿಯುವಂತೆ ಒಂದಾವರ್ತಿ ಬಿಡಬೇಕು.

(h) ಬ್ರಹ್ಮಾಣಗ್ಂ ಸ್ವಯಂಭುವಂ ತರ್ಪಯಾಮಿ,

ಕೈಗಳನ್ನು ಮೇಲಕ್ಕೆತ್ತಿ ಮೊಣಕೈಗಳ ನಡುವೆ ನೀರು ಹರಿಯುವಂತೆ ಒಂದಾವರ್ತಿ ಬಿಡಬೇಕು.

(i) ಸದಸಸ್ಪತಿಂ ತರ್ಪಯಾಮಿ____ ಇದನ್ನು (e)(f)(g) ಗಳಂತೆ ಮಾಡಬೇಕು-

ಕೆಲವರು— ಋಗ್ವೇದಂ ತರ್ಪಯಾಮಿ, ಯಜುರ್ವೇದಂ ತರ್ಪಯಾಮಿ, ಸಾಮವೇದಂ ತರ್ಪಯಾಮಿ, ಅಥರ್ವಣವೇದಂ ತರ್ಪಯಾಮಿ, ಇತಿಹಾಸಪುರಾಣಂ ತರ್ಪಯಾಮಿ, (ಕಲ್ಪಂ ತರ್ಪಯಾಮಿ) ಎಂದು ತರ್ಪಣವನ್ನು ಕೊಡುವದುಂಟು. ಈ ತರ್ಪಣಗಳನ್ನು ದೇವರ್ಷಿ ಪಿತೃತರ್ಪಣದಲ್ಲಿಯೂ ಸಹ ನಿತ್ಯವೂ ಮಾಡುವುದುಂಟು.

9. ಅನಂತರ ಯಜ್ಞೋಪವೀತವನ್ನು ಉಪವೀತಿಯಲ್ಲಿ ಧರಿಸಿ ದರ್ಭಪವಿತ್ರವನ್ನು ತೆಗೆದು, ಎರಡು ಆಚಮನಗಳನ್ನು ಮಾಡಿ, ಗುರುಹಿರಿಯರುಗಳನ್ನು ಯಥಾಶಕ್ತಿ ಪೂಜಿಸಿ, ಸಾಷ್ಟಾಂಗನಮಸ್ಕಾರವನ್ನು ಮಾಡಿ ಅವರುಗಳ ಆಶೀರ್ವಾದವನ್ನು ಪಡೆಯಬೇಕು.

10. ದೇವಸ್ಥಾನ ಮುಂತಾದ ಸ್ಥಳಗಳಲ್ಲಿ ಎಲ್ಲರೂ ಸೇರಿ ಅಧ್ಯಯನ, ಹೋಮ, ಮುಂತಾದ ಕರ್ಮಗಳನ್ನು ಮಾಡುವಕಡೆಯಲ್ಲ ಹೋಗಿ ಅವುಗಳಲ್ಲಿ ಅನ್ವಯಿಸಬಹುದು. ಹಾಗೆಯೇ ದೇವರನ್ನು ದರ್ಶನಮಾಡಿ ತೀರ್ಥ ಪ್ರಸಾದಗಳನ್ನು ಸ್ವೀಕರಿಸಬಹುದು.

**ಸೂಚನೆ**—ಉಪನಯನವಾದ ಮೊದಲನೆಯ ವರ್ಷದಲ್ಲಿ ಬ್ರಹ್ಮಚಾರಿಗಳು ಮೇಲೆ 3 ನೇ ವಿಧಿಯಲ್ಲಿ ಸೂಚಿಸಿರುವ "ಕಾಮೋಕಾರ್ಷೀತ್" ಜಪವನ್ನು ಮಾಡಬಾರದು. ಎರಡನೆಯ ವರ್ಷದಿಂದ ಪ್ರಾತಃಸಂಧ್ಯಾವಂದನೆಯನ್ನು ಮಾಡಿದನಂತರ ಕ್ಷೌರವನ್ನು ಮಾಡಿಕೊಂಡು, ನೂತನ ಯಜ್ಞೋಪವೀತವನ್ನು ಧರಿಸಿ, ಸಮಿದಾಧಾನ ಹೋಮವನ್ನು ಮಾಡಿದನಂತರ "ಕಾಮೋಕಾರ್ಷೀತ್" ಮಂತ್ರಜಪವನ್ನು 1008

ಸಾರಿ ಜಪಿಸಬೇಕು. ಅನಂತರ ಮಾಧ್ಯಾಹ್ನಿಕವನ್ನು ಮಾಡಿ ಮೌಂಜ್ಯಾದಿ ದಂಡಧಾರಣೆಯನ್ನು ಮೇಲೆ ಹೇಳಿದಂತೆ ಧರಿಸಿ, ಅನಂತರ ಕಾಂಡಋಷಿ ತರ್ಪಣಗಳನ್ನು ಕೊಡಬೇಕು.—ಬ್ರಹ್ಮಚಾರಿಗಳು ಪುನಃ ತರ್ಪಣವನ್ನು ಕೊಡುವ ಮುಂಚೆ ನೂತನ ಯಜ್ಞೋಪವೀತವನ್ನು ಗೃಹಸ್ಥರಂತೆ ಧರಿಸುವ ಪದ್ಧತಿ ಅನೇಕರಲ್ಲಿ ಇಲ್ಲ.

**ಬ್ರಹ್ಮಚಾರಿಗಳು ಮತ್ತು ಗೃಹಸ್ಥರು ಮಾರನೇಯ ದಿವಸ ಮಾಡಬೇಕಾದ ಗಾಯತ್ರೀ ಮಂತ್ರ ಜಪ ಕ್ರಮವು:—**

1. ಬೆಳಗ್ಗೆ ಸಂಧ್ಯಾವಂದನೆಯನ್ನು ಮಾಡಿದನಂತರ ಎರಡು ಆಚಮನಗಳನ್ನು ಮಾಡಬೇಕು;

2. ದರ್ಭಪವಿತ್ರವನ್ನು ಧರಿಸಿ, ದರ್ಭಾಸನದಮೇಲೆ ಕುಳಿತು, ಮೂರು ಪ್ರಾಣಾಯಾಮವನ್ನು ಮಾಡಬೇಕು; ಮತ್ತು ಗುರುಗಳ ತನಿಯಗಳನ್ನು ಹೇಳಿದನಂತರ, [24 ನೇ ಪುಟವನ್ನು ನೋಡಿ]

3. **ಸಂಕಲ್ಪ**—ಹಿಂದೆ ಹೇಳಿದಂತೆ ಪ್ರವರಗಳನ್ನು ಹೇಳಿ, **ಶ್ರೀ ಭಗವದಾಜ್ಞಯಾ ಭಗವತ್ಕೈಂಕರ್ಯರೂಪಂ (ಶ್ರೀಮನ್ನಾರಾಯಣ ಪ್ರೀತ್ಯರ್ಥಂ) ಮಿಥ್ಯಾಧೀತ (ಅಕರಣದೋಷ) ಪ್ರಾಯಶ್ಚಿತ್ತಾರ್ಥಂ, ಅಷ್ಟೋತ್ತರ (ಶತ ಅಥವಾ) ಸಹಸ್ರ ಸಂಖ್ಯಯಾ ಗಾಯತ್ರೀ ಮಂತ್ರ ಜಪಂ ಕರಿಷ್ಯೇ** ಎಂದು ಸಂಕಲ್ಪಿಸಿ;

4. ಸಂಧ್ಯಾವಂದನೆ ಕ್ರಮಗಳನ್ನು ಅನುಸರಿಸಿ ಹತ್ತು ಪ್ರಾಣಾಯಾಮ ಮಂತ್ರವನ್ನು ಜಪಿಸಿ. ಅನಂತರ—

5. ನಿರ್ದಿಷ್ಟವಾದ ಗಾಯತ್ರೀ ಮಂತ್ರ ಜಪವನ್ನು ಮಾಡಬೇಕು.

6. **ಶ್ರೀಭಗವದಾಜ್ಞಯಾ ಭಗವತ್ಕೈಂಕರ್ಯರೂಪಂ (ಶ್ರೀಮನ್ನಾರಾಯಣ ಪ್ರೀತ್ಯರ್ಥಂ) ಗಾಯತ್ರೀ ಮಂತ್ರ ಜಪ ಉಪಸ್ಥಾನಂ ಕರಿಷ್ಯೇ** ಎಂದು ಸಂಕಲ್ಪಿಸಿ ಎದ್ದುನಿಂತು **"ಉತ್ತಮೇ ಶಿಖರೇ ದೇವಿ"** ಇತ್ಯಾದಿಗಳನ್ನು ಹೇಳಿ ನಮಸ್ಕರಿಸಿ ಅಭಿವಾದನವನ್ನು ಮಾಡಬೇಕು.

7. ಎರಡು ಶುದ್ಧಾಚಮನಗಳನ್ನು ಮಾಡಿ, ಗುರುಹಿರಿಯರು ದೇವರುಗಳಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ, ಅವರುಗಳ ಆಶೀರ್ವಾದಗಳನ್ನು ಪಡೆದು, ಸುಖಿಯಾಗಿರಬೇಕು.

† 8. **ಪ್ರಥಮೋಪಾಕರ್ಮ ಬ್ರಹ್ಮಚಾರಿಗಳು** ಜಪಹೋಮಮಾಡುವುದಕ್ಕೆ ಬದಲಾಗಿ ಗುರುಗಳು ಹೇಳಿದಂತೆ 1008 ಮುತ್ತುಗದ ಸಮಿತ್ತುಗಳಿಂದ ಗಾಯತ್ರೀ ಮಂತ್ರವನ್ನು ಉಚ್ಚರಿಸಿ, ಸಮಿತ್ತನ್ನು ತುಪ್ಪದಲ್ಲಿ ಅದ್ದಿ, ಹೋಮ ಮಾಡಬೇಕು.

॥ ಇತಿ ಉಪಾಕರ್ಮ ಕ್ರಮಃ ಸಂಪೂರ್ಣಃ ॥

# III ವರ್ಗದ್ವಯ ಪಿತೃತರ್ಪಣ ಕ್ರಮ

1. ಎರಡು ಶುದ್ಧಾಚಮನಗಳನ್ನು ಮಾಡಬೇಕು.

2. * ದರ್ಭೆ ಪವಿತ್ರವನ್ನು ಧರಿಸಿ, ಪೂರ್ವಾಭಿಮುಖವಾಗಿ ದರ್ಭಾಸನದ ಮೇಲೆ ಕುಳಿತು, ಮೂರು ಪ್ರಾಣಾಯಾಮವನ್ನು ಮಾಡಬೇಕು.

3. ಅವರವರುಗಳ ಪದ್ಧತಿಗಳಂತೆ 84 ನೇ ಪುಟದಲ್ಲಿ ವಿವರಿಸಿರುವ ಗುರುಗಳ ತನಿಯನ್‌ಗಳನ್ನು ಹೇಳಬಹುದು.

4. **ಸಂಕಲ್ಪ— "(ಓಂ) ಶುಕ್ಲಾಂಬರಧರಂ ವಿಷ್ಣುಂ, ಶಶಿವರ್ಣಂ ಚತುರ್ಭುಜಂ। ಪ್ರಸನ್ನವದನಂ ಧ್ಯಾಯೇತ್ ಸರ್ವ ವಿಘ್ನೋಪಶಾಂತಯೇ ॥ ಯಸ್ಯದ್ವಿರದ ವಕ್ತ್ರಾದ್ಯಾಃ ಪಾರಿಷದ್ಯಾಃ ಪರಶ್ಶತಂ। ವಿಘ್ನಂ ನಿಘ್ನಂತಿ ಸತತಂ ವಿಷ್ವಕ್ಸೇನಂ ತಮಾಶ್ರಯೇ ॥** ಎಂದು ಕೈ ಮುಗಿದು ಹೇಳಿದನಂತರ × ಬಲದ ತೊಡೆಯಮೇಲೆ ಎರಡು ಕೈಗಳ

---

† ಈ ಹೋಮಕ್ರಮವನ್ನು V ನೇ ಅಧ್ಯಾಯದಲ್ಲಿ ಮುಂದೆ ವಿವರಿಸುತ್ತ.

* ಅನುಭಗಳೆಲ್ಲಾ ಮೂರು ದರ್ಭೆಗಳಿಂದ ಮಾಡಿದ ದರ್ಭೆ ಪವಿತ್ರವನ್ನು ಧರಿಸಬೇಕು.

× ಬಲದ ತೊಡೆಯಮೇಲೆ ಎಡದ ಅಂಗೈಯನ್ನು ಮೇಲ್ಮುಖವಾಗಿಟ್ಟು, ಅದರಮೇಲೆ ಬಲದ ಅಂಗೈಯನ್ನಿಟ್ಟು, ಕರ್ಣಾನೀ ಬೆರಳುಗಳ ತುದಿ ಬಂದಕ್ಕೆಯ್ದು ನಾಲ್ಕು ಬೆರಳುಗಳನ್ನಿಟ್ಟು ಮುಷ್ಟಿ ಎರಡು ಕೈಗಳ ಪವಿತ್ರಗಳು ಸೋಕುವಂತೆ ಒಂದರಮೇಲೊಂದು ಸೇರಿಸಿಕೊಂಡು ಸಂಕಲ್ಪವನ್ನು ಮಾಡಬೇಕು. 47 ನೇ ಪುಟವನ್ನು ನೋಡಬಹುದು.

ನಿಟ್ಟು — "ಓಂ ಶ್ರೀಗೋವಿಂದ ಗೋವಿಂದ ಗೋವಿಂದ ______ ಕೈಂಕರ್ಯರೂಪಂ (ಶ್ರೀಮನ್ನಾರಾಯಣ ಪ್ರೀತ್ಯರ್ಥಂ) ಪ್ರಾಚೀನಾವೀತಿಯಲ್ಲಿ ______ ಗೋತ್ರಾಣಾಂ ______ ಶರ್ಮಣಾಂ ಅಸ್ಮತ್ಪಿತೃ ಪಿತಾಮಹ ಪ್ರಪಿತಾಮಹಾನಾಂ ಸಪತ್ನೀಕಾನಾಂಚ ______ ಗೋತ್ರಾಣಾಂ ______ ಶರ್ಮಣಾಂ ______ ಮಾತುಃ ಪಿತೃ ಪಿತಾಮಹ ಪ್ರಪಿತಾಮಹಾನಾಂ ಸಪತ್ನೀಕಾನಾಂಚ ವರ್ಗದ್ವಯ ಪಿತೄಣಾಂಚ ಅಕ್ಷಯತೃಪ್ತ್ಯರ್ಥಂ ______ (ದರ್ಶ) ಶ್ರಾದ್ಧಂ ತಿಲತರ್ಪಣರೂಪೇಣ (ಅದ್ಯ) ಕರಿಷ್ಯೇ" ಎಂದು ಸಂಕಲ್ಪಿಸಿ;

೫. ಅಪಾಂ ಮೇಧ್ಯಂ ಯಜ್ಞಿಯಗ್ಂ ಸದೇವಗ್ಂ ಶಿವಮಸ್ತು ಮೇ। ಆಚ್ಛೇತ್ತಾ ವೋ ಮಾರಿಷಂ ಜೀವಾನಿ ಶರದಶ್ಶತಂ" ॥ ಎಂದುಹೇಳಿ ಸ್ಥಳವನ್ನು ಶುದ್ಧಿ ಮಾಡಬೇಕು.

6. ದಕ್ಷಿಣಾಭಿಮುಖವಾಗಿ † ಭುಗ್ನಗಳನ್ನು ಶುದ್ಧಿಮಾಡಿದ ಸ್ಥಳದಲ್ಲಿ ದರ್ಭಾಸನದ ಮೇಲಿಟ್ಟು, ದಕ್ಷಿಣಾಭಿಮುಖವಾಗಿ ಕುಶಾಸನದಲ್ಲಿ ಕುಳಿತು ಆಯಾತಪಿತರಸ್ಸೋಮ್ಯಾ ಗಂಭೀರೈಃ ಪಥಿಭಿಃ ಪೂರ್ವೈಃ ಪ್ರಜಾಮಸ್ಮಭ್ಯಂ ದದತೋ ರಯಿಂ ಚ ದೀರ್ಘಾಯುತ್ವಂ ಚ ಶತಶಾರದಂ ಚ। ______ ಗೋತ್ರಾನ್ ______ ಶರ್ಮಣಃ ಅಸ್ಮತ್ಪಿತೃಪಿತಾಮಹ ಪ್ರಪಿತಾಮಹಾನ್ ಆವಾಹಯಾಮಿ— ಎಂದು [ಮೂರು ದರ್ಭೆ ತುಂಡುಗಳು ಮತ್ತು] ಎಳ್ಳಿನಿಂದ ಎಡಗಡೆಯ ಭುಗ್ನಗಳಮೇಲೆ ಪೂಜೆಮಾಡಬೇಕು.

7. ಸಕೃದಾಚ್ಛಿನ್ನಂ ಬರ್ಹಿರೂರ್ಣಾಮೃದು ಸ್ಯೋನಂ। ಪಿತೃಭ್ಯಸ್ತ್ವಾ ಭರಾಮ್ಯಹಂ। ಅಸ್ಮಿನ್ ಸೀದಂತು ಮೇ ಪಿತರಃ ಸೋಮ್ಯಾಃ। ಪಿತಾಮಹಾಃ ಪ್ರಪಿತಾಮಹಾಶ್ಚಾನುಗೈಸ್ಸಹ ______ ಗೋತ್ರಾಣಾಂ-

---

+ "ಹರಿಃ ಓಂ ತತ್ ಸತ್" ಎಂದು ಹೇಳಿದನಂತರ "ಶ್ರೀಗೋವಿಂದ ಗೋವಿಂದ" ಎಂದು ಕೆಲವರು ಹೇಳುವುದಕ್ಕೆ ಮೊದಲು ಪ್ರಾಚೀನಾವೀತಿಯಲ್ಲಿ ಯಜ್ಞೋಪವೀತವನ್ನು ಧರಿಸುವುದುಂಟು.

† ಐದು ದರ್ಭೆಗಳಿಂದ ಎರಡು ಭುಗ್ನಗಳನ್ನು ಮತ್ತು ಮೂರು ದರ್ಭೆಗಳಿಂದ ಎರಡು ಭುಗ್ನಗಳನ್ನು ಅಂದರೆ ೫ ಮತ್ತು ೩ ದರ್ಭೆಗಳಿಂದ ಮಾಡಿದ ಭುಗ್ನಗಳನ್ನು ದಕ್ಷಿಣಾಗ್ರವಾಗಿ ಪಿತೃವರ್ಗದವರುಗಳಿಗೆ ತನ್ನ ಎಡಗಡೆ [ಪೂರ್ವದಿಕ್ಕಿನ ಕಡೆ] ಗೂ ಮೂರರಿಂದ ಭುಗ್ನಗಳನ್ನು ಮಾತೃ ವರ್ಗದವರುಗಳಿಗೆ ತನ್ನ ಬಲಗಡೆ [ಪಶ್ಚಿಮದಿಕ್ಕಿನ ಕಡೆ] ಗೂ ಪೂರ್ವಾಗ್ರವಾಗಿ ಧರಿಸಿದ ದರ್ಭಾಸನದ ಮೇಲಿಡಬೇಕು.

ಅಸ್ಮತ್ಪಿತೃಪಿತಾಮಹಪ್ರಪಿತಾಮಹಾನಾಂ ಇದಂ ಆಸನಂ ಎಂದು ಮೂರು ತುಂಡು ದರ್ಭೆಗಳಿಂದ ಆಸನವನ್ನು ಕೊಡುವುದು.

8. ಊರ್ಜಂ ವಹಂತೀರಮೃತಂ ಘೃತಂ ಪಯಃ ಕೀಲಾಲಂ ಪರಿಸ್ರುತಂ ಸ್ವಧಾಸ್ಥ ತರ್ಪಯತ ಮೇ ಪಿತೄನ್ ॥ ಎಂದು ಎಡಗಡೆ ಭುಗ್ನಗಳಮೇಲೆ × ತಿಲೋದಕವನ್ನು ಬಿಡಬೇಕು.

9. ಆಯಾತು ಮಾತುಃ ಪಿತರಃ ______ ಶತಶಾರದಂ ಚ ______ ಗೋತ್ರಾನ್ ______ ಶರ್ಮಣಃ ಮಾತುಃ ಪಿತೃಪಿತಾಮಹ ಪ್ರಪಿತಾಮಹಾನಾವಾಹಯಾಮಿ ಎಂದು ಬಲಗಡೆ ಭುಗ್ನಗಳನ್ನು ಸ್ಪರ್ಶಿಸಿ ಎಳ್ಳು ದರ್ಭೆಗಳಿಂದ ಪೂಜಿಸಿ ಆವಾಹನೆಮಾಡುವುದು. ಅಥವಾ ಅಸ್ಮಿನ್ ಸೀದಂತು ಮೇ ಮಾತುಃ ಪಿತರಃ, ಮಾತುಃ ಪಿತಾಮಹಾಃ, ಮಾತುಃ ಪ್ರಪಿತಾಮಹಾಶ್ಚಾನುಗೈಸ್ಸಹ ಎಂದು ಬದಲಾಯಿಸಿ ಹೇಳುವ ಶಿಷ್ಟಸಂಪ್ರದಾಯವೂ ಸಹ ಉಂಟು.

10. ಸಕೃದಾಚ್ಛಿನ್ನಂ ______ ಅಸ್ಮಿನ್ ಸೀದಂತು ಮೇ ಮಾತುಃ ಪಿತರಃ, ಮಾತುಃ ಪಿತಾಮಹಾಃ, ಮಾತುಃ ಪ್ರಪಿತಾಮಹಾಶ್ಚಾನುಗೈಸ್ಸಹ ______ ಗೋತ್ರಾಣಾಂ ______ ಶರ್ಮಣಾಂ ಅಸ್ಮನ್ಮಾತುಃ ಪಿತೃಪಿತಾಮಹ ಪ್ರಪಿತಾಮಹಾನಾಂ ಇದಮಾಸನಂ ಎಂದು ದರ್ಭಾಸನವನ್ನು ಕೊಡುವುದು.

11. ಊರ್ಜಂ ವಹಂತೀ ______ ಮೇ ಮಾತುಃ ಪಿತೄನ್ ಎಂದು ಒಂದಾವರ್ತಿ ತಿಲೋದಕವನ್ನು ಬಲಗಡೆ ಭುಗ್ನಗಳಮೇಲೆ ಬಿಡುವುದು.

## ತರ್ಪಣ ಕ್ರಮ

12. ಪಿತೃವರ್ಗದವರಿಗೆ— [ತಂದೆಗೆ]

ಉದೀರತಾಮವರ ಉತ್ಪರಾಸ ಉನ್ಮಧ್ಯಮಾಃ । ಪಿತರಸ್ಸೋಮ್ಯಾಸಃ ಅಸುಂಯ ಈಯುರವೃಕಾ ಋತಜ್ಞಾಸ್ತೇನೋಽವಂತು ಪಿತರೋ ಹವೇಷು ______ ಗೋತ್ರಾನ್ ______ ಶರ್ಮಣಃ ಅಸ್ಮ

× ತಿಲೋದಕಗಳನ್ನು ಬಿಡುವಾಗ ಎಡಗಡೆ ಮಂಡಿಯನ್ನು ನೆಲದ ಮೇಲೆ ಊರಿ ಬಲ [illegible] ಅಥವಾ [illegible] ಬಿಡಬೇಕು.

ಪ್ಪಿತೃನ್ ಸ್ವಧಾನಮಸ್ತರ್ಪಯಾಮಿ ಎಂದು [ಒಂದು ಅಥವಾ] ÷ ಮೂರುಬಾರಿ ಐದು ದರ್ಭೆಗಳಿಂದ ಮಾಡಿ ಎಡಗಡೆ ಇಡಲ್ಪಟ್ಟ ಕೂರ್ಚದ ಮೇಲೆ ತಿಲೋದಕವನ್ನು ಬಿಡಬೇಕು.

(b) ಅಂಗಿರಸೋ ನಃ ಪಿತರೋ ನವಗ್ವಾ ಅಥರ್ವಾಣೋ ಭೃಗವಃ ಸೋಮ್ಯಾಸಃ ತೇಷಾಂ ವಯಗ್ಂ ಸುಮತೌ ಯಜ್ಞಿಯಾನಾಂ ಅಪಿ ಭದ್ರೇ ಸೌಮನಸೇ ಸ್ಯಾಮ ............ ಗೋತ್ರಾನ್ ......... ......... ಶರ್ಮಣಃ ಅಸ್ಮತ್ಪಿತೃನ್ ಸ್ವಧಾನಮಸ್ತರ್ಪಯಾಮಿ ಎಂದು ತಿಲೋದಕವನ್ನು [ಒಂದು ಅಥವಾ] ಮೂರಾವರ್ತಿ ಬಿಡಬೇಕು,

(c) ಆಯಂತು ನಃ ಪಿತರೋ (ಮನೋಜವಸೋ)ಽಗ್ನಿಷ್ವಾತ್ತಾಃ ಪಥಿಭಿರ್ದೇವಯಾನೈಃ ಅಸ್ಮಿನ್ಯಜ್ಞೇ ಸ್ವಧಯಾ ಮದಂತ್ವಧಿಬ್ರುವಂತು ತೇ ಅವಂತ್ವಸ್ಮಾನ್ ಎಂದು ಮೇಲೆ ಹೇಳಿದಂತೆ ಮಾಡುವುದು.

(d) [ತಾತಂದಿರಿಗೆ] ಊರ್ಜಂ ವಹಂತೀ ............ ಪಿತೃನ್ ಎಂದು ೮ ನೇ ವಿಧಿಯಲ್ಲಿ ಹೇಳಿದಂತೆ ಉಚ್ಚರಿಸಿ ............ ಗೋತ್ರಾನ್ ...... ............ ಶರ್ಮಣಃ ಅಸ್ಮತ್ಪಿತಾಮಹಾನ್ ಸ್ವಧಾನಮಸ್ತರ್ಪಯಾಮಿ ಎಂದು [ಒಂದು ಅಥವಾ] ಮೂರುಬಾರಿ ತಿಲೋದಕವನ್ನು ಬಿಡಬೇಕು.

(e) ಪಿತೃಭ್ಯಸ್ಸ್ವಧಾವಿಭ್ಯಸ್ಸ್ವಧಾನಮಃ ಪಿತಾಮಹೇಭ್ಯಸ್ಸ್ವಧಾವಿಭ್ಯಸ್ಸ್ವಧಾನಮಃ ಪ್ರಪಿತಾಮಹೇಭ್ಯಸ್ಸ್ವಧಾವಿಭ್ಯಸ್ಸ್ವಧಾನಮಃ × (ಅಕ್ಷನ್ನಮೀಮದಂತ ಹ್ಯವಪ್ರಿಯಾ ಅಧೂಷತ ಅಸ್ತೋಷತ ಸ್ವಭಾನವೋ ವಿಪ್ರಾ ನವಿಷ್ಠಯಾ ಮತೀ ಯೋಜಾನ್ವಿಂದ್ರತೇ ಹರೀ) [ಅಕ್ಷನ್ಪಿತರಃ] ............ ಗೋತ್ರಾನ್ ............ ಶರ್ಮಣಃ ಅಸ್ಮತ್ಪಿತಾಮಹಾನ್ ಸ್ವಧಾ ನಮಸ್ತರ್ಪಯಾಮಿ ಎಂದು (d) ನಲ್ಲಿ ಹೇಳಿದಂತೆ ಮಾಡುವುದು.

(f) ಯೇ ಚೇಹ ಪಿತರೋ ಯೇ ಚ ನೇಹ ಯಾಗ್ಂಶ್ಚ ವಿದ್ಮ ಯಾಗ್ಂ ಉ ಚ ನ ಪ್ರವಿದ್ಮ ಅಗ್ನೇ ತಾನ್ವೇತ್ಥ ಯದಿ ತೇ ಜಾತವೇದಃ ತಯಾ ಪ್ರತ್ತಗ್ಂ ಸ್ವಧಯಾ ಮದಂತು ಎಂದು (d) ನಲ್ಲಿ ಹೇಳಿದಂತೆ ಮಾಡುವುದು.

---

÷ ಕೆಲವರು "ತರ್ಪಯಾಮಿ, ತರ್ಪಯಾಮಿ, ತರ್ಪಯಾಮಿ," ಎಂದು ಹೇಳಿ ಮೂರು ಬಾರಿ ತಿಲೋದಕವನ್ನು ಬಿಡುವುದುಂಟು. ತರ್ಪಣಪುಸ್ತಕಗಳಲ್ಲಿ ಮುಂದೆ ಮಾಡಬೇಕಾದುದನ್ನು ಕೊಡಲಾಗಿದೆ.

× ಇದನ್ನು ಅನೇಕರು ಹೇಳುವುದಿಲ್ಲ.

(g) [ಮುತ್ತಾತಂದರಿಗೆ] ಮಧುವಾತಾ ಋತಾಯತೇ ಮಧು ಕ್ಷರಂತಿ ಸಿಂಧವಃ ಮಾಧ್ವೀರ್ನಸ್ಸನ್ತ್ವೋಷಧೀಃ ......ಗೋತ್ರಾನ್______ ಶರ್ಮಣಃ ಅಸ್ಮತ್ಪ್ರಪಿತಾಮಹಾನ್ ಸ್ವಧಾನಮಸ್ತರ್ಪಯಾಮಿ ಎಂದು [ಒಂದು ಅಥವಾ] ಮೂರಾವರ್ತಿ ತಿಲೋದಕವನ್ನು ಬಿಡುವುದು.

(h) ಮಧುನಕ್ತಮುತೋಷಸಿ ಮಧುಮತ್ಪಾರ್ಥಿವಗ್ಂ ರಜಃ ಮಧುದ್ಯೌರಸ್ತು ನಃ ಪಿತಾ ಎಂದು (*g*) ನಲ್ಲಿ ಹೇಳಿದಂತೆ ಮಾಡುವುದು.

(i) ಮಧುಮಾನ್ನೋ ವನಸ್ಪತಿರ್ಮಧುಮಾಗ್ಂ ಅಸ್ತು ಸೂರ್ಯಃ ಮಾಧ್ವೀರ್ಗಾವೋ ಭವನ್ತು ನಃ ಎಂದು (*g*) ನಲ್ಲಿ ಹೇಳಿದಂತೆ ಮಾಡುವುದು.

13. ಪಿತೃಪತ್ನೀವರ್ಗದವರಿಗೆ—ಮಂತ್ರಗಳನ್ನುಚ್ಚರಿಸದೇ ಕೆಳಗೆ ವಿವರಿಸಿರುವ ಕ್ರಮದಲ್ಲೇ ಮಾಡಬೇಕು.

(1) [ತಾಯಿಗೆ] ......ಗೋತ್ರಾಃ......ನಾಮ್ನೀಃ ಅಸ್ಮನ್ಮಾತೄಃ ಸ್ವಧಾನಮಸ್ತರ್ಪಯಾಮಿ ಎಂದು ಹೇಳಿ ಎಡಗಡೆ ಮೂಕುರ್ದರ್ಭೆಗಳಿಂದ ಮಾಡಿಟ್ಟಿರುವ ಭಾಗ್ನದಮೇಲೆ ಮೂರಾವರ್ತಿ ತಿಲೋದಕವನ್ನು ಮಾತ್ರ ಬಿಡಬೇಕು.

(2) [ತಾಯಿ ಅತ್ತೆಯರಿಗೆ]......ಗೋತ್ರಾಃ...... ನಾಮ್ನೀಃ ಅಸ್ಮತ್ಪಿತಾಮಹೀಃ ಸ್ವಧಾನಮಸ್ತರ್ಪಯಾಮಿ ಎಂದು [13 (1)] ರಲ್ಲಿ ಹೇಳಿದಂತೆ ಮಾಡುವುದು.

(3) [ತಾಯಿಅತ್ತೆಯ ಅತ್ತೇವರಿಗೆ]......ಗೋತ್ರಾಃ...... ......ನಾಮ್ನೀಃ ಅಸ್ಮತ್ಪ್ರಪಿತಾಮಹೀಃ ಸ್ವಧಾನಮಸ್ತರ್ಪಯಾಮಿ ಎಂದು [13 (1)] ರಲ್ಲಿ ಹೇಳಿದಂತೆ ಮಾಡುವುದು.

14. ಮಾತುಃ ಪಿತೃವರ್ಗದವರಿಗೆ

(1) [ತಾಯಿ ತಂದೆಯವರಿಗೆ] ಮೇಲೆ 12 (*a*) (*b*) (*c*) ರಲ್ಲಿ ಹೇಳಿದಂತೆ ಮಂತ್ರಗಳನ್ನು ಉಚ್ಚರಿಸಿ [ಈ ಮಂತ್ರೋಚ್ಚಾರಣೆಮಾಡುವಾಗ ಪ್ರತಿಯೊಂದು ಮಂತ್ರದಲ್ಲಿಯೂ "ಪಿತರಃ" ಎಂದು ಬರುವಕಡೆ "ಮಾತುಃ ಪಿತರಃ" ಎಂದು ಹೇಳಬೇಕು.] ......ಗೋತ್ರಾನ್______ ......ಶರ್ಮಣಃ ಅಸ್ಮನ್ಮಾತುಃಪಿತೄನ್ ಸ್ವಧಾನಮಸ್ತರ್ಪಯಾಮಿ ಎಂದು

ಬಲಗಡೆ ಬಡುದರ್ಭೆಗಳಿಂದ ಕಟ್ಟಲ್ಪಟ್ಟು ಇಟ್ಟಿರುವ ಭುಗ್ನದ ಮೇಲೆ ತಿಲತರ್ಪಣವನ್ನು ಕೊಡಬೇಕು.

(2) [ತಾಯಿಯ ತಂದೆಯ ತಂದೆಯವರಿಗೆ] ಮೇಲೆ 12 (d)(e) (f) ನಲ್ಲಿ ಹೇಳಿದಂತೆ ಮಂತ್ರಗಳನ್ನು ಉಚ್ಚರಿಸಿ ________ ಗೋತ್ರಾನ್ ________ ಶರ್ಮಣಃ ಅಸ್ಮನ್ಮಾತುಃ ಪಿತಾಮಹಾನ್ ಸ್ವಧಾನಮಸ್ತರ್ಪಯಾಮಿ ಎಂದು ತಿಲೋದಕವನ್ನು ಬಿಡಬೇಕು.

3. [ತಾಯಿಯ ಮುತ್ತಾತಂದರಿಗೆ] ಮೇಲೆ 12 (g), (h), (i), ನಲ್ಲಿ ಹೇಳಿದಂತೆ ಮಂತ್ರಗಳನ್ನು ಉಚ್ಚರಿಸಿ ________ ಗೋತ್ರಾನ್ ________ ಶರ್ಮಣಃ ಅಸ್ಮನ್ಮಾತುಃ ಪ್ರಪಿತಾಮಹಾನ್ ಸ್ವಧಾನಮಸ್ತರ್ಪಯಾಮಿ । ಎಂದು ತಿಲೋದಕವನ್ನು ಬಿಡಬೇಕು.

15. ಮಾತುಃ ಪಿತೃಪತ್ನೀವರ್ಗದವರಿಗೆ [ಇವರುಗಳಿಗೆ 13 ನೇ ವಿಧಿಯಲ್ಲಿ ಹೇಳಿದಂತೆ ಮಂತ್ರಗಳನ್ನು ಹೇಳದೇ ಗೋತ್ರ ಮತ್ತು ಹೆಸರುಗಳನ್ನು ಮಾತ್ರ ಹೇಳಬೇಕು.] ಮೇಲೆ 13 (1), (2), (3) ರಲ್ಲಿ ಹೇಳಿದಂತೆ ಒಬ್ಬೊಬ್ಬರಿಗೂ ಮೂರಾವರ್ತಿ ________ ಗೋತ್ರಾಃ, ________ ನಾಮ್ನೀಃ, ಅಸ್ಮನ್ಮಾತಾಮಹೀಃ, ಅಸ್ಮನ್ಮಾತುಃ ಪಿತಾಮಹೀಃ, ಅಸ್ಮನ್ಮಾತುಃಪ್ರಪಿತಾಮಹೀಃ ಸ್ವಧಾನಮಸ್ತರ್ಪಯಾಮಿ । ಎಂದು ಹೇಳಿ ಬಲಗಡೆ ಮೂರು ದರ್ಭೆಗಳಿಂದ ಕಟ್ಟಲ್ಪಟ್ಟ ಭುಗ್ನದಮೇಲೆ ತಿಲೋದಕವನ್ನು ಬಿಡಬೇಕು.

16. ಇತಿ ವರ್ಗದ್ವಯ ಪಿತೄನ್ ಸ್ವಧಾನಮಸ್ತರ್ಪಯಾಮಿ । ಜ್ಞಾತಾಜ್ಞಾತ ಪಿತೄನ್ ಸ್ವಧಾನಮಸ್ತರ್ಪಯಾಮಿ । ಜ್ಞಾತಾಜ್ಞಾತ ಪಿತೃಪತ್ನೀಃ ಸ್ವಧಾನಮಸ್ತರ್ಪಯಾಮಿ । ಎಂದು ನಾಲ್ಕು ಭುಗ್ನಗಳಮೇಲೂ ಮೂರಾವರ್ತಿ ತಿಲೋದಕವನ್ನು ಬಿಡಬೇಕು.

17. ಊರ್ಜಂವಹಂತೀರಮೃತಂ ________ ಪಿತೄನ್ । ಎಂದು ನಾಲ್ಕು ಭುಗ್ನಗಳ ಸುತ್ತಲೂ * ಪ್ರದಕ್ಷಿಣೆಯಾಗಿ ತಿಲೋದಕವನ್ನು ಬಿಟ್ಟು, ಎದ್ದು ನಿಂತುಕೊಂಡು "ತೃಪ್ಯತ, ತೃಪ್ಯತ, ತೃಪ್ಯತ" ಎಂದು ಉಚ್ಚರಿಸಿ, ದಕ್ಷಿಣಾಭಿಮುಖವಾಗಿ ಕೈಮುಗಿಯಬೇಕು.

18. ಪ್ರದಕ್ಷಿಣೆ ಮತ್ತು ಉಪಸ್ಥಾನ ಮಂತ್ರಗಳು.

ದಕ್ಷಿಣಾಭಿಮುಖವಾಗಿ ಎದ್ದು ನಿಂತುಕೊಂಡು, ಕೈಗಳನ್ನು ಮುಗಿಯುತ್ತಾ, ಉಪವೀತಿಯಲ್ಲಿ "ನಮೋ ವಃ ಪಿತರೋ ರಸಾಯ, ನಮೋ ವಃ ಪಿತರಃ ಶುಷ್ಮಾಯ, ನಮೋ ವಃ ಪಿತರೋ ಜೀವಾಯ, ನಮೋ ವಃ ಪಿತ

* ಕೆಲವರು ಪ್ರಾಚೀನಾವೀತಿಯಲ್ಲಿ ಅಪ್ರದಕ್ಷಿಣೆಯಾಗಿ ಮಾಡುವುದುಂಟು.

**ರಸ್ಸ್ವಧಾಯೈ, ನಮೋ ವಃ ಪಿತರೋ ಮನ್ಯವೇ, ನಮೋ ವಃ ಪಿತರೋ ಘೋರಾಯ, ಪಿತರೋ ನಮೋ ವಃ, ಯ ಏತಸ್ಮಿನ್ ಲೋಕೇ ಸ್ಥ ಯುಷ್ಮಾꣳಸ್ತೇಽನು, ಯೇಽಸ್ಮಿನ್ ಲೋಕೇ ಮಾಂ ತೇಽನು, ಯ ಏತಸ್ಮಿನ್ ಲೋಕೇ ಸ್ಥ ಯೂಯಂ ತೇಷಾಂ ವಸಿಷ್ಠಾ ಭೂಯಾಸ್ತ, ಯೇಽಸ್ಮಿನ್ ಲೋಕೇಽಹಂ ತೇಷಾಂ ವಸಿಷ್ಠೋ ಭೂಯಾಸಮ್॥ ವಾಜೇವಾಜೇಽವತ ವಾಜಿನೋ ನೋ ಧನೇಷು ವಿಪ್ರಾ ಅಮೃತಾ ಋತಜ್ಞಾಃ। ಅಸ್ಯ ಮಧ್ವಃ ಪಿಬತ ಮಾದಯಧ್ವಂ। ತೃಪ್ತಾ ಯಾತ ಪಥಿಭಿರ್ದೇವಯಾನೈಃ॥"** ಎಂದು ಹೇಳುತ್ತಾ ಭುಗ್ನಗಳನ್ನು ಮೂರಾವರ್ತಿ ಪ್ರದಕ್ಷಿಣೆ ಮಾಡಿ ನಮಸ್ಕರಿಸಿ ಅಭಿವಾದನವನ್ನು ಮಾಡಬೇಕು. **"ವರ್ಗದ್ವಯ ಪಿತೄನ್ ಯಥಾ ಸ್ಥಾನಂ ಪ್ರತಿಷ್ಠಾಪಯಾಮಿ"** ಎಂದು ಎಳ್ಳಿನಿಂದ ಅರ್ಚಿಸಬೇಕು. ಅನಂತರ,

19. ನಾಲ್ಕು ಭುಗ್ನಗಳ ಗಂಟನ್ನು ಬಿಚ್ಚಿ ಎಳ್ಳು ಮತ್ತು ದರ್ಭೆಗಳಸಹಿತ ಕೈಯಲ್ಲಿ ಹಿಡಿದುಕೊಂಡು **"ಯೇಷಾಂ ನ ಪಿತಾ ನ ಭ್ರಾತಾ, ನ ಬಂಧುರ್ನಾನ್ಯಗೋತ್ರಿಣಃ। ತೇ ತೃಪ್ತಿಮಖಿಲಾಂ ಯಾಂತು ಮಯಾ ತ್ಯಕ್ತೈಃ ಕುಶೈಸ್ತಿಲೈಃ॥** ಎಂದು ಹೇಳಿ ಉದಕ ಪೂರ್ವಕವಾಗಿ [ನದಿ, ಕೊಳ, ಕೆರೆ ಮುಂತಾದ ಶುದ್ಧವಾದ ಸ್ಥಳದಲ್ಲಿ] ಬಿಟ್ಟು ಬಿಡಬೇಕು. (**"ಯೇ ಕೇಚಾಸ್ಮತ್ಕುಲೇ ಜಾತಾಃ, ಅಪುತ್ರಾ ಗೋತ್ರಜಾ ಮೃತಾಃ। ತೇ ಗೃಹ್ಣಂತು ಮಯಾ ದತ್ತಂ, ವಸ್ತ್ರನಿಷ್ಪೀಡನೋದಕಮ್"॥** ಎಂದು ಕೆಲವರು ಹೇಳಿ ತಮ್ಮ ಸೊಂಟದಲ್ಲಿ ಕಟ್ಟಿಕೊಂಡಿರುವ ಒದ್ದೆ ವಸ್ತ್ರವನ್ನು ಹಿಂಡಿ ಆ ನೀರನ್ನು ಶುದ್ಧವಾದ ಸ್ಥಳದಲ್ಲಿ ಬಿಡುವುದುಂಟು.)

20. ಅನಂತರ ಉಪವೀತಿಯಲ್ಲಿ ಎರಡು ಆಚಮನಗಳನ್ನು ಮಾಡಿ ದೇವರು, ಗುರು ಹಿರಿಯರುಗಳಿಗೆ ಸಾಷ್ಟಾಂಗವಾಗಿ ನಮಸ್ಕರಿಸಿ ಅಭಿವಾದನವನ್ನು ಸಲ್ಲಿಸಬೇಕು.

**ಸೂಚನೆ:—** ಈ ತಿಲತರ್ಪಣವನ್ನು ಸ್ನಾನಮಾಡಿ ಪರಿಶುದ್ಧರಾಗಿ ಊರ್ಧ್ವಪುಂಡ್ರಗಳನ್ನು ಧರಿಸಿ (ಒದ್ದೆ ವಸ್ತ್ರಗಳನ್ನುಟ್ಟುಕೊಂಡು) ಮಾಡಬೇಕು. ಈ ಕರ್ಮವನ್ನು ಮಾತಾ ಪಿತೃಗಳಿರುವವರು ಮಾಡಬಾರದು. ಪಿತಾ ಹೋಗಿದ್ದರೆ ಮಾಡಲೇಬೇಕು.

ನವ ಕಾಂಡಋಷಿ ತರ್ಪಣವನ್ನೂ ಸಹ ಸ್ನಾನಮಾಡಿ ಒದ್ದೆ ಬಟ್ಟೆಯಲ್ಲಿಯೇ ಉಪಾಕರ್ಮಕಾಲದಲ್ಲಿ ಕೊಡಬೇಕು.

## ವರ್ಗದ್ವಯ ಪಿತೃತರ್ಪಣ ಕ್ರಮ

ಚಂದ್ರಗ್ರಹಣಕಾಲದಲ್ಲಿ ಗ್ರಹಣ ಬಿಡುತ್ತಿರುವಾಗಲೂ, ಸೂರ್ಯಗ್ರಹಣದಲ್ಲಿ ಹಿಡಿಯುತ್ತಿರುವಾಗಲೂ, ಮತ್ತು ಇತರ ಪರ್ವಕಾಲಗಳಲ್ಲಿಯೂ, ಆಯಾ ಕಾಲಕ್ಕೆ ಸರಿಯಾಗಿ ಯಥಾಶಾಸ್ತ್ರವಾಗಿ ಫಲಾಪೇಕ್ಷೆ ಇಲ್ಲದೇ ಭಕ್ತಿಯಿಂದ ಈ ಕರ್ಮವನ್ನು ಮಾಡಿ ಭಗವಂತನಾದ ಶ್ರೀಮನ್ನಾರಾಯಣನ ಪಾದಾರವಿಂದಗಳಲ್ಲಿ ಅರ್ಪಿಸಬೇಕು.

ಅಮಾವಾಸ್ಯೆಯಲ್ಲಿ ತರ್ಪಣಕ್ಕೆ ಸಂಕಲ್ಪಮಾಡುವಾಗ "ದರ್ಶಶ್ರಾದ್ಧಂ ತಿಲತರ್ಪಣರೂಪೇಣ (ಅದ್ಯ) ಕರಿಷ್ಯೇ" ಎಂದೂ; ಸೂರ್ಯ ಮತ್ತು ಚಂದ್ರಗ್ರಹಣಕಾಲಗಳಲ್ಲಿ "ಸೂರ್ಯೋಪರಾಗ ಅಥವಾ ಚಂದ್ರೋಪರಾಗ ಶ್ರಾದ್ಧಂ" ಎಂದೂ; ಮೇಷ ಸಂಕ್ರಮಣಕಾಲದಲ್ಲಿ "ಮೇಷವಿಷುವ ಶ್ರಾದ್ಧಂ" ಎಂದೂ; ಕರ್ಕಾಟಕ ಸಂಕ್ರಮಣಕಾಲದಲ್ಲಿ "ದಕ್ಷಿಣಾಯನ ಪುಣ್ಯಕಾಲ ಶ್ರಾದ್ಧಂ" ಎಂದೂ; ಮತ್ತು ಮಕರ ಸಂಕ್ರಮಣದಲ್ಲಿ "ಉತ್ತರಾಯಣ ಪುಣ್ಯಕಾಲ ಶ್ರಾದ್ಧಂ" ಎಂದೂ ಸಂಕಲ್ಪವನ್ನು ಮಾಡಿಕೊಳ್ಳುವಾಗ ಉಚ್ಚರಿಸಬೇಕು. ಕೆಲವರು ಸಂಕಲ್ಪವನ್ನು ಆರಂಭಿಸುವಾಗಲೇ ಪ್ರಾಚೀನಾವೀತಿಯಲ್ಲಿ ಯಜ್ಞೋಪವೀತವನ್ನು ಧರಿಸುತ್ತಾರೆ. "ಪಿತೃಪಿತಾಮಹ ಪ್ರಪಿತಾಮಹಾನಾಂ" ಎಂದು ಹೇಳುವಾಗಲೆಲ್ಲಾ ("ವಸುರುದ್ರಾದಿತ್ಯಸ್ವರೂಪಾಣಾಂ" ಎಂದೂ; ಪಿತೃಗಳಿಗೆ ತಿಲತರ್ಪಣ ಕೊಡುವಾಗ "ವಸುರೂಪಾನ್ ಅಸ್ಮತ್' ಪಿತೄನ್ ಸ್ವಧಾನಮಸ್ತರ್ಪಯಾಮಿ" ಎಂದೂ; ಪಿತಾಮಹರುಗಳಿಗೆ "ರುದ್ರರೂಪಾನ್ ಅಸ್ಮತ್ ಪಿತಾಮಹಾನ್" ಎಂದೂ; ಪ್ರಪಿತಾಮಹರುಗಳಿಗೆ "ಆದಿತ್ಯ ರೂಪಾನ್ ಅಸ್ಮತ್ಪ್ರಪಿತಾಮಹಾನ್" ಎಂದೂ; ಪತ್ನೀವರ್ಗದವರಿಗೆ—"ವಸುಪತ್ನೀರೂಪಾಃ ಅಸ್ಮನ್ಮಾತೃಃ; ರುದ್ರಪತ್ನೀರೂಪಾಃ ಅಸ್ಮತ್ಪಿತಾಮಹೀಃ; ಆದಿತ್ಯಪತ್ನೀ ರೂಪಾಃ ಅಸ್ಮತ್ ಪ್ರಪಿತಾಮಹೀಃ" ಎಂದೂ ಉಭಯ ವರ್ಗಗಳಲ್ಲಿಯೂ ಹೇಳಿ ತಿಲತರ್ಪಣವನ್ನು ಕೊಡುವುದುಂಟು.)

("ಭಗವಾನೇವ ಸ್ವಕೀಯೇನಾತ್ಮನಾ ಕರ್ತ್ರಾ ಸ್ವಕೀಯೈಶ್ಚ ಉಪಕರಣೈಃ ಸ್ವಾರಾಧನೈಕಪ್ರಯೋಜನಾಯ ಪರಮಪುರುಷಃ ಸರ್ವೇಶ್ವರಃ, ಸರ್ವಶೇಷೀ ಸ್ವಶೇಷಭೂತಮಿದಂ ವರ್ಗದ್ವಯಪಿತೄನ್ ಉದ್ದಿಶ್ಯ ದರ್ಶಶ್ರಾದ್ಧ ತಿಲತರ್ಪಣಾಖ್ಯಂ ಕರ್ಮ, ಸ್ವಸ್ಮೈ ಸ್ವಪ್ರೀತಯೇ ಸ್ವಯಮೇವ ಕಾರಿತವಾನ್॥ ಎಂದು ಸಾತ್ವಿಕತ್ಯಾಗವನ್ನು ಮಾಡುವದುಂಟು. ಈ ಶ್ಲೋಕವನ್ನೇ ಈ ಕರ್ಮ ಪ್ರಾರಂಭದಲ್ಲಿ 6 ನೇ ವಿಧಿಯಾದ ನಂತರ "ಕಾರಿತವಾನ್" ಎಂದು ಹೇಳುವುದಕ್ಕೆ ಬದಲಾಗಿ "ಕಾರಯತಿ" ಎಂದು ಹೇಳಬೇಕು.)

ಶ್ರೀವೈಷ್ಣವರು ಸೌರಮಾನರೀತಿಯಾಗಿ ಆಯಾ ತಿಥಿಗಳಲ್ಲಿ ಪಾರ್ವಣ ಶ್ರಾದ್ಧವನ್ನೇ ಮಾಡಬೇಕು. ಸಂಕಲ್ಪಶ್ರಾದ್ಧವನ್ನು ಮಾಡುವುದು ತಪ್ಪು; ಸಂಕಲ್ಪಶ್ರಾದ್ಧವನ್ನು ಗಯೆ ಮತ್ತು ಬದರಿಕಾಶ್ರಮ ಮುಂತಾದ ಪುಣ್ಯಸ್ಥಳಗಳಲ್ಲಿ ಪಿತೃಗಳಿಗೆ ಶ್ರಾದ್ಧ ಮಾಡಿದವರು ಮಾತ್ರ ದೇಹಾನುಕೂಲವಿಲ್ಲದಿದ್ದರೆ ಮಾಡಬಹುದೆಂದೂ ಅನೇಕ ಮಹರ್ಷಿಯರುಗಳ ಅಭಿಪ್ರಾಯ. ಈ ಭಾರತಭೂಮಿಯನ್ನು ಮೂರು ಮಾನಗಳಾಗಿ ವಿಂಗಡಿಸಿರುತ್ತಾರೆ. ಅದು ಹೇಗೆಂದರೆ— ದಕ್ಷಿಣ ದಿಕ್ಕಿನಲ್ಲಿರುವ ಮಲೆಗಾದ್ರಿಯಿಂದ ಶ್ರೀ ವೇಂಕಟಾದ್ರಿಯವರೆಗೂ "ಸೌರಮಾನ"ವೆಂದೂ, ಶ್ರೀವೇಂಕಟಾದ್ರಿಯಿಂದ ವಿಂಧ್ಯ ಗಿರಿಯವರೆಗೂ "ಚಾಂದ್ರಮಾನ"ವೆಂದೂ, ವಿಂಧ್ಯಪರ್ವತದಿಂದ ಹಿಮಾಲಯಾಪರ್ವತದವರೆಗೂ "ಬಾರ್ಹಸ್ಪತ್ಯಮಾನ"ವೆಂದೂ, ಶಾಸ್ತ್ರಜ್ಞರು ನಿಶ್ಚಯಿಸಿರುತ್ತಾರೆ. ಈ ಮೈಸೂರು ಸಂಸ್ಥಾನವು "ಸೌರಮಾನ" ಪ್ರದೇಶಕ್ಕೆ ಸೇರಿರುವುದರಿಂದ ಶ್ರೀವೈಷ್ಣವರೆಲ್ಲರೂ ಸೌರಮಾನ ಪದ್ಧತಿಯನ್ನೇ ಆಶ್ರಯಿಸಬೇಕು. ಆದುದರಿಂದ ಶ್ರಾದ್ಧ ಕರ್ಮಗಳನ್ನು ಸೌರಮಾನ ತಿಂಗಳಲ್ಲಿ ಬರುವ ಆಯಾ ತಿಥಿಯಲ್ಲೇ ಮಾಡಬೇಕೆಂದು ಅಭಿಪ್ರಾಯ.

। ಇತಿ ಮಾರ್ಗದ್ವಯಃ ಪಿತೃಕರ್ಮಣಾಂ ಸಂಪೂರ್ಣಂ ॥

---

# IV ಪುಣ್ಯಾಹವಾಚನ ಕ್ರಮ

1. ಕಾಲುಗಳನ್ನು ತೊಳೆದುಕೊಂಡು ಪರಿಶುದ್ಧರಾಗಿ ಎರಡು ಆಚಮನಗಳನ್ನು ಮಾಡಬೇಕು.

2. ತುದಿಯಿರುವ ಎರಡು X ಬಾಳೆಲೆಗಳನ್ನು ಹಾಸಿ ಅದರ ಮೇಲೆ ಅಕ್ಕಿಯನ್ನು ಹರಡಿ ಅಗ್ರವಿರುವ ಎರಡು ದರ್ಭೆಗಳನ್ನು ಪೂರ್ವಾಭಿಮುಖವಾಗಿ ಧರಿಸಿ ಅದರ ಮೇಲೆ ಒಂದು ಪರಿಶುದ್ಧವಾದ ಕುಂಭ ಪಾತ್ರೆಯನ್ನು ಇಡಬೇಕು.

3. ಕುಂಭದಲ್ಲಿ **ಆಪೋವಾ ಇದಗ್ಂ ಸರ್ವಂ ।** ಇತ್ಯಾದಿ ಅಥವಾ **(ಗಾಯತ್ರೀ)** ಮಂತ್ರವನ್ನು ಉಚ್ಚರಿಸುತ್ತಾ ತೀರ್ಥವನ್ನು ಬಿಡಬೇಕು.

---

X ಬಾಳೆಲೆ ಸಿಕ್ಕದಿದ್ದರೆ ಮುತ್ತುಗದ ಎಲೆಯನ್ನಾದರೂ ಅಥವಾ ಒಂದು ಪರಿಶುದ್ಧವಾದ ತಟ್ಟೆಯನ್ನಾದರೂ ಉಪಯೋಗಿಸಬಹುದು.

ಕುಂಭವನ್ನು ಗಂಧ ಪುಷ್ಪಗಳಿಂದ ಅಲಂಕರಿಸಿ ಮಾವಿನ ಸೊಪ್ಪನ್ನು ಧರಿಸಿ ಅದರಮೇಲೆ ಅರಿಶಿನ ಸವರಿದ ಒಂದು ತೆಂಗಿನಕಾಯನ್ನು ತುದಿಮೇಲ್ಮುಖವಾಗಿ ಮಾಡಿ ಧರಿಸಬೇಕು.

4. **ಸಂಕಲ್ಪ**— ದರ್ಭಾಸನದಮೇಲೆ ಕುಳಿತು ದರ್ಭೆ ಪವಿತ್ರವನ್ನು ಧರಿಸಿ ಮೂರು ಪ್ರಾಣಾಯಾಮಗಳನ್ನು ಮಾಡಿ (ಗುರುಗಳ ತನಿಯನ್‌ಗಳನ್ನು ಹೇಳಬಹುದು) "(ಓಂ) ಶುಕ್ಲಾಂಬರಧರಂ ವಿಷ್ಣುಂ……… ತಪಶಾಂತಯೇ ॥ (ಓಂ) ಶ್ರೀಗೋವಿಂದ, ಇತ್ಯಾದಿ, ಅಸ್ಯಾಂ ಶುಭತಿಥೌ ಶ್ರೀಭಗವದಾಜ್ಞಯಾ ಭಗವತ್ಕೈಂಕರ್ಯರೂಪಂ (ಶ್ರೀಮನ್ನಾರಾಯಣ ಪ್ರೀತ್ಯರ್ಥಂ) ಗೃಹಶುದ್ಧ್ಯರ್ಥಂ, ಶರೀರಶುದ್ಧ್ಯರ್ಥಂ, ಆತ್ಮಶುದ್ಧ್ಯರ್ಥಂ, ಸ್ಥಲಶುದ್ಧ್ಯರ್ಥಂ, ಸರ್ವೋಪಕರಣ ದ್ರವ್ಯಶುದ್ಧ್ಯರ್ಥಂ ಶುದ್ಧಿ ಪುಣ್ಯಾಹಂ ವಾಚಯಿಷ್ಯೇ ॥" ಎಂದು ಸಂಕಲ್ಪಿಸಿ;

5. "ಪುಣ್ಯಾಹೇ ಚತುರೋ ಬ್ರಾಹ್ಮಣಾನ್ (ಹಿರಣ್ಯೇನ) ತೋಷಯಿಷ್ಯೇ" ಎಂದು ಹೇಳಿ ಕೈಯಲ್ಲಿ ನಾಲ್ಕು ಮೂರು ಮೂರು ಕಾಸು ಬಿಲ್ಲೆಗಳನ್ನು ಧರಿಸಿ ಉದಕಪೂರ್ವಕ ಬಲಗಡೆ ಭೂಮಿಯಮೇಲೆ ಬಿಡಬೇಕು. ಆ ಕಾಸುಗಳನ್ನು ನಾಲ್ಕು ಜನ ಬ್ರಾಹ್ಮಣರುಗಳಿಗೆ ದಕ್ಷಿಣೆಯಾಗಿ ಕೊಡಬೇಕು. ಅನಂತರ ಬಲದಕೈಯಲ್ಲಿ 8 ಅಥವಾ 12 ದರ್ಭೆಗಳಿಂದ ಮಾಡಲ್ಪಟ್ಟ ಕೂರ್ಚವನ್ನು ಹಿಡಿದು ಕುಂಭವನ್ನು ಸ್ಪರ್ಶಿಸುತ್ತಾ ಕರ್ತೃವೂ ಮತ್ತು ಬ್ರಾಹ್ಮಣರುಗಳೂ ಈ ಪ್ರಕಾರ ಉಚ್ಚರಿಸಬೇಕು—

| ಕರ್ತೃ ಹೇಳುವ ವಚನಗಳು— | ಬ್ರಾಹ್ಮಣರುಹೇಳುವ ಪ್ರತಿ ವಚನಗಳು— |
|---|---|
| 1 ಸ್ವಾಮಿನಃ ಮನಸ್ಸಮಾಧೀಯತಾಂ. | 1 ಸಮಾಹಿತ ಮನಸಃ ಸ್ಮಃ. |
| 2 ಪ್ರಸೀದಂತು ಭವಂತಃ. | 2 ಪ್ರಸನ್ನಾಃ ಸ್ಮಃ. |
| 3 ಓಂ ಭವದ್ಭಿರನುಜ್ಞಾತಃ ಪುಣ್ಯಾಹಂ ವಾಚಯಿಷ್ಯೇ. | 3 ಓಂ ವಾಚ್ಯತಾಮಿತಿ. |
| 4 ಪುಣ್ಯಾಹಂ ಭವಂತೋ ಬ್ರುವಂತು | 4 ಪುಣ್ಯಾಹಮಸ್ತು. |
| 5 ಸ್ವಸ್ತಿ ಭವನ್ತೋ ಬ್ರುವನ್ತು. | 5 ಸ್ವಸ್ತ್ಯಸ್ತು. |
| 6 ಋದ್ಧಿಂ ಭವನ್ತೋ ಬ್ರುವನ್ತು [ಮೂರುಸಲ.] | 6 ಋಧ್ಯತಾಂ [ಮೂರುಸಲ]. |

6. ಅನಂತರ "ಅಸ್ತು" ಶಬ್ದದಿಂದ ಈ ಕೆಳಗೆ ಹೇಳಿರುವ ಮಂತ್ರಗಳನ್ನು ಹೇಳಿ ಕೂರ್ಚದಿಂದ, ಬೇರೊಂದು ಪಾತ್ರೆಯಲ್ಲಿ ಕುಂಭದ ತೀರ್ಥವನ್ನು ತೆಗೆದು ಬಿಡಬೇಕು. "ಓಂ ಋದ್ಧಿಃ, ಓಂ ಸಮೃದ್ಧಿಃ, ಪುಣ್ಯಾಹಸಮೃದ್ಧಿರಸ್ತು, ಶಿವಂ ಕರ್ಮಾಸ್ತು, ಪ್ರಜಾಪತಿಃ ಪ್ರೀಯತಾಂ, ಅಸ್ತು ಪ್ರೀಯತಾಂಭಗವಾನ್ ಪ್ರಜಾಪತಿಃ। ಶಾಂತಿರಸ್ತು, ಪುಷ್ಟಿರಸ್ತು, ಅವಿಘ್ನಮಸ್ತು; ಆಯುಷ್ಯಮಸ್ತು, ಆರೋಗ್ಯಮಸ್ತು, ಐಶ್ವರ್ಯಮಸ್ತು। ಗೋಬ್ರಾಹ್ಮಣೇಭ್ಯಃ ಶುಭಂ ಭವತು, ಇತಾನಾಂ ಬಹಿರ್ದೇಶೇ ಅರಿಷ್ಟನಿರಸನಮಸ್ತು, ಸರ್ವಾಸ್ಸಂಪದಸ್ಸಂತು, ಶುಭಾನಿ ವರ್ಧಂತಾಂ, ಶಾಂತಿಸ್ತುಷ್ಟಿಃಪುಷ್ಟಿಶ್ಚಾಸ್ತು" ॥ ಎಂದು ಹೇಳಿ ಆ ತೀರ್ಥವನ್ನು ಕುಂಭದಲ್ಲಿ "ಓಂಶಾಂತಿ ಶ್ಶಾಂತಿ ಶ್ಶಾಂತಿಃ" ಎಂದು ಉಚ್ಚರಿಸುತ್ತಾ ಬಿಡಬೇಕು.

7. ಆವಾಹನೆ—"ಇಮಂಮೇವರುಣ ಶ್ರುಧೀಹವ.................. ಆಯುಃ" ಅಸ್ಮಿನ್ ಕುಂಭೇ ವರುಣರೂಪಿಣಂ ಭಗವಂತಂ ಪುಂಡರೀಕಾಕ್ಷಂ ಶ್ರೀಮನ್ನಾರಾಯಣಂ ಧ್ಯಾಯಾಮಿ, ಆವಾಹಯಾಮಿ, ಆಸನಂ ಸಮರ್ಪಯಾಮಿ, ಪಾದಯೋಃ ಪಾದ್ಯಂ ಸಮರ್ಪಯಾಮಿ, ಹಸ್ತಯೋಃ ಅರ್ಘ್ಯಂ ಸಮರ್ಪಯಾಮಿ, ಆಚಮನೀಯಂ ಸಮರ್ಪಯಾಮಿ, ಇತಿ ಷೋಡಶೋಪಚಾರಪೂಜಾನ್ ಸಮರ್ಪಯಾಮಿ" ಎಂದು ಅಕ್ಷತೆಯಿಂದ ಪೂಜಿಸಬೇಕು. ಅನಂತರ ನಾಲ್ಕು ಜನ ಬ್ರಾಹ್ಮಣರುಗಳ ಕೈಗೆ ಎರಡೆರಡು ದರ್ಭೆಗಳನ್ನು ಕೊಟ್ಟು ಕೂರ್ಚದಿಂದ ಕುಂಭವನ್ನು ಕರತ್ರ ಸ್ಪರ್ಶಿಸುತ್ತಾ "ಓಂ ದಧಿಕ್ರಾವ್ಣೋ ಅಕಾರಿಷಂ...........ಆಪೋಹಿಷ್ಠಾಮಯೋಭುವಃ॥ ಹಿರಣ್ಯವರ್ಣಾಶ್ಶುಚಯಃ ಪಾವಕಾ.................. ಪವಮಾನಃ.............. ಮಾರ್ಜಯಂತ್ವಾ ಪುನಾತು ॥ ತಚ್ಛಂಯೋರಾವೃಣೀಮಹೇ.......................ಶಾಂತಿಃ ಶ್ಶಾಂತಿಃ ಶ್ಶಾಂತಿಃ ॥ ಎಂದು ಮಂತ್ರಗಳನ್ನು ಜಪಿಸಿದನಂತರ;

8. ಉತ್ತರ ಪೂಜೆ ಮತ್ತು ಉದ್ವಾಸನೆ—ವರುಣಾಯನಮಃ ಉತ್ತರಪೂಜಾಂ ಕರಿಷ್ಯೇ। "ಧ್ಯಾನಾವಾಹನಾದಿ ಷೋಡಶೋಪಚಾರಾನ್ ಸಮರ್ಪಯಾಮಿ" ಎಂದು ಅಕ್ಷತೆಯಿಂದ ಪೂಜಿಸಿ ಫಲತಾಂಬೂಲಗಳನ್ನು ನಿವೇದನಮಾಡಿ "ಯಥಾಸ್ಥಾನಂ ಪ್ರತಿಷ್ಠಾಪಯಾಮಿ, ಶೋಭನಾರ್ಥಂ ಕ್ಷೇಮಾಯ ಪುನರಾಗಮನಾಯ ಚ" ಎಂದು ಹೇಳಿ ಅನಂತರ "ಓಂ" ಎಂದು ಸ್ವಲ್ಪ ಕುಂಭವನ್ನು ಎತ್ತಿ ಕದಲಿಸಬೇಕು.

9. ಅನಂತರ ಕುಂಭವನ್ನು ಕೈಯಲ್ಲಿ ಎತ್ತಿಕೊಂಡು ಕೂರ್ಚದಿಂದ ತೀರ್ಥವನ್ನು ತೆಗೆದು "ವಾಸ್ತೋಷ್ಪತೇ......ಶಿವಗ್ಂ ಶಿವಂ" ಎಂಬುದನ್ನು ಹೇಳುತ್ತಾ ತನ್ನವರನ್ನೂ, ಗೃಹ ಮುಂತಾದವುಗಳನ್ನೂ ಪ್ರೋಕ್ಷಿಸಿ ಶುದ್ಧಿಮಾಡಿಕೊಳ್ಳಬೇಕು.

10. ಬಂದಿರುವ ಬ್ರಾಹ್ಮಣರುಗಳನ್ನು ಗಂಧ, ಪುಷ್ಪ, ಫಲ, ತಾಂಬೂಲಾದಿಗಳಿಂದ ಪೂಜಿಸಬಹುದು.

|| ಇತಿ ಪುಣ್ಯಾಹವಾಚನಕ್ರಮಃ ಸಂಪೂರ್ಣಃ ||

---

ಬ್ರಹ್ಮಚಾರಿಗಳು ಆಚರಿಸಬೇಕಾದ

# V ಪ್ರಥಮೋಪಾಕರ್ಮ ಗಾಯತ್ರೀಮಂತ್ರ ಜಪ ಹೋಮಕ್ರಮ

1. ಪರಿಶುದ್ಧರಾಗಿ ಎರಡು ಆಚಮನಗಳನ್ನು ಮಾಡಿ ದರ್ಭಾಸನದಮೇಲೆ ಕುಳಿತು ದರ್ಭೆ ಪವಿತ್ರವನ್ನು ಧರಿಸಿ ಮೂರು ಪ್ರಾಣಾಯಾಮಗಳನ್ನು ಮಾಡಿ. (ಅವರವರುಗಳ ತನಿಯಗಳನ್ನು ಅನುಸಂಧಿಸಬಹುದು.)

2. ಸಂಕಲ್ಪ—"(ಓಂ) **ಶುಕ್ಲಾಂಬರಧರಂ ವಿಷ್ಣುಂ ಇತ್ಯಾದಿ ಅಸ್ಯಾಂ ಶುಭತಿಥೌ ಶ್ರೀಭಗವದಾಜ್ಞಯಾ ಭಗವತ್ಕೈಂಕರ್ಯರೂಪಂ (ಶ್ರೀಮನ್ನಾರಾಯಣ ಪ್ರೀತ್ಯರ್ಥಂ) ಮಿಥ್ಯಾಧೀತಾಧ್ಯಯನ ದೋಷ ಪ್ರಾಯಶ್ಚಿತ್ತಾರ್ಥಂ ಅಷ್ಟೋತ್ತರಸಹಸ್ರಸಂಖ್ಯಯಾ ಗಾಯತ್ರೀ ಮಂತ್ರ ಜಪಂ (ಹೋಮಂ) ಕರಿಷ್ಯೇ**" ಎಂದು ಸಂಕಲ್ಪಿಸಿ;

3. ಅಗ್ನಿಯನ್ನು ಪ್ರತಿಷ್ಠೆಮಾಡಿ ಪೂಜಿಸಿ, ಪೂರ್ವದಿಕ್ಕಿನಿಂದ ಆರಂಭಿಸಿ ನಾಲ್ಕು ದಿಕ್ಕುಗಳಲ್ಲಿ ನಾಲ್ಕುನಾಲ್ಕು ಅಗ್ರವಿರುವ ಪರಿಸ್ತರಣ ದರ್ಭೆಗಳನ್ನು ಇಡಬೇಕು. "**ಅದಿತೇನು ಮನ್ಯಸ್ವ, ಅನುಮತೇನು ಮನ್ಯಸ್ವ, ಸರಸ್ವತೇನು ಮನ್ಯಸ್ವ, ದೇವಸವಿತಃ ಪ್ರಸುವ**" ಎಂದು ಉಚ್ಚರಿಸುತ್ತಾ ನಾಲ್ಕು ದಿಕ್ಕುಗಳಿಗೂ ತೀರ್ಥದಿಂದ ÷ ಪರಿಷೇಚನೆಮಾಡಬೇಕು.

---

÷ ೩೯ ನೆಯ ಪುಟದ ಟಿಪ್ಪಣಿಯಲ್ಲಿ ವಿವರಿಸಿರುವ ಪರಿಷೇಚನ ಕ್ರಮವನ್ನು ಗಮನಿಸಬಹುದು.

4. "ಓಂ ಭೂರ್ಭುವಸ್ಸುವಃ x ಓಂ। ತತ್ಸವಿತುರ್ವರೇಣ್ಯಂ ..........ಪ್ರಚೋದಯಾತ್ ॥ ಎಂದು ಒಂದೊಂದು ಗಾಯತ್ರೀ ಮಂತ್ರವನ್ನು ಉಚ್ಚರಿಸಿ ಪ್ರತಿ ಒಂದು * ಮುತ್ತುಗದ ಸಮಿತ್ತನ್ನು ತುಪ್ಪದಲ್ಲಿ ಅದ್ದಿ ("ಸ್ವಾಹಾ" ಎಂದು) ಅಗ್ನಿಯಲ್ಲಿ ಹೋಮ ಮಾಡಬೇಕು. ಹೀಗೆ 1008 ಆವರ್ತಿ ಹೋಮ ಮಾಡಬೇಕು.

5. ತೀರ್ಥದಿಂದ "ಅದಿತೇಽನ್ವಮಗ್‌ಂಸ್ಥಾಃ, ಅನುಮತೇಽನ್ವಮಗ್‌ಂಸ್ಥಾಃ, ಸರಸ್ವತೇಽನ್ವಮಗ್‌ಂಸ್ಥಾಃ, ದೇವಸವಿತಃ ಪ್ರಾಸಾವೀಃ" ಎಂದು ಪರಿಷೇಚನೆಮಾಡಿ "ಓಂ ಶ್ರೀವಿಷ್ಣವೇ ಸ್ವಾಹಾ, ಶ್ರೀವಿಷ್ಣವೇ ಪರಮಾತ್ಮನ ಇದಂ ನಮಮ" ಎಂದು ಒಂದು ಸಮಿತ್ತನ್ನು ತುಪ್ಪದಲ್ಲಿ ಅದ್ದಿ ಅಗ್ನಿಯಲ್ಲಿ ಹೋಮಮಾಡಬೇಕು.

6. ಉಪಸ್ಥಾನ—"ಉಪಸ್ಥಾನಂ ಕರಿಷ್ಯೇ" । ಎಂದು ಎದ್ದು ನಿಂತುಕೊಂಡು "ಅಗ್ನೇ ನಯ ಸುಪಥಾ ರಾಯೇ । ಅಸ್ಮಾನ್ ವಿಶ್ವಾನಿ ದೇವ ವಯುನಾನಿ ವಿದ್ವಾನ್। ಯುಯೋಧ್ಯಸ್ಮಜ್ಜುಹುರಾಣಮೇನೋ । ಭೂಯಿಷ್ಠಾಂ ತೇ ನಮ ಉಕ್ತಿಂ ವಿಧೇಮ ॥ ಅಗ್ನಯೇ ನಮಃ । ಮಂತ್ರಹೀನಂ ಕ್ರಿಯಾಹೀನಂ, ಭಕ್ತಿಹೀನಂ ಹುತಾಶನ । ಯದ್ಧುತಂತು ಮಯಾದೇವ ಪರಿಪೂರ್ಣಂ ತದಸ್ತು ತೇ । ಪ್ರಾಯಶ್ಚಿತ್ತಾನ್ಯಶೇಷಾಣಿ ತಪಃ ಕರ್ಮಾತ್ಮಕಾನಿ ವೈ । ಯಾನಿ ತೇಷಾಮಶೇಷಾಣಾಂ । ಕೃಷ್ಣಾನುಸ್ಮರಣಂ ಪರಂ" ॥ ಎಂದು ಹೇಳಿ ನಮಸ್ಕರಿಸಿ ಅಭಿವಾದನವನ್ನು ಮಾಡಬೇಕು. ಅನಂತರ ಕುಳಿತು ಯಜ್ಞಪುರುಷಾಯ ನಮಃ । ಆಜ್ಯೋಪಹಾರಂ ನಿವೇದಯಾಮಿ ॥ ಎಂದು ಪಾತ್ರೆಯಲ್ಲಿ ಮಿಕ್ಕಿರುವ ತುಪ್ಪವನ್ನೆಲ್ಲಾ ಅಗ್ನಿಯಲ್ಲಿ ಸಮರ್ಪಣೆ ಮಾಡಿ "ಯಥಾಸ್ಥಾನಂ ಪ್ರತಿಷ್ಠಾಪಯಾಮಿ" ಎಂದು ಅಗ್ನಿದೇವನನ್ನು ಅಕ್ಷತೆಯಿಂದ ಪೂಜಿಸಬೇಕು.

7. "ಕಾಯೇನ ವಾಚಾ..........ಸಮರ್ಪಯಾಮಿ ॥ ಸರ್ವಂ ಶ್ರೀಕೃಷ್ಣಾರ್ಪಣಮಸ್ತು ॥" ಎಂದು ಹೇಳಿ ಎದ್ದು ಅಗ್ನಿದೇವನಿಗೆ ಸಾಷ್ಟಾಂಗವಾಗಿ ನಮಸ್ಕರಿಸಬೇಕು.

---

x ಈ ವಿಧದಲ್ಲೇ "ಓಂ" ಎಂಬ ಪ್ರಣವಾಕ್ಷರವನ್ನು ಜಪಕಾಲದಲ್ಲಿ ಅನೇಕರು ಉಚ್ಚರಿಸುವುದಿಲ್ಲ; "ಓಂ ತತ್ಸವಿತುರ್ವರೇಣ್ಯಂ" ಎಂದು ಗಾಯತ್ರಿಯಾದುದಲ್ಲೂ ಮುಖ್ಯ ಬ್ರಹ್ಮಚಾರಿಗಳು, ಜಪಕಾಲದಲ್ಲೂ ಉಚ್ಚರಿಸುವುದುಂಟು; ಹಿರಿಯರ ಪದ್ಧತಿಗಳನ್ನು ಅನುಸರಿಸುವುದು ಉತ್ತಮ.

* ಹೋಮಕ್ಕೆ ಮುತ್ತುಗದ ಸಮಿತ್ತು ಸಿಕ್ಕದಿದ್ದರೆ ಅರಳೀಮರದ ಸಮಿತ್ತನ್ನಾದರೂ ಉಪಯೋಗಿಸಬಹುದು.

೮. ಅನಂತರ ವಟುವಿಗೆ ಆರತಿ, ಆಶೀರ್ವಾದ ಮುಂತಾದವುಗಳನ್ನು ಮಾಡಬಹುದು. ಬಂದ ಸಭಿಕರಿಗೆ ಫಲ, ತಾಂಬೂಲ, ಗಂಧ, ಪುಷ್ಪಗಳಿಂದ ಪೂಜಿಸಿ ಮರ್ಯಾದೆ ಮಾಡಬಹುದು.

॥ ಇತಿ ಪ್ರಥಮೋಪಾಕರ್ಮ ಗಾಯತ್ರೀ ಮಂತ್ರ ಜಪ ಹೋಮಃ ಸಂಪೂರ್ಣಃ ॥

---

## ಮೂರನೇ ಪರಿಚ್ಛೇದ

# I ಧರ್ಮಭೂತಜ್ಞಾನ ಸಂಗ್ರಹ

**ಧರ್ಮಭೂತಜ್ಞಾನವೆಂದರೆ—** ಸ್ವಯಂಪ್ರಕಾಶವುಳ್ಳ, ಅಚೇತನವಾದ ದ್ರವ್ಯರೂಪ ಜ್ಞಾನವು. ಇದು ಚೇತನನ ಬದ್ಧದೆಸೆಯಲ್ಲಿ ಅತ್ಯಲ್ಪವಾಗಿಯೂ, ಮುಕ್ತಿದೆಸೆಯಲ್ಲಿ, ಮೋಕ್ಷಾನಂತರ ಭಗವಂತನ ಅನುಗ್ರಹದಿಂದ ವಿಕಾಸವುಳ್ಳದ್ದಾಗಿಯೂ, ವಿಭುವಾಗಿಯೂ, ಸ್ವಯಂಪ್ರಕಾಶವುಳ್ಳದ್ದಾಗಿಯೂ, ಇರುವುದು. ಜ್ಞಾನವು [ತಿಳುವಳಿಕೆ] **ಜಾಗ್ರತ್, ಸ್ವಪ್ನ,** ಮತ್ತು **ಸುಷುಪ್ತಿ,** ಎಂದು ಮೂರು ತೆರನಾದ ಅವಸ್ಥೆಗಳಲ್ಲಿ ಸಂಚರಿಸುವುದು. ಜಾಗ್ರದವಸ್ಥೆಯಲ್ಲಿ ಹೊರಗಡೆ ವಿಷಯಗಳಲ್ಲಿಯೂ, ಸ್ವಪ್ನಾವಸ್ಥೆಯಲ್ಲಿ ಮನಸ್ಸಿನೊಳಗಣ ಸ್ವಪ್ನ ಪ್ರಪಂಚದಲ್ಲಿಯೂ ಪ್ರಕಾಶಿಸುತ್ತದೆ. ಆದರೆ ಸುಷುಪ್ತಿಯಲ್ಲಿ [ಗಾಢನಿದ್ರೆಯಲ್ಲಿ] ಒಳಗೂ, ಹೊರಗೂ, ಪ್ರಕಾಶಿಸದೇ ಆ ಗಾಢನಿದ್ರೆಯಲ್ಲಿ ಲೀನವಾಗಿರುವುದು. ಜೀವಿತದೆಸೆಯಲ್ಲಿ ಹೃದಯಸ್ಥಾನದಲ್ಲಿ ಸೂಕ್ಷ್ಮಶರೀರವು ಅಡಗಿರುವುದು. ಈ ಸೂಕ್ಷ್ಮಶರೀರವೇ ಜೀವಾತ್ಮ ಪರಮಾತ್ಮರುಗಳಿಗೂ, ಮತ್ತು × ಹನ್ನೊಂದು ಬಗೆಯ ಇಂದ್ರಿಯಾಂಶಗಳಿಗೂ ಆಧಾರವಾಗಿರುವುದು. ಶವದಂತೆ ಅಜ್ಞಾನವಾಗಿರುವ ಸ್ಥೂಲಶರೀರವು ಸೂಕ್ಷ್ಮಶರೀರದ ಸಹಾಯವಿಲ್ಲದೆ ವ್ಯಾಪಾರಗಳನ್ನು ಮಾಡಲಾಗುವುದಿಲ್ಲ. ಜಾಗ್ರದವಸ್ಥೆಯಲ್ಲಿ ಈ ಎರಡು ಶರೀರಗಳೂ ಕಾರ್ಯಗಳನ್ನು ಮಾಡುತ್ತವೆ. ಸ್ವಪ್ನಾವಸ್ಥೆಯಲ್ಲಿ ಸೂಕ್ಷ್ಮ ಶರೀರವು ಮಾತ್ರ ಕಾರ್ಯಗಳನ್ನು ಮಾಡುತ್ತದೆ. ಈ ಶರೀರಗಳೆರಡೂ ಸುಷುಪ್ತಿಯಲ್ಲಿ ಯಾವ ಕಾರ್ಯಗಳನ್ನೂ ಮಾಡುವುದಿಲ್ಲ. ಈ ಸ್ಥೂಲ ಮತ್ತು ಸೂಕ್ಷ್ಮಶರೀರಗಳ ಮಧ್ಯೆ "ಜ್ಞಾನನಾಡಿ" ಎಂಬ ವಿದ್ಯುಚ್ಛಕ್ತಿಯಂತೆ ಒಂದು ತಂತಿ [Electric Wire] ಇರುವುದು.

---

× ಜ್ಞಾನೇಂದ್ರಿಯಗಳು—5; ಕರ್ಮೇಂದ್ರಿಯಗಳು—5; ಮನಸ್ಸು—1=11 ಇಂದ್ರಿಯಗಳು. ಈ ವಿಚಾರಗಳು ಮುಂದೆ "ತತ್ತ್ವಜ್ಞಾನ ಸಂಗ್ರಹ" ದಲ್ಲಿ ವಿವರಿಸಲ್ಪಟ್ಟಿರುತ್ತೆ.

## ನಿತ್ಯ ನೈಮಿತ್ತಿಕಾಹ್ನಿಕ ಕ್ರಮ

ಈ ತಂತಿಯ ಮೂಲಕವಾಗಿಯೇ ಎರಡು ಶರೀರಗಳೂ ಎಲ್ಲಾ ವ್ಯಾಪಾರಗಳನ್ನು ಮಾಡುತ್ತವೆ. ಮೂರ್ಛಾವಸ್ಥೆಯಲ್ಲಿ ಜ್ಞಾನನಾಡಿಯು ಒಡೆದುಹೋಗಿ ಸೂಕ್ಷ್ಮಶರೀರವು ಅತ್ಯಲ್ಪಶಕ್ತಿಯುಳ್ಳದ್ದಾಗಿ ಅರ್ಧ ಮರಣಾವಸ್ಥೆಯನ್ನು ಹೊಂದಿರುವುದು. ಭಗವಂತನಾದ ಶ್ರೀಮನ್ನಾರಾಯಣನ ಅನುಗ್ರಹದಿಂದ ಜ್ಞಾನನಾಡಿಯ ಪ್ರಸರಣವು ಉಂಟಾದರೆ ಮೂರ್ಛಾವಸ್ಥೆಯು ಹೋಗಿ ಜಾಗ್ರದವಸ್ಥೆಯು ಉಂಟಾಗುವುದು. ಮರಣಾವಸ್ಥೆಯಲ್ಲಿ ಜ್ಞಾನನಾಡಿಯು ನಾಶಹೊಂದಿ ಗಿಣಿಯು ಗೂಡಿನಿಂದ [ಪಂಜರದಿಂದ] ಹೊರಗೆ ಹೊರಟುಹೋಗುವಂತೆ ಜೀವಾತ್ಮ ಪರಮಾತ್ಮರುಗಳಿಗೆ ವಾಸಸ್ಥಾನವಾದ ಸೂಕ್ಷ್ಮಶರೀರವು ಪಾಂಚಭೌತಿಕವಾದ ಈ ಸ್ಥೂಲಶರೀರವನ್ನು ಸುಷುಮ್ನಾ ನಾಡಿಯ ಮೂಲಕ ಊರ್ಧ್ವಮುಖವಾಗಿ ಬಿಟ್ಟುಹೋಗುವಾಗ * ಜೀವನು ತನ್ನ ಕರ್ಮಫಲಕ್ಕನುಸಾರವಾಗಿ (1) ಪೂರ್ವಪ್ರಜ್ಞೆ, (2) ತಾನು ಕಲಿತ ವಿದ್ಯೆ, (3) ಮನಸ್ಸು, ಮತ್ತು (4) ಹತ್ತು ಇಂದ್ರಿಯಗಳಂಶಸಹಿತವಾಗಿ ಪ್ರಯಾಣಮಾಡುವುದು. ಭಗವಂತನಾದ ಶ್ರೀಮನ್ನಾರಾಯಣನ ಅನುಗ್ರಹದಿಂದ ಕರ್ಮನಿವೃತ್ತಿಯಾಗಿದ್ದರೆ ಅರ್ಚಿರಾದಿ ಮಾರ್ಗದಲ್ಲಿ ತೆರಳಿ ವಿರಜಾನದಿ ಸ್ನಾನವಂ ಪಡೆದು ಜೀವನು ತನ್ನ ಸೂಕ್ಷ್ಮಶರೀರವನ್ನು ಅಲ್ಲಿ ತ್ಯಜಿಸಿ ಅಪ್ರಾಕೃತವಾದ ಚತುರ್ಭುಜಗಳುಳ್ಳ ದಿವ್ಯಶರೀರವನ್ನು ಪಡೆದು ಪುನರ್ಜನ್ಮರಹಿತವಾದ ವೈಕುಂಠಕ್ಕೆ ಹೋಗಿ ಶ್ರೀಮನ್ನಾರಾಯಣನ ಸಾನ್ನಿಧ್ಯದಲ್ಲಿ ನಿತ್ಯ ಕೈಂಕರ್ಯ ಸಾಮ್ರಾಜ್ಯವನ್ನು ಹೊಂದಿ ನಿರತಿಶಯಾನಂದ ಭೋಗವನ್ನು ಹೊಂದುತ್ತಾನೆ. ಕರ್ಮನಿವೃತ್ತಿಯಾಗದಿದ್ದರೆ ಧೂಮಾದಿ ಮಾರ್ಗವನ್ನು ಅನುಸರಿಸಿ ತನ್ನ ಕರ್ಮಫಲಕ್ಕೆ ತಕ್ಕಂತೆ ಆಯಾ ಲೋಕಗಳಿಗೆ ತೆರಳಿ ಸುಖದುಃಖಾದಿಗಳನ್ನು ಅನುಭವಿಸಿ, ಅನಂತರ ಮೇಘದಲ್ಲಿ ಸೇರಿ ಮಳೆಯ ಹನಿಗಳೊಂದಿಗೆ ಈ ಭೂಲೋಕದಲ್ಲಿ ಬಿದ್ದು ತೃಣಾದಿರೂಪವನ್ನು ಹೊಂದಿ ಪ್ರಾಣಿಗಳ ಹೇಯವಾದ ಗರ್ಭದಲ್ಲಿ ಪುನಃ ಪ್ರವೇಶಿಸಿ ಪ್ರಕೃತಿ ಸಂಬಂಧದಿಂದ ಆಯಾ ಕರ್ಮಬದ್ಧವಾದ ಶರೀರವನ್ನು ಪಡೆದು ಪೂರ್ವಕರ್ಮವಾಸನಾನುಗುಣವಾಗಿ ಪುಣ್ಯಪಾಪರೂಪವಾದ ಕರ್ಮಗಳಲ್ಲಿ ಪ್ರವರ್ತಿಸುತ್ತಾನೆ.

ಈ ಪ್ರಕಾರವಾಗಿ ಚೇತನನು ಅನೇಕಾನೇಕ ಕೋಟಿ ಜನ್ಮಗಳನ್ನು ಎತ್ತಿ ಈ ಸಂಸಾರ ಚಕ್ರದಲ್ಲಿ ಸಿಲುಕಿ ನರಳುತ್ತಾನೆ. × ಜಾತಿ ಮತ್ತು

* "ಶ್ರೀವೈಷ್ಣವಾಹ್ನಿಕ" ಪುಸ್ತಕದಲ್ಲಿ ಈ ವಿಚಾರಗಳು ವಿವರಿಸಲ್ಪಟ್ಟಿರುತ್ತವೆ.

× ಅಮರಸಿಂಹನ ನಾಮಲಿಂಗಾನುಶಾಸನ ೨ ನೇ ಕಾಂಡ ಶೂದ್ರವರ್ಗದಲ್ಲಿ ಹೇಳಿರುತ್ತೆ.

ವರ್ಣಸಂಕರಗಳಿಲ್ಲದೆ ಸತ್ಕುಲ ಪ್ರಸೂತರಾದ ಶ್ರೀವೈಷ್ಣವ ಜನ್ಮವು ಲಭಿಸುವುದು ಬಹಳ ದುರ್ಲಭ. ಸಂಸಾರಚಕ್ರದಲ್ಲಿ ಸಿಲುಕಿ ಪರಿತಪಿಸುತ್ತಿರುವ ಚೇತನನ ಮೇಲೆ ಭಗವಂತನ ಅಪೂರ್ವವಾದ ಅನುಗ್ರಹವು ಉಂಟಾದರೆ ಮಾತ್ರ ಇವನ ಅಜ್ಞಾನವು ತೊಲಗಿ ಅಹಂಕಾರ ಮಮಕಾರಗಳು ನಾಶವಾಗಿ ಪ್ರಪನ್ನಾನುಷ್ಠಾನವನ್ನು ಆಚರಿಸುತ್ತಾನೆ. ಸದ್ಗುರುವನ್ನು ಆಶ್ರಯಿಸಿ ಜ್ಞಾನ ಭಕ್ತಿ ವೈರಾಗ್ಯಾದಿಗಳನ್ನು ಪಡೆದು ಭಕ್ತಿ ಶ್ರದ್ಧೆಯಿಂದ ನಿತ್ಯ ನೈಮಿತ್ತಿಕ ಕರ್ಮಗಳನ್ನು ಫಲಾಪೇಕ್ಷೆಯಿಲ್ಲದೆ ಭಗವಂತನ ಆರಾಧನೆ ರೂಪವಾದ ಕೈಂಕರ್ಯಗಳೆಂದು ಭಾವಿಸಿ ಈ ಜನ್ಮದಲ್ಲೇ ಅವುಗಳನ್ನು ಮಾಡುತ್ತಾ ಬಂದರೆ ಜನ್ಮಾಂತ್ಯದಲ್ಲಿ ಪುನರ್ಜನ್ಮರಹಿತವಾದ ಮುಕ್ತಿಯನ್ನು ಪಡೆಯುತ್ತಾನೆ; ಮತ್ತು ಲಕ್ಷ್ಮೀಕಟಾಕ್ಷಕ್ಕೆ ಪಾತ್ರನಾಗಿ ಅಷ್ಟೈಶ್ವರ್ಯ ಸುಖಭೋಗಗಳನ್ನು ಅನುಭವಿಸುತ್ತಾನೆ. "ಜಾತಸ್ಯಮರಣಂ ಧ್ರುವಮ್" ಎಂಬಂತೆ ಹುಟ್ಟಿದವನು ಒಂದು ದಿವಸ ಸಾಯಲೇ ಬೇಕು. ಆದುದರಿಂದ ತನ್ನ ಅಲ್ಪವಾದ ಜೀವಿತಕಾಲವನ್ನು ಸಾತ್ವಿಕರೀತಿಯಲ್ಲಿ ಕಳೆಯುತ್ತಾ ಪ್ರಪನ್ನಾನುಷ್ಠಾನವನ್ನು ಕೈಗೊಂಡು ಕೃತಾರ್ಥರಾಗಲು ಪ್ರಯತ್ನಿಸಬೇಕು. ಇದಕ್ಕೆ ದ್ವಯಮಂತ್ರಾನುಸಂಧಾನವೇ ಆಧಾರವಾಗಿರುವುದು. **"ಅಹೋ! ದ್ವಯಸ್ಯ ಮಾಹಾತ್ಮ್ಯಂ, ಮಹೋವೀರ್ಯ ಮಹೋಬಲಂ। ಮಂತ್ರರತ್ನಂ ಶುಭಕರಂ, ವೇದಸಾರಂ ಸನಾತನಮ್॥ ಸರ್ವಪಾಪಕ್ಷಯಕರಂ, ಸರ್ವಪುಣ್ಯವಿವರ್ಧನಂ। ಶ್ರೀಕರಂ ಲೋಕವಶ್ಯಂ ಚ, ಸತ್ವಂ ಸಂಸಾರ ತಾರಕಮ್॥ ಕಾಶ್ಯಪಸಂಹಿತೆ.॥ ಅತೀತಾನಾಗತಜ್ಞಾನಂ, ಆತ್ಮತತ್ತ್ವಪ್ರಕಾಶಕಂ। ಸರ್ವವೇದಾರ್ಥ ವಿಜ್ಞಾನಂ, ಸರ್ವಶಾಸ್ತ್ರಾರ್ಥ ದರ್ಶನಮ್॥ † ಮಾನಸಂ ವಾಚಿಕಂ ಪಾಪಂ,ಕಾಯಿಕಂ ಚ ತ್ರಿಧಾಕೃತಂ। ದ್ವಯ ಸ್ಮರಣಮಾತ್ರೇಣ ನಾಶಂ ಯಾಂತಿ ಸುನಿಶ್ಚಯಮ್॥ ಪಾಂಚರಾತ್ರೇ॥ "ಸರ್ವೇಷಾಮೇವ ಮಂತ್ರಾಣಾಂ ಮಂತ್ರರತ್ನಂ ಶುಭಾವಹಂ। ಸಕೃತ್ಸ್ಮರಣಮಾತ್ರೇಣ ದದಾತಿ ಪರಮಂ ಪದಮ್॥ ಮಂತ್ರರತ್ನಂ ದ್ವಯಂ ನ್ಯಾಸಃ ಪ್ರಪತ್ತಿಶ್ಶರಣಾಗತಿಃ। ಲಕ್ಷ್ಮೀನಾರಾಯಣಾಯೇತಿ ಹಿತಂ ಸರ್ವಫಲಪ್ರದಮ್॥"** ಈ ಪ್ರಮಾಣಗಳ ಆಧಾರದಮೇಲೆಯೂ ಶ್ರೀರಾಮಾನುಜಾಚಾರ್ಯರ ಅಪ್ಪಣೆಯಂತೆಯೂ ಶ್ರೀವೈಷ್ಣವ ಚೇತನನು ತನ್ನ ಜೀವಿತಕಾಲದಲ್ಲಿ ದ್ವಯಮಂತ್ರವನ್ನು ಸದಾ ಅನುಸಂಧಿಸುತ್ತಾ ಉದ್ಧಾರವಾಗಬೇಕು.

---

† ವಾಚಿಕಪಾಪ– [illegible] ಹೇಳುವುದು, [illegible] ಕಲ್ಪಿಸುವುದು, ಮತ್ತು [illegible] ಇತ್ಯಾದಿ [illegible]ವುದು.

# ನಿತ್ಯ ನೈಮಿತ್ತಿಕಾಹ್ನಿಕ ಕ್ರಮ

× ಜೀವಾತ್ಮ ಪರಮಾತ್ಮರುಗಳ ಭೇದಗಳಿದ್ದರೂ ಹೂವೂ ಪರಿಮಳವೂ ಇರುವಂತೆ ಒಂದಿಲ್ಲದೆ ಮತ್ತೊಂದಿರುವುದಿಲ್ಲ. ಜ್ಞಾನಾನಂದಮಯನಾದ ಜೀವನು ಪ್ರಕೃತಿಗೆ ವಶನಾಗಿ ತನ್ನ ಪೂರ್ವ ಜನ್ಮವಾಸನಾನುಸಾರವಾಗಿ ಪುಣ್ಯಪಾಪಗಳನ್ನು ಮಾಡುತ್ತಾ ಸುಖದುಃಖಾದಿಗಳನ್ನು ಅನುಭವಿಸುತ್ತಾನೆ. ಆದರೆ ಪರಮಾತ್ಮನಿಗೆ ತಾವರೆ ಎಲೆಯ ಮೇಲಿನ ನೀರಿನಂತೆ ಇವುಗಳಲ್ಲಿ ಯಾವುದೂ ಅಂಟುವುದಿಲ್ಲ. ಅವನು ಸ್ವಯಂಪ್ರಕಾಶಕನು ಮತ್ತು ಸ್ವೇಚ್ಛಾಪುರುಷನು. ಅವನ ಮಹಿಮೆಯನ್ನೂ, ಕಲ್ಯಾಣಗುಣಗಳನ್ನೂ ಹೇಳಲು ಬ್ರಹ್ಮಾದಿಗಳಿಂದಲೂ ಸಾಧ್ಯವಿಲ್ಲ. ಜೀವಾತ್ಮನು ಇರುವ ಕಡೆ ಪರಮಾತ್ಮನು ಇದ್ದೇ ಇರುವನು. ಇವರಿಬ್ಬರಿಗೂ * ಒಂಭತ್ತು ವಿಧಗಳಾದ ಪರಸ್ಪರ ಸಂಬಂಧಗಳು ಇರುವುವು. ಇವರಿಬ್ಬರೂ ನಾಶರಹಿತರು. ಜೀವನು ಆಶ್ರಯಿಸಿದ ಈ ಶರೀರವು ನಾಶವಾಗುವುದೇ ವಿನಾ ಅವನು ಯಾವಾಗಲೂ ನಾಶವಾಗುವುದಿಲ್ಲವೆಂದು ತಿಳಿಯಬೇಕು. ಆದುದರಿಂದ ಎಲ್ಲಾ ದೇವತೆಗಳಿಗಿಂತಲೂ ಪರಮಾತ್ಮನಾದ ಶ್ರೀಮನ್ನಾರಾಯಣನೇ ಪರದೈವವು, ಅವನೇ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣಕರ್ತನು. ಅವನೇ ಅಖಿಲಾಂಡಕೋಟಿಬ್ರಹ್ಮಾಂಡ ನಾಯಕನೆಂದು ತಿಳಿದು ಶ್ರೀವೈಷ್ಣವರು ಅವನ ಪಾದಾರವಿಂದಗಳಲ್ಲಿ ಶ್ರೀಭಗವದ್ಗೀತಾ ವಾಕ್ಯದಂತೆ ಫಲಾಪೇಕ್ಷೆಯಿಲ್ಲದೆ ಎಲ್ಲಾ ವಿಧವಾದ ಸಾತ್ವಿಕ ಕರ್ಮಗಳನ್ನು ದಿನನಿತ್ಯ ಭಕ್ತಿಯಿಂದ ಮಾಡಿ ಅರ್ಪಿಸಿದಂತೆ ಭಾವಿಸಬೇಕು, ಮತ್ತು ಸದಾ ದ್ವಯಮಂತ್ರಾನುಸಂಧಾನವನ್ನೂ ಮಾಡುತ್ತಾ, ತಮ್ಮ ಅಲ್ಪ ಜೀವಿತಕಾಲವನ್ನು ಸಾತ್ವಿಕರೀತಿಯಲ್ಲಿ ಸಹವಾಸವನ್ನು ಮಾಡಿ ಕಳೆಯುತ್ತಾ ಭಗವಂತನ ಗುಣ ಕಥನಗಳನ್ನು ಧ್ಯಾನಿಸುತ್ತಾ ಕೃತಾರ್ಥರಾಗಬೇಕು. ಕರ್ಮ, ಜ್ಞಾನ, ಭಕ್ತಿ, ವೈರಾಗ್ಯ (ಪ್ರಪತ್ತಿ) ಮತ್ತು ಆಚಾರ್ಯಾಭಿಮಾನಗಳೇ ಶ್ರೀವೈಷ್ಣವರು ಉದ್ಧಾರವಾಗಲು ಮುಖ್ಯಗುಣ ಎಂದು ಅರಿತು ನಡೆದುಕೊಳ್ಳಬೇಕು.

---

× ಗೀತಾ ೨—14, ರಿಂದ 28 ರವರೆಗೂ; 7-5; 8—9, 20, 21; 13—2, 15, 17, 18; 18—14, 15 ಮತ್ತು 16 ನೇ ಶ್ಲೋಕಗಳನ್ನು ನೋಡಬಹುದು.

* ಪರಮಾತ್ಮನು — ಪಿತೃ (ವಿಶೇಷ್ಯ) ರಕ್ಷಕ, ಶೇಷಿ, ಭರ್ತೃ, ಜ್ಞೇಯ, ಸ್ವಾಮಿ, ಆಧಾರ, ಆತ್ಮ, ಭೋಕ್ತೃ ॥

ಜೀವಾತ್ಮನು — ಪುತ್ರ (ವಿಶೇಷಣ) ರಕ್ಷ್ಯ, ಶೇಷ, ಭಾರ್ಯೆ, ಜ್ಞಾತೃ, ಸ್ವತ್ತು (ಸೊತ್ತು), ಆಧೇಯ, ಶರೀರ, ಭೋಗ್ಯ

। ಇತಿ ಧರ್ಮ ಪ್ರಕಾಶಿಕಾಸ್ಯ ಸಂಗ್ರಹಂ ಸಂಪೂರ್ಣಮ್ ॥

# II ಭಗವಂತನ ದಿವ್ಯಗುಣಗಳು

ಭಗವಂತನಾದ ಶ್ರೀಮನ್ನಾರಾಯಣನಿಗೆ ಜ್ಞಾನ, ಶಕ್ತಿ, ಬಲ, ಐಶ್ವರ್ಯ, ವೀರ್ಯ ಮತ್ತು ತೇಜಸ್ಸು ಎಂಬ ಆರು ಮುಖ್ಯ ಗುಣಗಳಿರುವುವು. ಇವನ ಅನಂತಾನಂತ ಕಲ್ಯಾಣಗುಣಗಳಲ್ಲಿ ಸ್ಥೈರ್ಯ, ಧೈರ್ಯ, ಪರಾಕ್ರಮ, ವಾತ್ಸಲ್ಯ, ಸೌಶೀಲ್ಯ, ಮಾರ್ದವ, ಸೌಹಾರ್ದ, ಕಾರುಣ್ಯ, ಮಾಧುರ್ಯ, ಸೌಲಭ್ಯ, ಗಾಂಭೀರ್ಯ ಮುಂತಾದ ಅನಂತಗುಣಗಳು ನೆಲೆಗೊಂಡಿರುವುವು. ಲಕ್ಷ್ಮೀದೇವಿಯ ಪುರುಷಕಾರದಿಂದ—ವಾತ್ಸಲ್ಯ, ಸ್ವಾಮಿತ್ವ, ಸೌಶೀಲ್ಯ ಮತ್ತು ಸೌಲಭ್ಯಗುಣಗಳು ಭಗವಂತನಿಗೆ ತಲೆದೋರಿ ಚೇತನನ ಅಪರಾಧಗಳನ್ನು ಮನ್ನಿಸುವಂತೆ ಮಾಡುವುದು. ಜ್ಞಾನ, ಶಕ್ತಿ ಮುಂತಾದವು—ತನ್ನನ್ನು ಆಶ್ರಯಿಸಿದವರ ಕಾರ್ಯಗಳನ್ನು ನೆರವೇರಿಸುವುದು; ಅದು ಹೇಗೆಂದರೆ—ಜ್ಞಾನವು—ಅಜ್ಞರಿಗೆ; ಶಕ್ತಿ—ಅಶಕ್ತರಿಗೆ; ಕ್ಷಮೆ—ಅಪರಾಧಿಗಳಿಗೆ; ಕೃಪೆ—ದುಃಖಿಗಳಿಗೆ; ವಾತ್ಸಲ್ಯ—ದೋಷಿಗಳಿಗೆ; ಸೌಶೀಲ್ಯ—ಮಂದಮತಿಗಳಿಗೆ; ಆರ್ಜವ—ಕುಟಿಲಮತಿಗಳಿಗೆ; ಸೌಹಾರ್ದ—ದುಷ್ಟಹೃದಯವುಳ್ಳವರಿಗೆ; ಮಾರ್ದವ—ತನ್ನನ್ನು ಅಗಲಿದರೆ ಜೀವಿಸಿರಲಾರದವರಿಗೆ; ಸೌಲಭ್ಯ—ತನ್ನನ್ನು ಕಣ್ಣಾರೆ ನೋಡಿ ಕೈಂಕರ್ಯಗಳನ್ನು ಮಾಡಬೇಕೆಂದು ಆಶೆಪಡುವವರಿಗೆ (ಅರ್ಚಾರೂಪಿಯಾಗಿರುವಿಕೆ). ಈ ಪ್ರಕಾರ ಭಗವಂತನ ಗುಣಗಳು ಕಾರ್ಯಕರವಾಗುವುದರಿಂದ ಜಾತಿ ಭೇದಗಳಿಲ್ಲದೆ ಎಲ್ಲರೂ ಆ ಭಗವಂತನಾದ ಶ್ರೀಮನ್ನಾರಾಯಣನನ್ನು ಶ್ರದ್ಧಾಭಕ್ತಿಗಳಿಂದ ಆಶ್ರಯಿಸಿ ಉದ್ಧಾರವಾಗಬೇಕು. ಇವುಗಳು ಶ್ರೀಲಕ್ಷ್ಮೀದೇವಿಯ ಕಟಾಕ್ಷದಿಂದಲೂ, ಆಚಾರ್ಯಾಭಿಮಾನದಿಂದಲೂ ಸುಲಭವಾಗಿ ಲಭಿಸುವುವು. ಅವರವರ ವರ್ಣಾಶ್ರಮ ಧರ್ಮಕ್ಕನುಸಾರವಾಗಿ ಭಕ್ತಿಯಿಂದ ನಿತ್ಯ ನೈಮಿತ್ತಿಕ ಕರ್ಮಗಳನ್ನು ಮಾಡಿ ಭಗವಂತನ ಪಾದಾರವಿಂದಗಳಲ್ಲಿ ಫಲಾಪೇಕ್ಷೆಯಿಲ್ಲದೆ ಅರ್ಪಿಸಿ ಕೃತಾರ್ಥರಾಗಬೇಕು.

॥ ಭಗವಂತನ ದಿವ್ಯಗುಣಗಳು ಸಂಪೂರ್ಣ ॥

# III ತತ್ತ್ವ ಸಂಶಯ ನಿವಾರಣೆ

ಶ್ರೀ ರಾಮಾನುಜಾಚಾರ್ಯರು ಅದ್ವೈತ ಮತ ಪ್ರಚಾರಕರಾದ **ಯಾದವ ಪ್ರಕಾಶಮುನಿಗಳ** ಗುರುಕುಲವಾಸದಿಂದ ನಿವೃತ್ತರಾದನಂತರ ತಮ್ಮ ತಾಯಿಯ ಅಪ್ಪಣೆಯಂತೆ ಕಾಂಚೀಪುರದಲ್ಲಿ ಶ್ರೀ ವರದರಾಜ ದೇವರಿಗೆ ಅತ್ಯಂತ ಅಂತರಂಗ ಪರಮಭಕ್ತರಾದ * **ತಿರುಕಚ್ಚಿನಂಬಿ**ಗಳನ್ನು (ಕಾಂಚೀಪೂರ್ಣರನ್ನು) ಆಶ್ರಯಿಸಿ ಅವರ ಮೂಲಕ ತನ್ನ ಮನಸ್ಸಲ್ಲಿ ಬಹಳಕಾಲದಿಂದ ಬಾಧಿಸುತ್ತಿರುವ (ಈ ಕೆಳಗೆ ವಿವರಿಸಿರುವ) ಕೆಲವು ತತ್ತ್ವವಿಚಾರಗಳನ್ನು ಭಗವಂತನ ಅನುಗ್ರಹದಿಂದ ತಿಳಿದುಕೊಂಡು ಕೃತಾರ್ಥರಾದರು. ಅದೇನೆಂದರೆ:—

| ಶ್ರೀ ರಾಮಾನುಜಾಚಾರ್ಯರ ಮನೋಪ್ರಶ್ನೆ | ಶ್ರೀ ವರದರಾಜದೇವರ ಉತ್ತರ |
|---|---|
| 1. ಪರತತ್ತ್ವ ಯಾವುದು? | ಪರತತ್ತ್ವ ನಾನೇ. |
| 2. ಜೀವಾತ್ಮ ಪರಮಾತ್ಮರುಗಳಿಗೆ ಭೇದವುಂಟೇ? | ಭೇದವುಂಟು. |
| 3. ಮೋಕ್ಷಕ್ಕೆ ಸುಲಭೋಪಾಯ ಯಾವುದು? | ಪ್ರಪತ್ತಿಮಾರ್ಗವೇ ಮೋಕ್ಷಕ್ಕೆ ಸುಲಭೋಪಾಯವು. |
| 4. ಅಂತಿಮಕಾಲದಲ್ಲಿ ಭಗವಂತನ ಸ್ಮೃತಿ ಅವಶ್ಯಕವೇ? | † ಅವಶ್ಯವಿಲ್ಲ. |
| 5. ಅಂಥಾವರಿಗೆ ಮೋಕ್ಷವುಂಟೇ? | † ಮೋಕ್ಷವುಂಟು. |
| 6. (ಪ್ರತಿನಿತ್ಯ ಕಾಲಕ್ಷೇಪವನ್ನು ಆಚರಿಸಲು) ನಾನು ಯಾವ ಗುರುವನ್ನು ಆಶ್ರಯಿಸಬೇಕು? | ಪೆರಿಯನಂಬಿಗಳನ್ನು (ಮಹಾಪೂರ್ಣರು) ಆಶ್ರಯಿಸಬೇಕು. |

ಈ ಪ್ರಕಾರ ಶ್ರೀ ರಾಮಾನುಜಾಚಾರ್ಯರು ಭಗವಂತನ ಆಜ್ಞೆಯನ್ನು ಅನುಸರಿಸಿ ಪೆರಿಯನಂಬಿಗಳನ್ನು ಅವರ ಪತ್ನೀ ಸಮೇತರಾಗಿ **ಮಧುರಾಂತಕದಲ್ಲಿ** ಅಕಸ್ಮಾತ್ತಾಗಿ ಸಂದರ್ಶಿಸಿ ಅವರಿಂದ ಪಂಚಸಂಸ್ಕಾರಗಳನ್ನು ಪಡೆದು ವಿಶಿಷ್ಟಾದ್ವೈತ ಮತವನ್ನು ಅವಲಂಬಿಸಿ ಕೃತಾರ್ಥರಾದರು. ಶ್ರೀ ರಾಮಾನುಜಾಚಾರ್ಯರು ಪೂರ್ವದಲ್ಲಿ ~~ಅದ್ವೈತ ಮತಾವಲಂಬಿಗಳಾಗಿದ್ದ~~ ಭಾಗವತೋತ್ತಮರಾದ ~~ಅನಂತ~~ಗೋವಿಂದಯಾಜಿಗಳ ಮಕ್ಕಳು. ಭಗವಂತನ ಆಜ್ಞೆಯಂತೆ ಶ್ರೀ ಯಾದವಪ್ರಕಾಶಮುನಿಗಳು ತಮ್ಮ ಅದ್ವೈತ ಮತವನ್ನು ತ್ಯಜಿಸಿ ಶ್ರೀ ರಾಮಾನುಜಾಚಾರ್ಯರನ್ನು ಆಶ್ರಯಿಸಿ ವಿಶಿಷ್ಟಾದ್ವೈತ ಮತವನ್ನು ಅವಲಂಬಿಸಿ **"ಗೋವಿಂದ ಜೀಯರು"** ಎಂದು ನಾಮಾಂಕಿತವನ್ನು ಪಡೆದು ತನ್ನ ವೃದ್ಧಾಪ್ಯಕಾಲವನ್ನು ಕಳೆದು ಕೃತಾರ್ಥರಾದರು.

---

* ಇವರು ಶ್ರೀವೈಶ್ಯಸಂಪ್ರದಾಯದವರ ಸಮೂಹದಲ್ಲಿ ಜನಿಸಿದವರು.

† ಎರಡು ಉತ್ತರಗಳು ಪ್ರಪನ್ನನಿಗೇ ಅನ್ವಯಿಸುವುದೆಂದು ಭಾವವು.

॥ ತತ್ತ್ವ ಸಂಶಯ ನಿವಾರಣೆ ಸಂಪೂರ್ಣ ॥